ಬುಧವಾರ, ಫೆಬ್ರುವರಿ 8, 2023 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂದಹಾಸ
ನವದೆಹಲಿಯಲ್ಲಿ ಮಂಗಳವಾರ ನಡೆದ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದ ಬಾಲಿವುಡ್ ನಟ ಕಾರ್ತಿಕ್ ಆರ್ಯನ್





ಸ್ಮರಿಸುತ್ತಿದ್ದೇವೆ
ಕೋಥ ಕೃಷ್ಣಯ್ಯ ಚೆಟ್ಟಿ
ನಮ್ಮ ಸಂಸ್ಥಾಪಕರು

ಸಿಕೆಸಿ ಗ್ರೂಪ್ | 150 ವರ್ಷಗಳು

ಸಂಸ್ಥಾಪಕರ ದಿನದ ಸಂಭ್ರಮಾಚರಣೆ

ಕೋಥ ಕೃಷ್ಣಯ್ಯ ಚೆಟ್ಟಿ, ಕಂಪನಿಗಿಂತ, ಹೆಚ್ಚಿನದಾದ ದೃಷ್ಟಿಕೋನವನ್ನು ಸ್ಥಾಪಿಸಿದ ಮೇರು ವ್ಯಕ್ತಿ.

ಆ ದೃಷ್ಟಿಕೋನ ಇಂದಿಗೆ 150 ವರ್ಷಗಳನ್ನು ಪೂರೈಸಿ ಮುನ್ನಡೆಯುತ್ತಲಿದೆ. ಈ ನಮ್ಮ ಸಂಸ್ಥಾಪಕರ ದೃಷ್ಟಿಕೋನವು ಸುಂದರ, ಸೊಬಗಿನ, ಸೃಜನಶೀಲ ಆಭರಣಗಳ ಉಗಮಕ್ಕೆ ನಾಂದಿಯಾಗಿದೆ. ಇದೇ ಸಂಪ್ರದಾಯದಲ್ಲಿ ಅವರು ನಿರಂತರವಾಗಿ ಮುಂದುವರಿದ ಕಾರಣ, ಉದ್ಯಮ ಕೂಡ ಪ್ರಗತಿ ಪಥದಲ್ಲಿ ಸಾಗಿತು. ತಮ್ಮ ಶ್ರಮಕ್ಕೆ ತಕ್ಕಂತೆ ಘನತೆವೆತ್ತ ಮೈಸೂರು ಮಹಾರಾಜರು ಮತ್ತು ದಕ್ಷಿಣ ಭಾರತ, ಮಧ್ಯ ಭಾರತ ಹಾಗು ಕರ್ನಾಟಕದ 21 ರಾಜಮನೆತನಗಳಂತಹ ಪ್ರತಿಷ್ಠಿತ ಗ್ರಾಹಕರು ಲಭಿಸಿದ್ದು ಸೋಜಿಗವೇನಲ್ಲ! ಇಂದಿಗೂ ನಾವು ಅವರು ಹಾಕಿಕೊಟ್ಟಿರುವ ತಡೆಮುಕ್ತ, ನಿರ್ವಿಘ್ನ ಮಾರ್ಗವನ್ನು ಅನುಸರಿಸುತ್ತ, ಅವರ ದೃಷ್ಟಿಕೋನವನ್ನು ಬಲಪಡಿಸುತ್ತಿದ್ದೇವೆ.



ಕ್ರಿ.ಶ. 1869



ಕೋಥ ಕೃಷ್ಣಯ್ಯ ಚೆಟ್ಟಿಯವರು ತಮ್ಮ ವ್ಯಾಪಾರ ನಿಮಿತ್ತ ಬಳಸಿದ ಮೊಟ್ಟ ಮೊದಲ ಉಪಕರಣ ಒಂದು ಬೈಸಿಕಲ್. ಅದರಲ್ಲಿ ಅವರು ಬೆಂಗಳೂರಿನ ಬ್ರಿಟಿಷ್ ನಿವಾಸಿಗಳಿಗೆ ಬಣ್ಣದ ಮಣಿಮಾಲೆಗಳನ್ನು ಮಾರಾಟ ಮಾಡುತ್ತಿದ್ದರು. ಅವರ ಕಠಿಣ ಪರಿಶ್ರಮವೇ ಅವರ ಕೈಹಿಡಿದಿತ್ತು, ಇವರು ಸ್ಥಾಪಿಸಿದ ಆಭರಣಗಳ ಮಳಿಗೆ ಇಂದಿಗೂ ವಿಶ್ವದಾದ್ಯಂತ ಜನಜನಿತವಾಗಿದೆ.

ಪ್ರಸ್ತುತಪಡಿಸಲಾಗುತ್ತಿದೆ

ದಿ ಗ್ರಾಂಡ್ 1869 ಸೇಲ್™

1 - 28 ಫೆಬ್ರವರಿ 2023

5% ರಿಂದ 18.69%* ರಿಯಾಯಿತಿಗಳು

*ಷರತ್ತು ಮತ್ತು ನಿಬಂಧನೆಗಳು ಅನ್ವಯ.

ಸಿ. ಕೃಷ್ಣಯ್ಯ ಚೆಟ್ಟಿ™

ಗ್ರೂಪ್ ಆಫ್ ಜ್ಯುವೆಲರ್ಸ್


ಬೆಂಗಳೂರಿನಾದ್ಯಂತ 5 ಬೃಹತ್ ಷೋರೂಮ್‌ಗಳು ಮತ್ತು ಬೊಟಿಕ್‌ಗಳು: ಕಮರ್ಷಿಯಲ್ ಸ್ಟ್ರೀಟ್ • ಮೇನ್ ಗಾರ್ಡ್ ಕ್ರಾಸ್ ರೋಡ್ • ಜಯನಗರ • ಮಲ್ಲೇಶ್ವರಂ • ಫೀನಿಕ್ಸ್ ಮಾರ್ಕೆಟ್ ಸಿಟಿ

Tel: 080-4000 1869 / 4100 1869 | www.ckcjewellers.com | blogs.ckcjewellers.com

ಸಿಕೆಸಿ ಸಮೂಹ ಕಂಪನಿಗಳು | C. KRISHNIAH CHETTY & SONS™ | C. KRISHNIAH CHETTY JEWELLERS® | THE 1869 GUILD. C. Krishniah Chetty & Sons Manufacturers | C. Krishniah Chetty & Sons | C. KRISHNIAH CHETTY CHARITABLE TRUST | C. Krishniah Chetty Foundation

ಜೂ.23ಕ್ಕೆ ಕೇಂದ್ರದ ಗಡುವು ಅಂತ್ಯ; ಏಪ್ರಿಲ್‌ನಲ್ಲೇ ಬಹುತೇಕ ಪೂರ್ಣ– ಅಧಿಕಾರಿಗಳ ವಿಶ್ವಾಸ


‘ಸ್ಮಾರ್ಟ್ ಸಿಟಿ’: ಅಂತಿಮ ಹಂತದಲ್ಲಿ ವೇಗ



ಕಬ್ಬನ್ ಪಾರ್ಕ್‌ನಲ್ಲಿ ‘ಸ್ಮಾರ್ಟ್ ಸಿಟಿ’ ಯೋಜನೆ



ಕಬ್ಬನ್ ಪಾರ್ಕ್‌ನಲ್ಲಿ ಸಿದ್ಧವಾಗಿರುವ ಕಾರಂಜಿ



ಕೆ.ಆರ್ ಮಾರುಕಟ್ಟೆ ವಾಣಿಜ್ಯ ಕೇಂದ್ರಕ್ಕೆ ಗಾಜು ಅಳವಡಿಕೆ ಕಾಮಗಾರಿ

• ಆರ್. ಮಂಜುನಾಥ್

ಬೆಂಗಳೂರು: ‘ಬೆಂಗಳೂರು ಸ್ಮಾರ್ಟ್ ಸಿಟಿ’ ಯೋಜನೆಗಳೆಲ್ಲವೂ ಏಪ್ರಿಲ್ ಅಂತ್ಯಕ್ಕೆ ಪೂರ್ಣಗೊಳ್ಳುತ್ತವೆ ಎಂಬ ವಿಶ್ವಾಸವನ್ನು ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ. ಆದರೂ ಕೇಂದ್ರದ ಗಡುವಿನವರೆಗೂ ಒಂದೆರಡು ಕಾಮಗಾರಿಗಳು ನಡೆಯಲಿವೆ. ಕಾರು ಪಾರ್ಕಿಂಗ್ ಯೋಜನೆ ಗಡುವು ಮುಗಿದರೂ ಆರಂಭವಾಗುವುದು ಅನುಮಾನ.

‘ಸ್ಮಾರ್ಟ್ ಸಿಟಿ’ ಯೋಜನೆಗಳ ಅನುಷ್ಠಾನ ಪೂರ್ಣಗೊಳಿಸಲು ಕೇಂದ್ರ ನೀಡಿರುವ ಗಡುವು ಜೂನ್ 23ಕ್ಕೆ ಕೊನೆಗೊಳ್ಳಲಿದೆ. ಒಟ್ಟಾರೆ 44 ಯೋಜನೆಗಳನ್ನು ಕೈಗೊಂಡಿರುವ ‘ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್’, ಅದರಲ್ಲಿ 30 ಕಾಮಗಾರಿಗಳನ್ನು ಈವರೆಗೆ ಪೂರ್ಣಗೊಳಿಸಿದೆ. ಉಳಿದ 14 ಯೋಜನೆಗಳಲ್ಲಿ 13 ಯೋಜನೆಗಳ ಕಾಮಗಾರಿ ಸರಾಸರಿ ಶೇ 80ರಷ್ಟು ಪೂರ್ಣಗೊಂಡಿದೆ. ಒಂದು ಕಾಮಗಾರಿ ಇನ್ನೂ ಆರಂಭವೇ ಆಗಿಲ್ಲ.

ಸ್ಮಾರ್ಟ್‌ಸಿಟಿ ಯೋಜನೆಯ ವ್ಯವಸ್ಥಾಪಕ ನಿರ್ದೇಶಕ ಶ್ರೀನಿವಾಸ್ ನೇತೃತ್ವದಲ್ಲಿ ಪ್ರತಿ ವಾರವೂ ಕಾಮಗಾರಿಗಳ ಪರಿಶೀಲನೆ ನಡೆಯುತ್ತಿದೆ. ಕಾಮಗಾರಿಯ ವೇಗ ವೃದ್ಧಿಸಲು ಸೂಚನೆ ರವಾನೆಯಾಗುತ್ತಿದೆ. ಗುತ್ತಿಗೆದಾರರೆಲ್ಲರಿಗೂ ಮಾರ್ಚ್ ಅಂತ್ಯಕ್ಕೆ ಕಾಮಗಾರಿ ಮುಗಿಸಲು ಗಡುವು ನೀಡಲಾಗಿದೆ.



ಜವಹರಲಾಲ್ ನೆಹರೂ ತಾರಾಲಯದಲ್ಲಿ ನಿರ್ಮಾಣವಾಗುತ್ತಿರುವ ಆಡಿಟೋರಿಯಂ

ಕೆ.ಆರ್. ಮಾರ್ಕೆಟ್ ವಾಣಿಜ್ಯ ಕೇಂದ್ರಕ್ಕೆ ಅಂಡರ್‌ಪಾಸ್ ಹಾಗೂ ಗಾಜು ಅಳವಡಿಸುವ ಕಾರ್ಯ ಸೇರಿದಂತೆ ಅಭಿವೃದ್ಧಿ ಕೆಲಸಗಳು ಬಹುತೇಕ ಮುಗಿದಿವೆ. ಮಾಂಸದ ಮಾರುಕಟ್ಟೆ ಪುನರ್ ನಿರ್ಮಾಣ ಯೋಜನೆಯನ್ನು ಕೈಬಿಡಲಾಗಿದೆ. ಇರುವ ಮಾರುಕಟ್ಟೆಯನ್ನೇ ಅಭಿವೃದ್ಧಿಪಡಿಸುವ ಕಾಮಗಾರಿಗೆ ಇದೀಗ ಹೆಚ್ಚಿನ ವೇಗ ನೀಡಲಾಗಿದೆ.

ಕಬ್ಬನ್ ಪಾರ್ಕ್‌ನಲ್ಲಿ ಹೊಸ ವಿನ್ಯಾಸಗಳ ಅಭಿವೃದ್ಧಿ ಕೆಲಸ ಶೇ 90ರಷ್ಟು ಮುಗಿದಿದೆ. ಆದರೆ, ಜವಾಹರಲಾಲ್ ನೆಹರೂ ತಾರಾಲಯ ದಲ್ಲಿನ ಸಭಾಂಗಣ, ಆಡಿಟೋರಿಯಂ ಕೆಲಸ ಶೇ 25ರಷ್ಟು ಬಾಕಿ ಉಳಿದಿದೆ. ಒಂದು ಬ್ಲಾಕ್ ಕಾಮಗಾರಿ ಪೂರ್ಣಗೊಂಡಿದ್ದು, ಮತ್ತೊಂದರ ಕಾಮಗಾರಿ ಇದೀಗ ವೇಗ ಪಡೆದುಕೊಂಡಿದೆ.

> ಒಂದೆರಡು ಕಾಮಗಾರಿ ಏಪ್ರಿಲ್‌ನಲ್ಲಿ ಮುಗಿಯಬಹುದು. ಅದು ಬಿಟ್ಟರೆ ಉಳಿದೆಲ್ಲವೂ ಮಾರ್ಚ್‌ನಲ್ಲೇ ಪೂರ್ಣಗೊಳಿಸಲಾಗುವುದು
> **ಶ್ರೀನಿವಾಸ್** ವ್ಯವಸ್ಥಾಪಕ ನಿರ್ದೇಶಕ, ಸ್ಮಾರ್ಟ್ ಸಿಟಿ

ಟೆಂಡರ್ ಶ್ಯೂರ್‌ನಲ್ಲಿ 32 ರಸ್ತೆಗಳ ಅಭಿವೃದ್ಧಿಯಲ್ಲಿ ಪ್ಯಾಕೇಜ್ ‘ಬಿ’ಯಲ್ಲಿರುವ ಎರಡು ರಸ್ತೆಗಳು ಇನ್ನೂ ಪೂರ್ಣಗೊಂಡಿಲ್ಲ. ಕ್ವೀನ್ಸ್ ರಸ್ತೆಯಿಂದ ರಸೆಲ್ ಮಾರುಕಟ್ಟೆವರೆಗಿನ ರಸ್ತೆ ಹಾಗೂ ಅವೆನ್ಯೂ ರಸ್ತೆ ಕಾಮಗಾರಿ ಮುಗಿದಿಲ್ಲ. ಬಿಡಬ್ಲ್ಯುಎಸ್‌ಎಸ್‌ಬಿ ಮಾರ್ಗವನ್ನು ಬದಲಿಸಬೇಕಿರುವುದರಿಂದ ಅವೆನ್ಯೂ ರಸ್ತೆ ಕಾಮಗಾರಿ ವಿಳಂಬವಾಗಿದ್ದು, ಈಗ ಆ ಕಾಮಗಾರಿಯನ್ನು ಮುಗಿಸಲು ಒಳಚರಂಡಿ ಮಂಡಳಿಗೇ ನೀಡಲಾಗಿದೆ. ಅವರು ಏಪ್ರಿಲ್‌ನೊಳಗೆ ಮುಗಿಸಲಿದ್ದಾರೆ ಎಂದು ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯ ಮುಖ್ಯ ಎಂಜಿನಿಯರ್ ದೊಡ್ಡಯ್ಯ ಹೇಳಿದರು.

ಪ್ರಗತಿಯಲ್ಲಿರುವ ಕಾಮಗಾರಿಗಳು

ಕಾಮಗಾರಿ	ವೆಚ್ಚ (₹ಕೋಟಿಗಳಲ್ಲಿ)	ಆರ್ಥಿಕ ಪ್ರಗತಿ (₹ಕೋಟಿಗಳಲ್ಲಿ)	ಭೌತಿಕ ಪ್ರಗತಿ
ಟೆಂಡರ್ ಶ್ಯೂರ್ ರಸ್ತೆ: ಎಚ್‌ಕೆಪಿ ರಸ್ತೆ– ಕ್ವೀನ್ಸ್ ರಸ್ತೆಯಿಂದ ರಸೆಲ್ ಮಾರುಕಟ್ಟೆ	41.40	31.07	90
ಟೆಂಡರ್ ಶ್ಯೂರ್‌ನಡಿ ರಸೆಲ್ ಪ್ಲಾಜಾದಲ್ಲಿ ಹೆಚ್ಚುವರಿ ಕಾಮಗಾರಿ	50.20	42.69	95
ಅವೆನ್ಯೂ ರಸ್ತೆ– ಮೈಸೂರು ಬ್ಯಾಂಕ್ ವೃತ್ತದಿಂದ ಎಸ್‌ಜೆಪಿ ರಸ್ತೆ	34.21	25.57	88
ಕಬ್ಬನ್ ಪಾರ್ಕ್ ಮರು ಅಭಿವೃದ್ಧಿ ಫೇಸ್–ಬಿ	21.42	7.55	90
ಜವಾಹರಲಾಲ್ ನೆಹರೂ ತಾರಾಲಯ ಸಭಾಂಗಣ	42	18.95	70
ಪ್ರಾಜೆಕ್ಟ್ ರಶ್ಮಿ– ಉದ್ಯೋಗಸ್ಥ ಮಹಿಳೆಯರ ತಾಣ, ಹೈಕೋರ್ಟ್ ಕಚೇರಿಯಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ	2	0.93	90
ಕೆ.ಆರ್. ಮಾರುಕಟ್ಟೆ ಮಾಂಸ ಮಾರುಕಟ್ಟೆ	6.70	2.08	25
ಕೆ.ಆರ್. ಮಾರುಕಟ್ಟೆ ವಾಣಿಜ್ಯ ಸೆಂಟರ್ ಮರುಅಭಿವೃದ್ಧಿ	40.05	21.80	75
ಐಸಿಸಿಸಿ (ಇಂಟಗ್ರೇಟೆಡ್ ಕಮ್ಯಾಂಡ್ ಆ್ಯಂಡ್ ಕಂಟ್ರೋಲ್ ಸೆಂಟರ್)	111.43	31.52	80
ಪಾದರಾಯನಪುರ ಶಾಲೆ ಉನ್ನತೀಕರಣ	2.34	0.53	85
ಪುಲಕೇಶಿನಗರ ಶಾಲೆ ಉನ್ನತೀಕರಣ	4.22	0.64	75
ಗಾಂಧಿಬಜಾರ್‌ನಲ್ಲಿ ಬಹು ಅಂತಸ್ತಿನ ಕಾರು ಪಾರ್ಕಿಂಗ್	22.13	0	0
ಸ್ಮಾರ್ಟ್ ವರ್ಚ್ಯುಯಲ್ ಕ್ಲಿನಿಕ್	21.65	2.27	90
ಇಂದಿರಾಗಾಂಧಿ ಇನ್‌ಸ್ಟಿಟ್ಯೂಟ್ ಮತ್ತು ಬಿಎಂಸಿಆರ್‌ಐಗೆ ವೈದ್ಯ ಉಪಕರಣ	8	5.26	90
ಒಟ್ಟು	409.75	190.86	

ಒಂದೇ ನಂಬರ್, ಒಂದೇ ಪೋರ್ಟಲ್...

ನಾಗರಿಕರ ಎಲ್ಲ ಸಮಸ್ಯೆಗಳಿಗೆ ಒಂದೇ ವೇದಿಕೆಯಲ್ಲಿ ಪರಿಹಾರ ಕಲ್ಪಿಸುವ ಐಸಿಸಿಸಿ ವ್ಯವಸ್ಥೆಯ ಪ್ರಕ್ರಿಯೆ ಶೇ 80ರಷ್ಟು ಮುಗಿದಿದೆ. ಬಿಬಿಎಂಪಿ, ಬಿಡಿಎ, ಬೆಸ್ಕಾಂ, ಬಿಡಬ್ಲ್ಯುಎಸ್‌ಎಸ್‌ಬಿ, ಪೊಲೀಸ್ ಸೇರಿದಂತೆ ಎಲ್ಲ ದೂರುಗಳನ್ನು ಒಂದೇ ಸಂಖ್ಯೆ ಅಥವಾ ಪೋರ್ಟಲ್‌ನಲ್ಲಿ ನಾಗರಿಕರು ಈ ಮೂಲಕ ದಾಖಲಿಸಬಹುದು. ಅದನ್ನು ಪರಿಹರಿಸುವ ಕೆಲಸ ಮಾಡುವ ಈ ಐಸಿಸಿಸಿ, ನಾಗರಿಕರಿಗೆ ಅದರ ನೈಜ ಮಾಹಿತಿಯನ್ನು ನೀಡುತ್ತದೆ. ಇದಕ್ಕಾಗಿ ಎಲ್ಲ ಇಲಾಖೆಗಳೊಂದಿಗೆ ಸಂಪರ್ಕ ಸಾಧಿಸಿದ್ದು, ಬಿಬಿಎಂಪಿಯಲ್ಲಿ ಈ ಕೇಂದ್ರ ಅನುಷ್ಠಾನವಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದರು.

ಬಿಬಿಎಂಪಿ ಭೂಮಿ ಹಸ್ತಾಂತರಿಸಿಲ್ಲ!

‘ಗಾಂಧಿಬಜಾರ್‌ನಲ್ಲಿ ಬಹು ಅಂತಸ್ತಿನ ಕಾರು ಪಾರ್ಕಿಂಗ್ ನಿರ್ಮಾಣ ಕಾಮಗಾರಿ ಇನ್ನೂ ಪ್ರಾರಂಭವಾಗಿಲ್ಲ. ಬಿಬಿಎಂಪಿ ಭೂಮಿಯನ್ನು ಹಸ್ತಾಂತರಿಸಿಲ್ಲ. ಅಲ್ಲಿ ತಾತ್ಕಾಲಿಕ ಕಾರ್ಯ ಆರಂಭವಾಗಿದೆ. ಅಲ್ಲಿರುವ ವ್ಯಾಪಾರಿಗಳನ್ನು ಸ್ಥಳಾಂತರ ಮಾಡಿ ನಮಗೆ ಸ್ಥಳ ಹಸ್ತಾಂತರಿಸಿದರೆ ಕಾಮಗಾರಿ ಆರಂಭಿಸಲಾಗುತ್ತದೆ. ಇದಕ್ಕಾಗಿ ಟೆಂಡರ್ ಪೂರ್ಣಗೊಂಡಿದ್ದು, 11 ತಿಂಗಳಲ್ಲಿ ಕಾಮಗಾರಿ ಮುಗಿಸುವ ಉದ್ದೇಶವಿದೆ. ನಮ್ಮ ಗಡುವಿನೊಳಗೆ ಬಿಬಿಎಂಪಿ ಭೂಮಿ ಹಸ್ತಾಂತರಿಸದಿದ್ದರೆ ಯೋಜನೆಯನ್ನು ಅವರಿಗೇ ವಹಿಸಲಾಗುತ್ತದೆ’ ಎಂದು ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯ ಜಂಟಿ ವ್ಯವಸ್ಥಾಪಕ ನಿರ್ದೇಶಕಿ ಸುಶೀಲಮ್ಮ ಹೇಳಿದರು.

ಸುದ್ದಿ 2 ನಿಮಿಷ

ರೈತ ವಿರೋಧಿ ನೀತಿ ಖಂಡಿಸಿ 16ರಂದು ಪ್ರತಿಭಟನೆ

ಬೆಂಗಳೂರು: ಕೇಂದ್ರ ಮತ್ತು ರಾಜ್ಯ ಸರ್ಕಾರದ ರೈತ, ಕಾರ್ಮಿಕ ವಿರೋಧಿ ನೀತಿಗಳನ್ನು ಖಂಡಿಸಿ ಇದೇ 16ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಜನಾಗ್ರಹ ರ‍್ಯಾಲಿ ಮತ್ತು ಪ್ರತಿಭಟನಾ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಸಂಯುಕ್ತ ಹೋರಾಟ–ಕರ್ನಾಟಕ ತಿಳಿಸಿದೆ.

‘ರಾಜ್ಯ ಸರ್ಕಾರದ ಭೂ ಸುಧಾರಣೆ ಕಾಯ್ದೆ, ಎಪಿಎಂಸಿ ಕಾಯ್ದೆ, ಜಾನುವಾರು ಹತ್ಯೆ ಕಾಯ್ದೆ, ಭೂಸ್ವಾಧೀನ ಕಾಯ್ದೆಗಳಿಗೆ ತಂದಿರುವ ತಿದ್ದುಪಡಿಯನ್ನು ಕೂಡಲೇ ರದ್ದುಗೊಳಿಸಬೇಕು. ಬಡವರಿಗೆ ಬಗರ್‌ಹುಕುಂ ಮತ್ತಿತರ ಸರ್ಕಾರಿ ಭೂಮಿ ಹಂಚಿಕೆ ಮಾಡಿ, ಎಪಿಎಂಸಿಗಳನ್ನು ಬಲಪಡಿಸಬೇಕು. ರೈತರ ಒಪ್ಪಿಗೆ ಇಲ್ಲದೇ ಭೂಸ್ವಾಧೀನ ಮಾಡುವುದಿಲ್ಲ ಎಂಬ 2013ರ ಭೂಸ್ವಾಧೀನ ಕಾಯ್ದೆ ಜಾರಿಗೊಳಿಸಬೇಕು’ ಎಂದು ಸಂಚಾಲಕ ಜಿ.ಸಿ. ಬಯ್ಯಾರೆಡ್ಡಿ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

‘ರೈತರ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಖಾತ್ರಿಪಡಿಸುವ ಕಾನೂನು ಜಾರಿಗೊಳಿಸಿ, ಬಡ ಮತ್ತು ಮಧ್ಯಮ ರೈತರು ಹಾಗೂ ಕೂಲಿ ಕಾರ್ಮಿಕರಿಗೆ ಬ್ಯಾಂಕ್ ಸಾಲ ಸೌಲಭ್ಯ ವಿಸ್ತರಿಸಬೇಕು. ಸಾಲಮನ್ನಾವನ್ನೂ ಒಳಗೊಂಡ ಋಣಮುಕ್ತ ಕಾಯ್ದೆ ಜಾರಿಗೊಳಿಸಬೇಕು. ವಿದ್ಯುತ್ ಖಾಸಗೀಕರಣವನ್ನು ಕೈಬಿಡಬೇಕು. ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ವೇತನ ಸಿಗಬೇಕು. ಅಗತ್ಯ ವಸ್ತುಗಳ ಬೆಲೆ ಏರಿಕೆ ನಿಯಂತ್ರಿಸಬೇಕು’ ಎಂದು ಆಗ್ರಹಿಸಿದರು.

ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ‘ರಾಜ್ಯದಲ್ಲಿ 1 ಟನ್ ಕಬ್ಬಿಗೆ ₹ 4,500, ಒಂದು ಕ್ವಿಂಟಲ್ ಹತ್ತಿಗೆ ₹ 10,500 ಬೆಲೆ ನಿಗದಿಗೊಳಿಸಬೇಕು. ವಯಸ್ಸಾದ ರೈತರು, ಕಾರ್ಮಿಕರಿಗೆ ಪಿಂಚಣಿ ಸೌಲಭ್ಯ ನೀಡಬೇಕು. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು’ ಎಂದರು ಸಂಯೋಜಕರಾದ ಮಾವಳ್ಳಿ ಶಂಕರ್, ನೂರ್ ಶ್ರೀಧರ್, ಕೆ.ವಿ. ಭಟ್, ದೇವಿ ಇದ್ದರು.

‘ಅಪ್ಪ ನೆಟ್ಟ ಆಲದ ಮರ’ ಕೃತಿ ಬಿಡುಗಡೆ



ಬೆಂಗಳೂರು: ಇಂಗ್ಲೆಂಡ್‌ನಲ್ಲಿ ನೆಲೆಸಿರುವ ಅನಿವಾಸಿ ಕನ್ನಡಿಗ, ವೈದ್ಯ ಡಾ.ಜಿ.ಎಸ್.ಶಿವಪ್ರಸಾದ್ ಅವರ ‘ಅಪ್ಪ ನೆಟ್ಟ ಆಲದ ಮರ’ ಕೃತಿಯನ್ನು ನಗರದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಲೇಖಕ ಪ್ರೊ.ಎಸ್.ಜಿ. ಸಿದ್ಧರಾಮಯ್ಯ ಬಿಡುಗಡೆ ಮಾಡಿದರು.

‘30 ವರ್ಷಗಳಿಂದ ಇಂಗ್ಲೆಂಡ್‌ನಲ್ಲಿ ಶಿವಪ್ರಸಾದ್ ನೆಲೆಸಿದ್ದಾರೆ. ಅವರ ಮೇಲೆ ಅನ್ಯಭಾಷೆಯ ಪ್ರಭಾವವಿದ್ದರೂ ಕನ್ನಡವನ್ನು ಮರೆಯದೆ ಕೃತಿ ಹೊರತಂದಿದ್ದಾರೆ. ಇಲ್ಲಿದ್ದ ಕೆಲವರು ಕನ್ನಡದ ಶಿಸ್ತು, ಜ್ಞಾನಕ್ಕೆ ತೆರೆದುಕೊಂಡಿಲ್ಲ’ ಎಂದು ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದರು.

‘ಬಸವನಗುಡಿಯಲ್ಲಿ ತಂದೆಯ ಜತೆಗೆ ಬಾಲ್ಯವನ್ನು ಕಳೆದಿದ್ದ ಚೈತ್ರಾ ಹೆಸರಿನ ಮನೆ, ಇಂಗ್ಲೆಂಡ್‌ನಲ್ಲಿನ ಧರ್ಮ ನಿರಾಸಕ್ತಿ... ಹೀಗೆ ನಾನಾ ವಿಷಯಗಳ ಬಗ್ಗೆ ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ’ ಎಂದರು.

ಮಹಾಲಕ್ಷ್ಮಿ ಲೇಔಟ್, ಪದ್ಮನಾಭನಗರ ವಿಧಾನಸಭೆ ಕ್ಷೇತ್ರದಲ್ಲಿ ಕಾಮಗಾರಿಗಳಿಗೆ ಸಿ.ಎಂ ಚಾಲನೆ

ಒಳಚರಂಡಿ ಸುಧಾರಣೆಗೆ ‘ವಿಶೇಷ ಮಾಸ್ಟರ್ ಪ್ಲಾನ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಐಎಸ್‌ಸಿ ಸೇರಿದಂತೆ ಇತರೆ ವರದಿಗಳನ್ನು ಆಧರಿಸಿ ನಗರದಲ್ಲಿ ರಾಜಕಾಲುವೆಗಳನ್ನು ಪುನರ್‌ನಿರ್ಮಾಣ ಮಾಡಲಾಗುತ್ತದೆ. ಒಳಚರಂಡಿ ವ್ಯವಸ್ಥೆ ಸುಧಾರಣೆಗೆ ‘ವಿಶೇಷ ಮಾಸ್ಟರ್ ಪ್ಲಾನ್’ ರೂಪಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮಹಾಲಕ್ಷ್ಮಿ ಲೇಔಟ್, ಪದ್ಮನಾಭನಗರ ವಿಧಾನಸಭೆ ಕ್ಷೇತ್ರದಲ್ಲಿ ಮಂಗಳವಾರ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಹೊಸ ರಸ್ತೆಗಳು, ಮೂರು ರೀತಿಯ ಚರಂಡಿ ವ್ಯವಸ್ಥೆಗಳಿಗೆ ಅನುದಾನ ನೀಡಲಾಗಿದೆ. ಒಳಚರಂಡಿ ನೀರು ಬೆಂಗಳೂರಿನಿಂದ ಆಚೆಗೆ ಹೋಗಲು ಇದ್ದ ಕೆಲವು ಅಡೆತಡೆಗಳ ನಿವಾರಣೆಗೆ ತಾಂತ್ರಿಕ ನಿರ್ಣಯಗಳನ್ನು ಕೈಗೊಳ್ಳಲಾಗುತ್ತಿದೆ. ಮಳೆಯಿಂದ ತೊಂದರೆ ಉಂಟಾಗಬಾರದು ಎಂಬ ಉದ್ದೇಶದಿಂದ ₹2 ಸಾವಿರ ಕೋಟಿ ವೆಚ್ಚದಲ್ಲಿ ಹೊಸ ರಾಜಕಾಲುವೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದರು.

ನಗರದಲ್ಲಿ ವಾಹನ ದಟ್ಟಣೆ ಎರಡು ತಿಂಗಳಿಂದ ಕಡಿಮೆಯಾಗಿದೆ. ಸಂಚಾರ ಪೊಲೀಸ್ ವಿಭಾಗಕ್ಕೆ ವಿಶೇಷ ಕಮಿಷನರ್ ನೇಮಿಸಿ, ವಿಶೇಷ ಕ್ರಮಗಳನ್ನು ಕೈಗೊಂಡಿರುವುದು ಇದಕ್ಕೆ ಕಾರಣ ಎಂದು ಹೇಳಿದರು.

ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅಟಲ್ ಬಿಹಾರಿ ವಾಜಪೇಯಿ ಸರ್ಕಾರಿ ಪ್ರಾಥಮಿಕ ಶಾಲೆ ಕಟ್ಟಡ, ಬಿಬಿಎಂಪಿ ರೆಫರಲ್ ಆಸ್ಪತ್ರೆ ಕಟ್ಟಡ, ಬಿಬಿಎಂಪಿ ಪ್ರೌಢಶಾಲೆ ಹಾಗೂ ಕಾಲೇಜು ಕಟ್ಟಡ, ಕರ್ನಾಟಕ ಪಬ್ಲಿಕ್ ಶಾಲೆ, ನವ ನಂದಿನಿ ಉದ್ಯಾನ ಹಾಗೂ ರಾಣಿ ಅಬ್ಬಕ್ಕ ಆಟದ ಮೈದಾನವನ್ನು ಬೊಮ್ಮಾಯಿ ಉದ್ಘಾಟಿಸಿದರು. ಅಬಕಾರಿ ಇಲಾಖೆ ಸಚಿವ ಗೋಪಾಲಯ್ಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಡಾ. ಕೆ.ಸುಧಾಕರ್, ವಿಧಾನಪರಿಷತ್ ಸದಸ್ಯ ಅ.ದೇವೇಗೌಡ, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ ಅನಿಲ್ ಕುಮಾರ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಇದ್ದರು.

ಪದ್ಮನಾಭನಗರ ವಿಧಾನಸಭಾಕ್ಷೇತ್ರ ವ್ಯಾಪ್ತಿಯಲ್ಲಿ ಅಶೋಕಸ್ತಂಭ ಉದ್ಯಾನ, ಗುರುಶಂಕರ ಉದ್ಯಾನ, ಹನುಮಾನ್ ಚಾಲಿಸ ಕ್ರೀಡಾಂಗಣ, ದೋಬಿಘಾಟ್‌ನಲ್ಲಿ ವಸತಿ ಸಮುಚ್ಚಯದ 28 ಮನೆಗಳು ಹಾಗೂ ಅಟಲ್ ಬಿಹಾರಿ ವಾಜಪೇಯಿ ಆಟದ ಮೈದಾನಕ್ಕೆ ಮುಖ್ಯಮಂತ್ರಿ ಚಾಲನೆ ನೀಡಿದರು. ಕಂದಾಯ ಇಲಾಖೆ ಸಚಿವ ಆರ್. ಅಶೋಕ, ಶಾಸಕರಾದ ರವಿಸುಬ್ರಮಣ್ಯ, ಸತೀಶ್ ರೆಡ್ಡಿ, ಕೃಷ್ಣಪ್ಪ, ಉದಯ್ ಬಿ. ಗರುಡಾಚಾರ್, ಸಂಸದ ತೇಜಸ್ವಿಸೂರ್ಯ ಇದ್ದರು.

ಪರಿಸರ ಶಿಕ್ಷಣಕ್ಕೆ ಪಠ್ಯಕ್ರಮದ ಚೌಕಟ್ಟು: ಯುಜಿಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪದವಿ ಹಂತದಲ್ಲಿ ಪರಿಸರ ಶಿಕ್ಷಣ ಅಧ್ಯಯನಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಮಾರ್ಗಸೂಚಿ ಮತ್ತು ಪಠ್ಯಕ್ರಮದ ಚೌಕಟ್ಟನ್ನು ಬುಧವಾರ ಬಿಡುಗಡೆ ಮಾಡಲಿದೆ.

ಸುಸ್ಥಿರ ಅಭಿವೃದ್ಧಿ, ಜೀವವೈವಿಧ್ಯತೆ ಮತ್ತು ಹವಾಮಾನ ಬದಲಾವಣೆಗೆ ಸಂಬಂಧಿಸಿದ ಅಧ್ಯಯನಗಳನ್ನು ಇದು ಒಳಗೊಳ್ಳಲಿದೆ.



ಸಂದೇಶ ಪ್ರಶಸ್ತಿ ಪ್ರದಾನ

ಮಂಗಳೂರಿನಲ್ಲಿ ಮಂಗಳವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಂದೇಶ ಪ್ರತಿಷ್ಠಾನದ ವತಿಯಿಂದ (ಎಡದಿಂದ ಕುಳಿತವರು) ಸಬೀಹಾ ಭೂಮಿಗೌಡ (ಅತ್ಯುತ್ತಮ ಶಿಕ್ಷಕಿ), ರಾಘವೇಂದ್ರ ಪಾಟೀಲ (ಕನ್ನಡ ಸಾಹಿತ್ಯ), ಜಾಯ್ಸ್ ಒಝ್ಹಾರಿಯೊ (ಕೊಂಕಣಿ ಸಂಗೀತ), ಪ್ರೊ.ಕೆ.ಚಿನ್ನಪ್ಪ ಗೌಡ (ತುಳು ಸಾಹಿತ್ಯ), ಎಂ.ಎಸ್ ಮೂರ್ತಿ (ಕಲೆ), ಶಿವಾಜಿ ಗಣೇಶನ್ (ಪತ್ರಿಕಾ ರಂಗ), ಕೋಟಿಗಾನಹಳ್ಳಿ ರಾಮಯ್ಯ (ಶಿಕ್ಷಣ), ಆಂಡ್ರ್ಯೂ ಎಲ್. ಡಿಕುನ್ಹಾ (ಕೊಂಕಣಿ ಸಾಹಿತ್ಯ), ಪ್ರೇರಣ ಟ್ರಸ್ಟ್ (ಮೇಘನಾ ಜೋಯಸ್) ಅವರಿಗೆ ‘ಸಂದೇಶ ಪ್ರಶಸ್ತಿ 2023’ ಅನ್ನು ಪ್ರದಾನ ಮಾಡಲಾಯಿತು. (ನಿಂತವರು) ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷರಾದ ಡಾ. ವಲೇರಿಯನ್ ರಾಡ್ರಿಗಸ್, ಮಂಗಳೂರಿನ ಬಿಷಪ್ ಫಾ.ಪೀಟರ್ ಪಾವ್ಲ್ ಸಲ್ಡಾನ, ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ, ಸಂದೇಶ ಪ್ರತಿಷ್ಠಾನದ ಅಧ್ಯಕ್ಷ ಫಾ. ಹೆನ್ರಿ ಡಿಸೋಜ, ಪ್ರತಿಷ್ಠಾನದ ನಿರ್ದೇಶಕರಾದ ಫಾ.ಸುದೀಪ್ ಪೌಲ್, ಪ್ರತಿಷ್ಠಾನದ ಟ್ರಸ್ಟಿಗಳಾದ ಫಾ. ಐವನ್ ಪಿಂಟೊ ಮತ್ತು ರಾಯ್ ಕ್ಯಾಸ್ತಲಿನೊ ಇದ್ದರು. –ಪ್ರಜಾವಾಣಿ ಚಿತ್ರ

ದೊಡ್ಡರಂಗೇಗೌಡರಿಗೆ ಚಿತ್ರಸಾಹಿತಿ ಹಣೆಪಟ್ಟಿ: ಮನು ಬಳಿಗಾರ್ ಬೇಸರ

ಬೆಂಗಳೂರು: ‘ಗದ್ಯ ಪ್ರಕಾರದಲ್ಲಿಯೂ ಸಾಹಿತ್ಯ ಸೃಷ್ಟಿಸಿರುವ ದೊಡ್ಡರಂಗೇಗೌಡ ಅವರಿಗೆ ಚಿತ್ರಸಾಹಿತಿ ಎಂಬ ಹಣೆಪಟ್ಟಿ ಕಟ್ಟಲಾಗಿದೆ. ಅವರ ಸಾಹಿತ್ಯ ಸೇವೆಗೆ ನಾಡಿನ ಪ್ರತಿಷ್ಠಿತ ಪ್ರಶಸ್ತಿಗಳಲ್ಲಿ ಒಂದಾದ ‘ಪಂಪ ಪ್ರಶಸ್ತಿ’ ಸಲ್ಲಬೇಕು’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಆಗ್ರಹಿಸಿದರು.

ದೊಡ್ಡರಂಗೇಗೌಡ ಅವರ 77ನೇ ಹುಟ್ಟುಹಬ್ಬದ ಪ್ರಯುಕ್ತ ‘ಸಮನ್ವಯ ಸಾಹಿತಿ ಡಾ. ದೊಡ್ಡರಂಗೇಗೌಡರ ಅಭಿಮಾನಿಗಳ ಬಳಗ’ ಹಾಗೂ ‘ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನ’ ಜಂಟಿಯಾಗಿ ನಗರದಲ್ಲಿ ಮಂಗಳವಾರ ಆಯೋಜಿಸಿದ ‘ಕಾವ್ಯ ವೈವಿಧ್ಯಮಯ ಹಾಗೂ ಬಾಳ ಬಾಂಧವ್ಯದ ಹೆಜ್ಜೆ ಗುರುತುಗಳ ಮೆಲುಕು’ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

‘ಪರಿಷತ್ತಿನ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ದೊಡ್ಡರಂಗೇಗೌಡ ಅವರಿಗೆ ‘ನೃಪತುಂಗ ಪ್ರಶಸ್ತಿ’ ನೀಡಬೇಕು ಅಂದುಕೊಂಡೆ. ಆದರೆ, ಅವರು ₹ 7 ಲಕ್ಷ ನಗದು ಹೊಂದಿದ್ದ ಈ ಪ್ರಶಸ್ತಿಯನ್ನು ಆಗ ನಿರಾಕರಿಸಿದ್ದರು. ಸಾಹಿತ್ಯ ಪರಿಷತ್ತಿನ ಚುನಾವಣೆಗಳಲ್ಲಿ ಅವರು ಯಾವುದೇ ಅಭ್ಯರ್ಥಿ, ಜಾತಿ ಪರ ನಿಲ್ಲಲಿಲ್ಲ. ಅವರ ಈ ನಡೆ ಮಾದರಿಯಾಗಿದೆ’ ಎಂದು ಹೇಳಿದರು.

ಕರ್ನಾಟಕ ರಾಜ್ಯ ಪುಸ್ತಕ ಪ್ರಕಾಶಕರ ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ, ‘86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದ ಬಳಿಕ, ಕೋವಿಡ್ ಕಾರಣ ಅವರು 3 ವರ್ಷ ಸರ್ವಾಧ್ಯಕ್ಷರಾಗಿಯೇ ಉಳಿದಿದ್ದರು. ಇದು ತಕ್ಕ ಮಟ್ಟಿಗೆ ಸಮಾಧಾನ ತಂದಿತು’ ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ದೊಡ್ಡರಂಗೇಗೌಡ ಅವರನ್ನು ಸನ್ಮಾನಿಸಲಾಯಿತು. ಮನು ಬಳಿಗಾರ್, ಕನ್ನಡ ಪರ ಹೋರಾಟಗಾರ ಗೋವಿಂದಹಳ್ಳಿ ಕೃಷ್ಣೇಗೌಡ, ಅಭಿಮಾನಿಗಳ ಬಳಗದ ಅಧ್ಯಕ್ಷ ಉಪೇಂದ್ರಕುಮಾರ್ ಎಂ.ಆರ್ ಹಾಗೂ ಚಿತ್ರನಟ ರಮೇಶ್ ಭಟ್ ಇದ್ದಾರೆ. –ಪ್ರಜಾವಾಣಿ ಚಿತ್ರ

ಹಲವರ ಜತೆ ಡೇಟಿಂಗ್ ಮಾಡಿದ್ದ ಶ್ರದ್ಧಾ ಹತ್ಯೆ ಆರೋಪಿ

ನವದೆಹಲಿ: ಮುಂಬೈ ಮೂಲದ ಕಾಲ್ ಸೆಂಟರ್ ಉದ್ಯೋಗಿ ಶ್ರದ್ಧಾ ವಾಲ್ಕರ್ ಹತ್ಯೆ ಪ್ರಕರಣದ ಆರೋಪಿ, ಅಫ್ತಾಬ್ ಅಮಿನ್ ಪೂನಾವಾಲಾ ಆ್ಯಪ್ ಮೂಲಕ ಹಲವು ಮಹಿಳೆಯರೊಂದಿಗೆ ಡೇಟಿಂಗ್ ನಡೆಸುತ್ತಿದ್ದು, ಹತ್ಯೆಯ ಬಳಿಕ ಒಬ್ಬಾಕೆಯನ್ನು ತನ್ನ ಮನೆಗೆ ಕರೆದಿದ್ದ ಎಂದು ದೆಹಲಿ ಪೊಲೀಸರು ಸಲ್ಲಿಸಿರುವ ಚಾರ್ಜ್‌ಶೀಟ್‌ನಲ್ಲಿ ಹೇಳಲಾಗಿದೆ.

ಶ್ರದ್ಧಾಳ ದೇಹದ ಭಾಗಗಳು ಫ್ರಿಡ್ಜ್‌ನಲ್ಲಿರುವಾಗಲೇ ಮಹಿಳೆಯೊಬ್ಬರನ್ನು ಮನೆಗೆ ಆತ ಕರೆತಂದಿದ್ದ.

ಇತರ ಮಹಿಳೆಯರೊಂದಿಗೆ ಸಂಬಂಧವಿರುವ ಬಗ್ಗೆ ಅಫ್ತಾಬ್‌ನನ್ನು ಶ್ರದ್ಧಾ ಪ್ರಶ್ನಿಸುತ್ತಿದ್ದಳು. ಇದರಿಂದ ಅವರಿಬ್ಬರ ಸಂಬಂಧ ಹಳಸಿತ್ತು ಎಂದೂ ಪೊಲೀಸರು ಚಾರ್ಜ್‌ಶೀಟ್‌ನಲ್ಲಿ ತಿಳಿಸಿದ್ದಾರೆ.

ಪತ್ರಕರ್ತ ರುದ್ರಣ್ಣ ಹರ್ತಿಕೋಟೆಗೆ ರಾಷ್ಟ್ರೀಯ ಉತ್ಕೃಷ್ಟತಾ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ರುದ್ರಣ್ಣ ಹರ್ತಿಕೋಟೆ

ಬೆಂಗಳೂರು: ‘ವಿಜಯವಾಣಿ’ ದಿನಪತ್ರಿಕೆಯ ಸಹಾಯಕ ಸಂಪಾದಕ ರುದ್ರಣ್ಣ ಹರ್ತಿಕೋಟೆ ಅವರು ಭಾರತೀಯ ಪತ್ರಿಕಾ ಮಂಡಳಿಯ 2020ನೇ ಸಾಲಿನ ರಾಷ್ಟ್ರೀಯ ಉತ್ಕೃಷ್ಟತಾ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

2019ರ ಮೇ 22ರಂದು ‘ವಿಜಯವಾಣಿ’ ದಿನಪತ್ರಿಕೆಯ ಬೆಂಗಳೂರು ಆವೃತ್ತಿಯಲ್ಲಿ ಪ್ರಕಟವಾದ ಅವರ ‘ಕರ್ನಾಟಕದಲ್ಲಿ ಹವಾಮಾನ ಆಧಾರಿತ ಹೊಸ ಬೆಳೆ ನೀತಿ’ ಎಂಬ ವರದಿಯನ್ನು ಹಣಕಾಸು ವಿಭಾಗದ ವರದಿಗಾರಿಕೆ ವಿಭಾಗದಲ್ಲಿ ಪರಿಗಣಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಫೆಬ್ರವರಿ 27ರಂದು ನವದೆಹಲಿಯ ರಫಿ ಮಾರ್ಗದಲ್ಲಿರುವ ಕಾನ್‌ಸ್ಟಿಟ್ಯೂಷನ್ ಕ್ಲಬ್ ಆಫ್ ಇಂಡಿಯಾದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಭಾರತೀಯ ಪತ್ರಿಕಾ ಮಂಡಳಿಯ ಅಧ್ಯಕ್ಷೆ, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ರಂಜನಾ ಪ್ರಕಾಶ್ ದೇಸಾಯಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಲಾಗಿದೆ.

ಚಿತ್ರಾವಳಿ



ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿದ ಬೆಂಗಳೂರಿನ ಶ್ರೀ ಚೈತನ್ಯ ಶಿಕ್ಷಣ ಸಂಸ್ಥೆಗೆ ಉತ್ತರ ದೆಹಲಿ ಮೂಲದ ಸಾಂಸ್ಕೃತಿಕ ಸಂಸ್ಥೆ ನೀಡುವ ಎನ್‌ಡಿಸಿಎ ರಾಷ್ಟ್ರ ಪ್ರಶಸ್ತಿ ಲಭಿಸಿದೆ. ಸೋಮವಾರ ಹೈದರಾಬಾದ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿಕ್ಷಣ ಸಂಸ್ಥೆಯ ನಿರ್ದೇಶಕಿ ಸೀಮಾ ಬೋಪಣ್ಣ ಪ್ರಶಸ್ತಿ ಸ್ವೀಕರಿಸಿದರು. ಎನ್‌ಡಿಸಿಎ ಸಂಸ್ಥೆಯ ಭಾಗೀ ನಾಗೇಂದ್ರ ಗೌಡ, ತೆಲಂಗಾಣ ಸರ್ಕಾರದ ಕಾರ್ಯದರ್ಶಿ ರಾಹುಲ್ ಬೊಜ್ಜ, ಸಂಸದ ಸಮುದ್ರಲ ವೇಣುಗೋಪಾಲಾಚಾರಿ ಇದ್ದರು.



ಶ್ರೀನಿವಾಸ ಜಿ. ಕಪ್ಪಣ್ಣ ಸಾಂಸ್ಕೃತಿಕ ಸಂಭ್ರಮದ ಅಂಗವಾಗಿ ರಂಗಚಂದಿರ ಹಾಗೂ ಸವಿಗಾನ ಸಂಸ್ಥೆ ಆಯೋಜಿಸಿದ್ದ ‘ಹಳೆ ಬೇರು ಹೊಸ ಚಿಗುರು’ ಕಾರ್ಯಕ್ರಮದಲ್ಲಿ ಕಲಾವಿದ ಗೋಕುಲ ಸಹೃದಯ ಮತ್ತು ಚಿಂತಕ ಶ್ರೀನಿವಾಸ್ ಜಿ. ಕಪ್ಪಣ್ಣ ಅವರನ್ನು ಸನ್ಮಾನಿಸಲಾಯಿತು. (ಎಡದಿಂದ) ಸವಿಗಾನ ಸಂಸ್ಥೆಯ ಅಧ್ಯಕ್ಷೆ ಕೆ.ವಿ. ಸವಿತಾ, ಬೆಂಗಳೂರು ನಗರ ಜಿಲ್ಲೆಯ ಕಸಾಪ ಅಧ್ಯಕ್ಷ ಎಂ. ಪ್ರಕಾಶ್‌ಮೂರ್ತಿ, ಕವಿ ನಾಗತಿಹಳ್ಳಿ ರಮೇಶ್, ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ನಾಟಕಕಾರ ಕೆ.ವೈ. ನಾರಾಯಣಸ್ವಾಮಿ, ಜೆಪಿಜಿ ಚಂದ್ರು ಇದ್ದಾರೆ. —ಪ್ರಜಾವಾಣಿ ಚಿತ್ರ

ಪ್ರಗತಿಪರ ಚಿಂತಕ ಎಸ್‌.ಜಿ. ಸಿದ್ದರಾಮಯ್ಯ ಟೀಕೆ

‘ದೊಡ್ಡವರ ಸಾಲ ಮನ್ನಾ; ಗೌರವಧನ ಹೆಚ್ಚಳಕ್ಕೆ ತಾತ್ಸಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್‌ಗಳಲ್ಲಿ ಸಾವಿರಾರು ಕೋಟಿ ಮೊತ್ತದ ಸಾಲ ಪಡೆದು ದೇಶ ಬಿಟ್ಟವರ ಸಾಲ ಮನ್ನಾ ಮಾಡುವ, ಅವರ ವಿರುದ್ಧ ಕ್ರಮ ಕೈಗೊಳ್ಳದ ಸರ್ಕಾರಗಳು ಅಂಗನವಾಡಿ ಸಿಬ್ಬಂದಿ ಕೇಳುತ್ತಿರುವ ಕನಿಷ್ಠ ಬೇಡಿಕೆ ಈಡೇರಿಸಲಾಗದಷ್ಟು ಸಂವೇದನಾಶೀಲತೆ ಕಳೆದುಕೊಂಡಿವೆ ಎಂದು ಪ್ರಗತಿಪರ ಚಿಂತಕ ಎಸ್.ಜಿ. ಸಿದ್ದರಾಮಯ್ಯ ಟೀಕಿಸಿದರು.

ಕನ್ನಡ ಸಂಘರ್ಷ ಸಮಿತಿ ನಗರದಲ್ಲಿ ಈಚೆಗೆ ಆಯೋಜಿಸಿದ್ದ ರಾಷ್ಟ್ರಕವಿ ಕುವೆಂಪು ಮತ್ತು ದ.ರಾ. ಬೇಂದ್ರೆ ಜನ್ಮದಿನದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹೆಣ್ಣಿಗೆ ಗೌರವ ಕೊಟ್ಟ, ಸ್ತ್ರೀಪರವಾದ ಸಾಹಿತ್ಯ ರಚಿಸಿದ ಕುವೆಂಪು, ದ.ರಾ.ಬೇಂದ್ರೆ ಬದುಕಿದ ನಾಡಿನಲ್ಲಿ ಮಹಿಳೆಯರ ಸಮಸ್ಯೆಗಳನ್ನು ಆಲಿಸದಷ್ಟು ಸ್ಪಂದನೆ ಇಲ್ಲವಾಗಿದೆ ಎಂದರು.

ಆರ್.ಶಿವಪ್ರಕಾಶ ಅವರಿಗೆ ‘ಕುವೆಂಪು ಯುವಕವಿ’ ಪ್ರಶಸ್ತಿ, ಡಾ.ಬಸವರಾಜ ಸಬರದ ಅವರಿಗೆ ‘ಚಿರಂತನ ವೈಚಾರಿಕ’ ಪ್ರಶಸ್ತಿ, ಭೂಹಳ್ಳಿ ಪುಟ್ಟಸ್ವಾಮಿ ಅವರಿಗೆ ‘ಕುವೆಂಪು ಅನಿಕೇತನ’ ಪ್ರಶಸ್ತಿಯನ್ನು ಹೋರಾಟಗಾರ ರಾಮಣ್ಣ ಎಚ್. ಕೋಡಿಹೊಸಹಳ್ಳಿ ಪ್ರದಾನ ಮಾಡಿದರು.



ನಗರದಲ್ಲಿ ಕನ್ನಡ ಸಂಘರ್ಷ ಸಮಿತಿ ಆಯೋಜಿಸಿದ್ದ ರಾಷ್ಟ್ರಕವಿ ಕುವೆಂಪು ಮತ್ತು ದ.ರಾ. ಬೇಂದ್ರೆ ಜನ್ಮದಿನದ ಕಾರ್ಯಕ್ರಮದಲ್ಲಿ ಆರ್ ಶಿವಪ್ರಕಾಶ, ಬಸವರಾಜ ಸಬರದ, ಭೂಹಳ್ಳಿ ಪುಟ್ಟಸ್ವಾಮಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ತಾ.ಸಿ.ತಿಮ್ಮಯ್ಯ, ರಾಮಣ್ಣ ಎಚ್ ಕೋಡಿಹೊಸಹಳ್ಳಿ, ಡಾ. ಕರೀಗೌಡ ಬೀಚನಹಳ್ಳಿ, ಎಲ್ ಗಿರಿಜಾರಾಜ್, ಬಿ.ಸಿ. ರಾಜಕುಮಾರ್, ಎ.ಎಸ್ ನಾಗರಾಜಸ್ವಾಮಿ, ಎಸ್‌ಜಿ. ಸಿದ್ದರಾಮಯ್ಯ, ಎಂ.ಪ್ರಕಾಶಮೂರ್ತಿ ಇದ್ದಾರೆ.

ಸಂಕ್ಷಿಪ್ತ ಸುದ್ದಿ

4 ಸೇನಾ ವಿಮಾನಗಳ ಮೂಲಕ ಪರಿಹಾರ ಸಾಮಗ್ರಿ ರವಾನೆ

ನವದೆಹಲಿ (ಪಿಟಿಐ): ಭೂಕಂಪ ಪೀಡಿತ ಟರ್ಕಿಗೆ ಭಾರತವು ನಾಲ್ಕು ಸೇನಾ ಸಾರಿಗೆ ವಿಮಾನಗಳ ಮೂಲಕ ಔಷಧ, ಪರಿಹಾರ ಸಾಮಗ್ರಿ, ಮೊಬೈಲ್ ಆಸ್ಪತ್ರೆ, ವಿಶೇಷ ಶೋಧ ಹಾಗೂ ರಕ್ಷಣಾ ತಂಡಗಳನ್ನು ಕಳುಹಿಸಿದೆ.

ಸಿರಿಯಾಕ್ಕೂ ಒಂದು ಸೇನಾ ಸಾರಿಗೆ ವಿಮಾನದ ಮೂಲಕ ಜೀವ ಉಳಿಸುವ ಔಷಧಿಗಳು, ವೈದ್ಯಕೀಯ ವಸ್ತುಗಳು ಸೇರಿದಂತೆ ಆರು ಟನ್ ಪರಿಹಾರ ಸಾಮಗ್ರಿಗಳನ್ನು ಭಾರತ ರವಾನಿಸಿದೆ.

ವಿಶ್ವದ ಪ್ರತಿಭಾವಂತ ವಿದ್ಯಾರ್ಥಿಗಳಲ್ಲಿ ಭಾರತ ಮೂಲದ ನತಾಶ

ವಾಷಿಂಗ್ಟನ್ (ಪಿಟಿಐ): ಭಾರತ ಮೂಲದ ಅಮೆರಿಕ ಬಾಲಕಿ ನತಾಶಾ ಪೆರಿಯನಯಗಂ ಅವರು ಜಾನ್ ಹಾಪ್‌ಕಿನ್ಸ್ ಸೆಂಟರ್ ಫಾರ್ ಟ್ಯಾಲೆಂಟೆಡ್ ಯೂತ್ ಪರೀಕ್ಷೆ (ಸಿಟಿಐ)ಯಲ್ಲಿ ತೇರ್ಗಡೆಯಾಗುವ ಮೂಲಕಸತತ ಎರಡನೇ ವರ್ಷವೂ ‘ಜಗತ್ತಿನ ಅತ್ಯಂತ ಪ್ರತಿಭಾವಂತ ವಿದ್ಯಾರ್ಥಿ’ಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ಈ ಸ್ಪರ್ಧೆಯಲ್ಲಿ 76 ದೇಶಗಳ 15,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. 13 ವರ್ಷದ ನತಾಶಾ ಈಗ ನ್ಯೂಜೆರ್ಸಿಯ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ನತಾಶಾ ಪೋಷಕರು ಭಾರತದ ಚೆನ್ನೈ ಮೂಲದವರು.

ಪಾಕ್: ಬಸ್ ಕಂದಕಕ್ಕೆ ಬಿದ್ದು 30 ಸಾವು

ಪೆಶಾವರ (ಪಿಟಿಐ): ಪಾಕಿಸ್ತಾನದ ಗಿಲ್ಗಿಟ್ ಬಾಲ್ಟಿಸ್ತಾನ್‌ನ ದಿಯಾಮಿರ್ ಜಿಲ್ಲೆಯ ಶಾಟಿಯಲ್ ಚೆಕ್‌ಪೋಸ್ಟ್ ಬಳಿ ಮಂಗಳವಾರ ಕಾರಿಗೆ ಡಿಕ್ಕಿ ಹೊಡೆದ ಬಸ್ ಆಳವಾದ ಕಂದಕಕ್ಕೆ ಉರುಳಿ ಬಿದ್ದುದರಿಂದ 30 ಮಂದಿ ಮೃತಪಟ್ಟಿದ್ದಾರೆ, ಕಾರು ಸಹ ಕಂದಕಕ್ಕೆ ಬಿದ್ದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬುಧವಾರ, ಫೆಬ್ರುವರಿ 8, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 39 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಮೆಣಸಿನಕಾಯಿಯ
ರೂಪ ವಕ್ರ.
ಇದಕ್ಕೆ ವೈಜ್ಞಾನಿಕ
ಕಾರಣಗಳೂ
ಉಂಟು



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,286 ▼	17,721 ▼	₹59,300 (ಬೆಂಗಳೂರು) ▲	₹69,500 (ಬೆಂಗಳೂರು) ▼	82.70 ▲

ಉತ್ತರ ಭಾರತದ ರಾಜ್ಯಗಳಿಗೆ ಭರಪೂರ ಕೊಡುಗೆ ನೀಡಿದ ಕೇಂದ್ರ ಸರ್ಕಾರ

ವಿಶೇಷ ಅನುದಾನ: ರಾಜ್ಯಕ್ಕೆ ಸೊನ್ನೆ!

• ಮಂಜುನಾಥ ಹೆಬ್ಬಾರ್

ನವದೆಹಲಿ: ಕೇಂದ್ರ ಸರ್ಕಾರವು ಕಳೆದ ಐದು ವರ್ಷಗಳಲ್ಲಿ ವಿಶೇಷ ಅನುದಾನದ ರೂಪದಲ್ಲಿ ಉತ್ತರದ ರಾಜ್ಯಗಳಿಗೆ ದೊಡ್ಡ ಮಟ್ಟದ ನೆರವು ನೀಡಿದೆ. ಆದರೆ, ಕರ್ನಾಟಕಕ್ಕೆ ಚಿಕ್ಕಾಸೂ ನೀಡಿಲ್ಲ.

2017ರಿಂದ ಇಲ್ಲಿಯವರೆಗೆ ಕೇಂದ್ರ ಸರ್ಕಾರ ರಾಜ್ಯಗಳಿಗೆ ಎಷ್ಟು ಅನುದಾನ ನೀಡಿದೆ ಎಂಬ ಪ್ರಶ್ನೆಗೆ ರಾಜ್ಯಸಭೆಯಲ್ಲಿ ಮಂಗಳವಾರ ಲಿಖಿತ ಉತ್ತರ ನೀಡಿರುವ ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಈ ಮಾಹಿತಿ ನೀಡಿದ್ದಾರೆ.

'ಸಂಪನ್ಮೂಲಗಳ ಕ್ರೋಡೀಕರಣದಲ್ಲಿ ಸುಧಾರಣೆ ಆಗಿದ್ದರಿಂದ 2017-18ಕ್ಕೆ ಹೋಲಿಸಿದರೆ 2022-23ಕ್ಕೆ ರಾಜ್ಯಗಳಿಗೆ ನೀಡುತ್ತಿರುವ ನೆರವು ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿದೆ. ಜತೆಗೆ, 14ನೇ ಹಣಕಾಸು ಆಯೋಗ ಹಾಗೂ 15ನೇ ಹಣಕಾಸು ಆಯೋಗದ ಶಿಫಾರಸಿನ ಅನ್ವಯ ನೀಡುತ್ತಿರುವ ನೆರವು ಸಹ ಜಾಸ್ತಿ ಆಗಿದೆ' ಎಂದು ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ.

ದಕ್ಷಿಣದ ರಾಜ್ಯಗಳಿಗೆ ಹಣಕಾಸು ಆಯೋಗದ ಅನುದಾನ (₹ಕೋಟಿಗಳಲ್ಲಿ)

ರಾಜ್ಯ	2017-18	2018-19	2019-20	2020-21	2021-22
ಕರ್ನಾಟಕ	3,621	4,333	7,578	6,246	7,862
ಆಂಧ್ರಪ್ರದೇಶ	6,974	6,553	6,451	12,233	21,342
ಗೋವಾ	62	66	163	85	119
ಕೇರಳ	3,346	4,551	2,343	18,048	22,171
ತಮಿಳುನಾಡು	2,302	4,605	5,905	8,930	10,116
ತೆಲಂಗಾಣ	1,225	1,806	3,219	3,134	1,850

ತೆರಿಗೆ ಪಾಲಿನಲ್ಲೂ ಗಣನೀಯ ಹೆಚ್ಚಳ ಇಲ್ಲ (₹ಮೊತ್ತ ಕೋಟಿಗಳಲ್ಲಿ)

ರಾಜ್ಯ	2017-18	2021-22
ಕರ್ನಾಟಕ	31,751	33,283
ಮಹಾರಾಷ್ಟ್ರ	37,203	54,318
ತಮಿಳುನಾಡು	27,099	37,458
ಉತ್ತರ ಪ್ರದೇಶ	1,20,940	1,60,358

ಉತ್ತರ ರಾಜ್ಯಗಳಾದ ಬಿಹಾರಕ್ಕೆ ₹4,598 ಕೋಟಿ, ಉತ್ತರ ಪ್ರದೇಶಕ್ಕೆ ₹2,117 ಕೋಟಿ, ಉತ್ತರಾಖಂಡಕ್ಕೆ ₹1,581 ಕೋಟಿ, ಮಧ್ಯಪ್ರದೇಶಕ್ಕೆ ₹759 ಕೋಟಿ, ಗುಜರಾತ್‌ಗೆ ₹431 ಕೋಟಿ ವಿಶೇಷ ಅನುದಾನ ಒದಗಿಸಲಾಗಿದೆ. ಈಶಾನ್ಯದ ರಾಜ್ಯಗಳಿಗೆ ಸಹ ದೊಡ್ಡ ಪಾಲು ಸಿಕ್ಕಿದೆ. ತ್ರಿಪುರಕ್ಕೆ ₹2,498 ಕೋಟಿ, ನಾಗಾಲ್ಯಾಂಡ್‌ಗೆ ₹500 ಕೋಟಿ, ಅರುಣಾಚಲ ಪ್ರದೇಶಕ್ಕೆ ₹672 ಕೋಟಿ ಕೊಡಲಾಗಿದೆ. ನೆರೆಯ ರಾಜ್ಯಗಳಾದ ಆಂಧ್ರ ಪ್ರದೇಶಕ್ಕೆ ₹3,501 ಕೋಟಿ, ತೆಲಂಗಾಣಕ್ಕೆ ₹1,350 ಕೋಟಿ ದೊರಕಿದೆ. ಬಿಜೆಪಿಯೇತರ ಪಕ್ಷಗಳು ಆಡಳಿತ ನಡೆಸುತ್ತಿರುವ ಹಲವು ರಾಜ್ಯಗಳಿಗೆ ವಿಶೇಷ ಅನುದಾನ ಸಿಕ್ಕಿಲ್ಲ.

ಬಾಹ್ಯ ನೆರವಿನ ಯೋಜನೆಗಳಿಗೆ ಸಹಾಯಧನದಲ್ಲೂ ರಾಜ್ಯಕ್ಕೆ ಸಿಕ್ಕಿದ್ದು ಚಿಕ್ಕಾಸು. ಐದು ವರ್ಷಗಳಲ್ಲಿ ಕರ್ನಾಟಕಕ್ಕೆ ₹45.50 ಕೋಟಿಯನ್ನು ಕೇಂದ್ರ ಕೊಟ್ಟಿದೆ. ಸಣ್ಣ ರಾಜ್ಯಗಳಾದ ಅಸ್ಸಾಂ (₹4845 ಕೋಟಿ), ಹಿಮಾಚಲ ಪ್ರದೇಶ (₹3,379 ಕೋಟಿ), ಉತ್ತರಾಖಂಡಕ್ಕೆ (₹4,016 ಕೋಟಿ) ಕೇಂದ್ರ ಸರ್ಕಾರ 'ಉದಾರ'ವಾಗಿ ಸಹಾಯಧನ ಒದಗಿಸಿದೆ.

ಬಂಡವಾಳ ವೆಚ್ಚಕ್ಕಾಗಿ ವಿಶೇಷ ನೆರವಿನ ರೂಪದಲ್ಲಿ ರಾಜ್ಯಕ್ಕೆ ಮೂರು ವರ್ಷಗಳಲ್ಲಿ ಬಂದಿದ್ದು ₹2,696 ಕೋಟಿ. ಉತ್ತರ ಪ್ರದೇಶಕ್ಕೆ ₹10,113 ಕೋಟಿ, ಮಧ್ಯಪ್ರದೇಶಕ್ಕೆ ₹6,463 ಕೋಟಿ, ಮಹಾರಾಷ್ಟ್ರಕ್ಕೆ 4,674 ಕೋಟಿ, ಬಿಹಾರಕ್ಕೆ ₹6,644 ಕೋಟಿ, ಪಶ್ಚಿಮ ಬಂಗಾಳಕ್ಕೆ ₹4,826 ಕೋಟಿ ಸಿಕ್ಕಿದೆ.

ರಾಜ್ಯದ ಸಾಲದ ಪ್ರಮಾಣ ದುಪ್ಪಟ್ಟು

ಕರ್ನಾಟಕ ರಾಜ್ಯದ ಸಾಲದ ಪ್ರಮಾಣ ಐದು ವರ್ಷಗಳಲ್ಲಿ ದುಪ್ಪಟ್ಟು ಆಗಿದೆ.

ರಾಜ್ಯಸಭೆಯಲ್ಲಿ ಲಿಖಿತ ಉತ್ತರ ನೀಡಿರುವ ಸಚಿವರು, '2018ರಲ್ಲಿ ₹2.45 ಲಕ್ಷ ಕೋಟಿ ಇದ್ದ ರಾಜ್ಯದ ಸಾಲ 2022ರಲ್ಲಿ ಮಾರ್ಚ್ ಅಂತ್ಯಕ್ಕೆ ₹4.73 ಲಕ್ಷ ಕೋಟಿಗೆ ಏರಿದೆ' ಎಂದು ತಿಳಿಸಿದ್ದಾರೆ.

2025-26ನೇ ಆರ್ಥಿಕ ವರ್ಷಕ್ಕೆ ರಾಜ್ಯ ಸರ್ಕಾರದ ಒಟ್ಟು ಸಾಲದ ಮೊತ್ತ ₹ 7,38,510 ಕೋಟಿ ತಲುಪಲಿದೆ ಎಂದು ಕರ್ನಾಟಕದ ಹಣಕಾಸು ಇಲಾಖೆ ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿ (2022-26ರ ಅವಧಿ) ಈಗಾಗಲೇ ಅಂದಾಜು ಮಾಡಿದೆ.

2022-23ನೇ ಆರ್ಥಿಕ ವರ್ಷದಲ್ಲಿ ಸಾಲದ ಪ್ರಮಾಣ ₹60,334 ಕೋಟಿಯಷ್ಟು ಹೆಚ್ಚಲಿದ್ದು, ₹ 5,18,366 ಕೋಟಿ ತಲುಪಲಿದೆ. ಮುಂದಿನ ನಾಲ್ಕು ಆರ್ಥಿಕ ವರ್ಷಗಳಲ್ಲಿ ರಾಜ್ಯ ಸರ್ಕಾರದ ಒಟ್ಟು ಸಾಲದ ಮೊತ್ತದಲ್ಲಿ ₹ 2,80,468 ಕೋಟಿಯಷ್ಟು ಹೆಚ್ಚಳವಾಗಲಿದೆ. ಪ್ರಸ್ತುತ ರಾಜ್ಯ ಸರ್ಕಾರದ ಒಟ್ಟು ಸಾಲದ ಮೊತ್ತವು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ಜಿಎಸ್‌ಡಿಪಿ) ಶೇ 26.61ರಷ್ಟಿದೆ. ಮುಂದಿನ ವರ್ಷದಿಂದ ಗಣನೀಯ ಏರಿಕೆಯಾಗಲಿದ್ದು, 2025ರಲ್ಲಿ ರಾಜ್ಯ ಸರ್ಕಾರದ ಒಟ್ಟು ಸಾಲದ ಮೊತ್ತವು ರಾಜ್ಯದ ಆಗಿನ ಜಿಎಸ್‌ಡಿಯ ಶೇ 27.55ರಷ್ಟಾಗಲಿದೆ ಎಂದೂ ಆರ್ಥಿಕ ಇಲಾಖೆ ಅಂದಾಜಿಸಿದೆ.

ಅದಾನಿಗೂ ಮೋದಿಗೂ ಏನು ಸಂಬಂಧ: ರಾಹುಲ್ ಪ್ರಶ್ನೆ

ನವದೆಹಲಿ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಮತ್ತು ಉದ್ಯಮಿ ಗೌತಮ್ ಅದಾನಿ ಅವರ ನಡುವೆ ಇರುವ ಸಂಬಂಧವೇನು? 2014ರಲ್ಲಿ ₹ 60 ಸಾವಿರ ಕೋಟಿಯಷ್ಟಿದ್ದ ಅದಾನಿಯ ಸಂಪತ್ತು 2022ರ ವೇಳೆಗೆ ₹ 12 ಲಕ್ಷ ಕೋಟಿಗೆ ಏರಿದ್ದು ಹೇಗೆ ಎಂದು ದೇಶದುದ್ದಕ್ಕೂ ಜನರು ಪ್ರಶ್ನಿಸುತ್ತಿದ್ದಾರೆ' ಎಂದು ಲೋಕಸಭೆಯಲ್ಲಿ ರಾಹುಲ್ ಗಾಂಧಿ ಮಂಗಳವಾರ ಹೇಳಿದ್ದಾರೆ.

ರಾಷ್ಟ್ರಪತಿಯವರು ಸಂಸತ್ತಿನ ಜಂಟಿ ಅಧಿವೇಶನ ಉದ್ದೇಶಿಸಿ ಮಾಡಿದ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ರಾಹುಲ್ ಮಾತನಾಡಿದರು. 'ತಮಿಳುನಾಡಿನಿಂದ ಹಿಮಾಚಲದವರೆಗೆ ಭಾರತ್ ಜೋಡೊ ಯಾತ್ರೆಯುದ್ದಕ್ಕೂ ಜನರು ಈ ಪ್ರಶ್ನೆ ಕೇಳಿದರು' ಎಂದು ಹೇಳಿದರು. 'ಅದಕ್ಕೆ ಉತ್ತರ ಇದು' ಎಂದು ರಾಹುಲ್ ಅವರು, ಅದಾನಿ ಜತೆಗೆ ಮೋದಿ ಅವರು ವಿಮಾನದಲ್ಲಿ ಕೂತಿರುವ ಮತ್ತು ಅದಾನಿ ಅವರಿಗೆ ಸೇರಿದ ವಿಮಾನದಿಂದ ಮೋದಿ ಅವರು ಇಳಿಯುತ್ತಿದ್ದ ಚಿತ್ರಗಳನ್ನು ಲೋಕಸಭೆಯಲ್ಲಿ ಪ್ರದರ್ಶಿಸಿದರು.

ಸ್ಪೀಕರ್ ಓಂ ಬಿರ್ಲಾ ಅವರು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದರೂ ರಾಹುಲ್ ಮತ್ತಷ್ಟು ಪ್ರಶ್ನೆಗಳನ್ನು ಸದನದ ಮುಂದಿಟ್ಟರು. 'ಅದಾನಿ ಅವರಿಗೆ ಸಂಬಂಧಿಸಿದ ಚರ್ಚೆಯಿಂದ ಪ್ರಧಾನಿ ಮೋದಿ ಅವರು ತಪ್ಪಿಸಿಕೊಳ್ಳುತ್ತಾರೆ. ಆದರೆ, ಅವರು ಲೋಕಸಭೆಯಲ್ಲಿ ಮಾತನಾಡುವ ವೇಳೆ ಈ ಕೆಲವಾರು ಪ್ರಶ್ನೆಗಳಿಗೆ ಉತ್ತರ ನೀಡಲಿ' ಎಂದು ಆಗ್ರಹಿಸಿದರು.

'ಮೋದಿ ಅವರೇ, ನಿಮ್ಮ ವಿದೇಶಿ ಪ್ರಯಾಣಗಳಲ್ಲಿ ಎಷ್ಟು ಬಾರಿ ಅದಾನಿ ಅವರು ನಿಮ್ಮ ಜೊತೆಯಲ್ಲಿದ್ದರು? ನೀವು ವಿದೇಶಗಳಿಗೆ ಹೋದ ನಂತರ, ಅದಾನಿ ಅವರು ಬಂದು ಎಷ್ಟು ಬಾರಿ ನಿಮ್ಮನ್ನು ಸೇರಿಕೊಂಡರು? ನಿಮ್ಮ ವಿದೇಶಿ ಭೇಟಿಯ ನಂತರ ಎಷ್ಟು ಬಾರಿ ಅದಾನಿ ಅವರು ತಕ್ಷಣವೇ ಆ ದೇಶಕ್ಕೆ ಭೇಟಿ ನೀಡಿದರು? ನಿಮ್ಮ ವಿದೇಶಿ ಭೇಟಿಯ ನಂತರ ಅದಾನಿ ಅವರು ಆ ದೇಶಗಳಲ್ಲಿ ಎಷ್ಟು ಬಾರಿ ಉದ್ಯಮ ಒಪ್ಪಂದ/ಗುತ್ತಿಗೆ ಪಡೆದಿದ್ದಾರೆ' ಎಂದು ಸಾಲು ಸಾಲು ಪ್ರಶ್ನೆಗಳನ್ನು ರಾಹುಲ್ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಮುಂದಿಟ್ಟರು.



ಗೌತಮ್ ಅದಾನಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಒಂದೇ ವಿಮಾನದಲ್ಲಿ ಇರುವ ಚಿತ್ರವನ್ನು ರಾಹುಲ್ ಗಾಂಧಿ ಅವರು ಮಂಗಳವಾರ ಲೋಕಸಭೆಯಲ್ಲಿ ಪ್ರದರ್ಶಿಸಿದರು —ಪಿಟಿಐ ಚಿತ್ರ

ರಾಹುಲ್ ಅವರು ಸಂಸತ್ತಿನಲ್ಲಿ ಈ ರೀತಿ ಸುಮ್ಮನೇ ಆರೋಪ ಮಾಡುವುದಲ್ಲ. ಬದಲಿಗೆ ಈ ಆರೋಪಗಳಿಗೆ ಸಾಕ್ಷ್ಯಗಳನ್ನು ಸದನದ ಮುಂದಿರಿಸಬೇಕು
ಕಿರಣ್ ರಿಜಿಜು, ಕೇಂದ್ರ ಕಾನೂನು ಸಚಿವ

ಚುನಾವಣಾ ಬಾಂಡ್‌ಗಳೂ ಸೇರಿ, 20 ವರ್ಷಗಳಲ್ಲಿ ಅದಾನಿ ಅವರು ಬಿಜೆಪಿಗೆ ಎಷ್ಟು ದೇಣಿಗೆ ನೀಡಿದ್ದಾರೆ ಎಂಬುದನ್ನು ಬಹಿರಂಗಪಡಿಸಬೇಕು
ರಾಹುಲ್ ಗಾಂಧಿ, ಕಾಂಗ್ರೆಸ್ ಸಂಸದ

11ನೇ ಪುಟ ನೋಡಿ

'ಗುತ್ತಿಗೆ: ಕಮಿಷನ್ ಆಸೆಗೆ ಸ್ಥಳೀಯರಿಗೆ ಅನ್ಯಾಯ'

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಕ್ಷೇತ್ರದ ಶಾಸಕ ಸಿದ್ದರಾಮಯ್ಯ ಅವರ ಆಪ್ತರು ಕಮಿಷನ್ ಆಸೆಗಾಗಿ ಟೆಂಡರ್ ಅನ್ನು ರಾಜ್ಯಮಟ್ಟದ ಗುತ್ತಿಗೆದಾರರಿಗೆ ಸಿಗುವಂತೆ ನೋಡಿಕೊಳ್ಳುತ್ತಿದ್ದಾರೆ' ಎಂದು ಬಾದಾಮಿ ತಾಲ್ಲೂಕು ಗುತ್ತಿಗೆದಾರರ ಸಂಘ ಆರೋಪಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಬಿ.ಬಿ. ಹೊಸಗೌಡರ ಮತ್ತು ಗುತ್ತಿಗೆದಾರ ಬಾಲಪ್ಪ ನಂದೆಪ್ಪನವರ್, 'ಸ್ಥಳೀಯ ಪ್ರಥಮದರ್ಜೆ ಗುತ್ತಿಗೆದಾರರು ₹3 ಕೋಟಿ ಮೊತ್ತದವರೆಗಿನ ಟೆಂಡರ್ ಪಡೆಯಬಹುದಾಗಿದೆ. ಆದರೆ, ಸ್ಥಳೀಯರಿಗೆ ತಪ್ಪಿಸಲು ಮೂರು ನಾಲ್ಕು ಕಾಮಗಾರಿಗಳನ್ನು ಸೇರಿಸಿ ಪ್ಯಾಕೇಜ್ ಮಾಡಿ ಹೆಚ್ಚಿನ ಮೊತ್ತದ ಒಂದೇ ಟೆಂಡರ್ ಕರೆದು ಹೊರಗಿನವರಿಗೆ ಸಿಗುವಂತೆ ಮಾಡಲಾಗುತ್ತಿದೆ' ಎಂದು ದೂರಿದರು.

'ವೈಯಕ್ತಿಕವಾಗಿ ಶೇ 10 ರಿಂದ 15ರಷ್ಟು ಕಮಿಷನ್ ನಡೆಯುತ್ತಿದೆ. ಒಟ್ಟಾರೆ ಶೇ 40 ಮೀರುತ್ತದೆ. ಎಲ್ಲವೂ ಸಿದ್ದರಾಮಯ್ಯ ಆಪ್ತ, ಕಾಂಗ್ರೆಸ್ ಮುಖಂಡ ಹೊಳೆಬಸು ಶೆಟ್ಟರ್ ಹೇಳಿದಂತೆ ನಡೆಯುತ್ತಿದೆ. ಸ್ಥಳೀಯ ಗುತ್ತಿಗೆದಾರರು ವಾಹನಗಳನ್ನು ಮಾರುವ ಸ್ಥಿತಿ ಬಂದಿದೆ' ಎಂದು ಹೇಳಿದರು.

'ಈ ಬಗ್ಗೆ ಸಿದ್ದರಾಮಯ್ಯ ಅವರನ್ನು ದೂರುವುದಿಲ್ಲ. ಅವರ ಗಮನಕ್ಕೆ ಬಾರದಂತೆ ಹಿಂಬಾಲಕರು ನಿಭಾಯಿಸುತ್ತಿದ್ದಾರೆ. ಬಾದಾಮಿಗೆ ಬಂದಾಗ ಸಿದ್ದರಾಮಯ್ಯ ಅವರನ್ನು ಭೇಟಿಯಾಗಲು ಅವರ ಹಿಂಬಾಲಕರು ಬಿಡುವುದಿಲ್ಲ' ಎಂದರು.

'ಟೆಂಡರ್ ಕರೆಯುವಾಗ ಪಾರದರ್ಶಕತೆ ಕಾಪಾಡಬೇಕು. ಇಲ್ಲದಿದ್ದರೆ, ಕಾನೂನು ಹೋರಾಟ ಮಾಡುವ ಜತೆಗೆ ಲೋಕಾಯುಕ್ತಕ್ಕೂ ದೂರು ಸಲ್ಲಿಸಲಾಗುವುದು' ಎಂದು ತಿಳಿಸಿದರು.

ನಾನು ಶಾಸಕನಲ್ಲ. ಅಧಿಕಾರಿಗಳು ನಿಯಮದ ಪ್ರಕಾರ ಟೆಂಡರ್ ಕರೆದು, ಅರ್ಹರಿಗೆ ಕೊಡುತ್ತಾರೆ. ಸುಳ್ಳು ಆರೋಪ ಮಾಡಿದ್ದಾರೆ
ಹೊಳೆಬಸು ಶೆಟ್ಟರ್, ಕಾಂಗ್ರೆಸ್ ಮುಖಂಡ

ಭೂಕಂಪ: ಟರ್ಕಿಯ 10 ಪ್ರಾಂತ್ಯಗಳಲ್ಲಿ ತುರ್ತು ಸ್ಥಿತಿ ಘೋಷಣೆ

7,200 ದಾಟಿದ ಸಾವಿನ ಸಂಖ್ಯೆ

ಅದಾನಾ/ಅಂಕಾರಾ (ಟರ್ಕಿ) (ಎಪಿ): ಟರ್ಕಿ ಮತ್ತು ಸಿರಿಯಾದಲ್ಲಿ ಸೋಮವಾರ ಸಂಭವಿಸಿದ ಪ್ರಬಲ ಭೂಕಂಪದಿಂದ ಸಾವು- ನೋವಿನ ಸಂಖ್ಯೆ ಹೆಚ್ಚುತ್ತಿದೆ. ಉಭಯ ರಾಷ್ಟ್ರಗಳಲ್ಲಿ ಮೃತರ ಸಂಖ್ಯೆ ಮಂಗಳವಾರ ಒಟ್ಟು 7,200ಕ್ಕೆ ಏರಿದೆ. ಕಟ್ಟಡಗಳ ಅವಶೇಷಗಳಡಿ ಸಿಲುಕಿದವರ ರಕ್ಷಣೆಗಾಗಿ ತ್ವರಿತ ಕಾರ್ಯಾಚರಣೆ ಮುಂದುವರಿದಿದೆ. ಅಸ್ಥಿರ ಕಟ್ಟಡಗಳು ಮತ್ತು ಕೊರೆಯುವ ಚಳಿ, ರಕ್ಷಣಾ ಕಾರ್ಯಕ್ಕೆ ಸವಾಲಾಗಿದೆ.

ಮೊದಲಿಗೆ ಸಂಭವಿಸಿದ ಪ್ರಬಲ ಕಂಪನ ಮತ್ತು ನಂತರದ ಸುಮಾರು 200 ಕಂಪನಗಳ ಪರಿಣಾಮ ಎರಡೂ ರಾಷ್ಟ್ರಗಳಲ್ಲಿ ಭಾರಿ ಹಾನಿಯಾಗಿದೆ. ರಿಕ್ಟರ್ ಮಾಪಕದಲ್ಲಿ ದಾಖಲಾಗಿದ್ದ 7.8 ತೀವ್ರತೆಯ ಭೂಕಂಪದಿಂದ ಸಿರಿಯಾದ ಅಲೆಪ್ಪೊ ಮತ್ತು ಹಮಾ ನಗರ ಹಾಗೂ ಟರ್ಕಿಯ ದಿಯಾರ್ ಬಕೀರ್‌ವರೆಗೆ ಸಾವಿರಾರು ಕಟ್ಟಡಗಳು ಕುಸಿದಿವೆ. ಟರ್ಕಿಯ ಗಡಿ ಪ್ರದೇಶದಲ್ಲಿ ಸುಮಾರು 6 ಸಾವಿರ ಕಟ್ಟಡಗಳು ನೆಲಸಮವಾಗಿವೆ. ಆಗ್ನೇಯದ ಹತ್ತು ಪ್ರಾಂತ್ಯಗಳಲ್ಲಿ ಮೂರು ತಿಂಗಳ ಕಾಲ ತುರ್ತು ಸ್ಥಿತಿಯನ್ನು ಟರ್ಕಿ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೊಗನ್ ಅವರು ಮಂಗಳವಾರ ಘೋಷಿಸಿದರು.

ಭಾರತ, ಅಮೆರಿಕ, ಬ್ರಿಟನ್ ಸೇರಿ ವಿಶ್ವದ ಹಲವು ರಾಷ್ಟ್ರಗಳು ಸಂತ್ರಸ್ತರ ನೆರವಿಗಾಗಿ ಔಷಧ, ಪರಿಹಾರ ಸಾಮಗ್ರಿ ಹಾಗೂ ವಿಪತ್ತು ಸ್ಪಂದನಾ ಪಡೆಗಳನ್ನು ಟರ್ಕಿಗೆ ಕಳುಹಿಸಿವೆ. 24,400ಕ್ಕೂ ಹೆಚ್ಚು ತುರ್ತುಸೇವಾ ಸಿಬ್ಬಂದಿ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದಾರೆ ಎಂದು ಟರ್ಕಿ ವಿಪತ್ತು ನಿರ್ವಹಣೆ ಏಜೆನ್ಸಿ ಹೇಳಿದೆ. ಹತ್ತು ಪ್ರಾಂತ್ಯಗಳಲ್ಲಿ ಈವರೆಗೆ 7,800ಕ್ಕೂ ಹೆಚ್ಚು ಜನರನ್ನು ರಕ್ಷಿಸಲಾಗಿದೆ ಎಂದು ಟರ್ಕಿಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧಿಕಾರಿ ಓರ್ಹಾನ್ ಟಾಟರ್ ಮಾಹಿತಿ ನೀಡಿದ್ದಾರೆ.

ಟರ್ಕಿಯಲ್ಲಿ ಸಾವಿನ ಸಂಖ್ಯೆ 5,400ಕ್ಕೆ ಏರಿದೆ. ಗಾಯಾಳುಗಳ ಸಂಖ್ಯೆ 31,000ಕ್ಕೆ ತಲುಪಿದೆ ಎಂದು ಉಪಾಧ್ಯಕ್ಷ ಫುವಾಟ್ ಒಕ್ಟಾಯ್ ಮಾಹಿತಿ ನೀಡಿದ್ದಾರೆ. ಸಿರಿಯಾ ಸರ್ಕಾರಿ ನಿಯಂತ್ರಣ ಮತ್ತು ಬಂಡುಕೋರರ ಹಿಡಿತದ ಪ್ರದೇಶಗಳಲ್ಲಿ 1,800 ಜನರು ಮೃತಪಟ್ಟಿದ್ದಾರೆ. ಈ ದುರಂತದಲ್ಲಿ 20 ಸಾವಿರ ಜನರು ಮೃತಪಟ್ಟಿರುವುದಾಗಿ ವಿಶ್ವ ಆರೋಗ್ಯ ಸಂಸ್ಥೆ ಅಂದಾಜಿಸಿದೆ.

ಆರೋಗ್ಯ ಸಚಿವಾಲಯದ ಮಾಹಿತಿ ಪ್ರಕಾರ, ಸಿರಿಯಾ ಸರ್ಕಾರಿ ನಿಯಂತ್ರಿತ ಪ್ರದೇಶದಲ್ಲಿ ಗಾಯಾಳುಗಳ ಸಂಖ್ಯೆ 1,400ಕ್ಕೆ ಏರಿದೆ. ಬಂಡುಕೋರರ ಹಿಡಿತದ ವಾಯವ್ಯ ಸಿರಿಯಾದಲ್ಲಿ 2,300ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಅಲ್ಲಿ ರಕ್ಷಣಾ ಕಾರ್ಯದಲ್ಲಿ ತೊಡಗಿರುವ ಅರೆ ವೈದ್ಯಕೀಯ ಗುಂಪು ಹೇಳಿದೆ.

ವಿಡಿಯೊ ಒಂದರಲ್ಲಿರುವ ದೃಶ್ಯದ ಪ್ರಕಾರ, ಎರಡನೆಯ ಬಾರಿ ಭೂಮಿ ಕಂಪಿಸಿದಾಗ ಟರ್ಕಿಯ ಸ್ಯಾನ್ಲಿಯುರ್ಫಾದಲ್ಲಿ ಬಹುಮಹಡಿ ಕಟ್ಟಡ ಧರೆಗುರುಳಿ, ಅವಶೇಷಗಳ ದೂಳು ಮುಗಿಲೆತ್ತರಕ್ಕೆ ಆವರಿಸಿದೆ.

11ನೇ ಪುಟ ನೋಡಿ



ಟರ್ಕಿಯ ಕಹ್ರಾಮನ್ಮರಸ್‌ನಲ್ಲಿ ಕಟ್ಟಡದ ಅವಶೇಷಗಳಡಿ ಸಿಲುಕಿ ಮೃತಪಟ್ಟ 15 ವರ್ಷದ ಪುತ್ರಿಯ ಕೈಹಿಡಿದುಕೊಂಡು ವ್ಯಕ್ತಿಯೊಬ್ಬರು ಶೋಕತಪ್ತರಾಗಿ ಕುಳಿತಿದ್ದ ದೃಶ್ಯ ಮಂಗಳವಾರ ಕಂಡುಬಂತು— ಎಎಫ್‌ಪಿ ಚಿತ್ರ

ಲೋಕಾಯುಕ್ತ: 6 ತಿಂಗಳಾದರೂ ಆರಂಭವಾಗದ ಪ್ರಕ್ರಿಯೆ

ಕಾಯ್ದೆ ತಿದ್ದುಪಡಿಗೆ ನಿರಾಸಕ್ತಿ


• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಲೋಕಾಯುಕ್ತ ಅಥವಾ ಉಪ ಲೋಕಾಯುಕ್ತರು ಸರ್ಕಾರಿ ಹಾಗೂ ಸಾರ್ವಜನಿಕ ನೌಕರರ ವಿರುದ್ಧ ವಿಚಾರಣೆ ನಡೆಸಿ ಸಲ್ಲಿಸುವ ವರದಿಗಳನ್ನು ಅಂಗೀಕರಿಸಿ, ಕ್ರಮ ಜರುಗಿಸುವುದನ್ನು ಕಡ್ಡಾಯಗೊಳಿಸುವುದಕ್ಕೆ ಪೂರಕವಾಗಿ ಕರ್ನಾಟಕ ಲೋಕಾಯುಕ್ತ ಕಾಯ್ದೆಗೆ ತಿದ್ದುಪಡಿ ತರುವಂತೆ ಹೈಕೋರ್ಟ್ ವಿಭಾಗೀಯ ಪೀಠ ಶಿಫಾರಸು ಮಾಡಿ ಆರು ತಿಂಗಳು ಕಳೆದರೂ ಯಾವುದೇ ಪ್ರಕ್ರಿಯೆ ಆರಂಭವಾಗಿಲ್ಲ.

ಕರ್ನಾಟಕ ಲೋಕಾಯುಕ್ತ ಕಾಯ್ದೆ–1984ರ ಸೆಕ್ಷನ್ 12(4)ರ ಪ್ರಕಾರ, ಸರ್ಕಾರಿ ಹಾಗೂ ಸಾರ್ವಜನಿಕ ನೌಕರರ ವಿರುದ್ಧದ ಆರೋಪಗಳ ಕುರಿತು ಲೋಕಾಯುಕ್ತ ಅಥವಾ ಉಪ ಲೋಕಾಯುಕ್ತರು ವಿಚಾರಣೆ ನಡೆಸಿ ಸೆಕ್ಷನ್ 12(3)ರ ಅಡಿಯಲ್ಲಿ ಸಲ್ಲಿಸುವ ವರದಿಗಳನ್ನು ಅಂಗೀಕರಿಸುವ ಇಲ್ಲವೇ ತಿರಸ್ಕರಿಸುವ ಅಧಿಕಾರ ಸರ್ಕಾರಕ್ಕೆ ಇದೆ.

5ನೇ ಪುಟ ನೋಡಿ

'ತಿದ್ದುಪಡಿ ತರದಿದ್ದರೆ ವಿಚಾರಣೆಗೆ ಅರ್ಥವಿಲ್ಲ'



ಬಿ.ಎಸ್. ಪಾಟೀಲ

'ಲೋಕಾಯುಕ್ತ ಕಾಯ್ದೆಗೆ ತಿದ್ದುಪಡಿ ತರಬೇಕೆಂಬ ಹೈಕೋರ್ಟ್ ಶಿಫಾರಸು ಜಾರಿಗೆ ಬಂದರೆ ಮಾತ್ರ ನಾವು ನಡೆಸುವ ವಿಚಾರಣೆಗಳಿಗೆ ಅರ್ಥವಿರುತ್ತದೆ. ಇಲ್ಲವಾದರೆ, ಲೋಕಾಯುಕ್ತ ಸಂಸ್ಥೆ ಕಳಿಸುವ ವಿಚಾರಣಾ ವರದಿಗಳನ್ನು ಸರ್ಕಾರ ತನ್ನ ಬಳಿ ಇರಿಸಿಕೊಂಡು ಸುಮ್ಮನಾಗುವುದು ಮುಂದುವರಿಯುತ್ತದೆ. ಇದರಿಂದ ವಿಚಾರಣೆಯ ಉದ್ದೇಶವೇ ಈಡೇರುವುದಿಲ್ಲ' ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಹೇಳುತ್ತಾರೆ.

'ಲೋಕಾಯುಕ್ತದ ವರದಿಗಳನ್ನು ಒಪ್ಪಿಕೊಳ್ಳುವುದು ಕಡ್ಡಾಯವಾಗಬೇಕು. ವರದಿಗಳಲ್ಲಿ ಲೋಪವಿದ್ದರೆ ನ್ಯಾಯಾಂಗದಲ್ಲಿ ಪ್ರಶ್ನಿಸಲು ಅವಕಾಶ ಇರುತ್ತದೆ. ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಕಾಯ್ದೆ ತಿದ್ದುಪಡಿಗೆ ತಕ್ಷಣ ಕ್ರಮ ಕೈಗೊಳ್ಳಬೇಕು' ಎನ್ನುತ್ತಾರೆ.

ನ್ಯಾಯಮೂರ್ತಿಯಾಗಿ ಗೌರಿ ಪ್ರಮಾಣ

ಚೆನ್ನೈ (ಪಿಟಿಐ): ಮದ್ರಾಸ್ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ವಕೀಲೆ ಲಕ್ಷ್ಮಣ ಚಂದ್ರ ವಿಕ್ಟೋರಿಯಾ ಗೌರಿ ಅವರು ಮಂಗಳವಾರ ಪ್ರಮಾಣ ವಚನ ಸ್ವೀಕರಿಸಿದರು.

'ಮುಸ್ಲಿಮರು ಹಾಗೂ ಕ್ರೈಸ್ತರ ಕುರಿತು 'ದ್ವೇಷ ಭಾಷಣ' ಮಾಡಿದ್ದಾರೆ. ಜೊತೆಗೆ ಗೌರಿ ಅವರಿಗೆ ಬಿಜೆಪಿಯೊಂದಿಗೆ ನಂಟಿದೆ. ಹಾಗಾಗಿ ಪ್ರಮಾಣ ವಚನ ಸ್ವೀಕರಿಸುವುದಕ್ಕೆ ತಡೆ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್‌ಗೂ ಕೆಲ ವಕೀಲರು ಅರ್ಜಿ ಸಲ್ಲಿಸಿದ್ದರು. ಆದರೆ, ಸುಪ್ರೀಂ ಕೋರ್ಟ್ ಈ ಅರ್ಜಿಯನ್ನು ವಜಾ ಮಾಡಿದೆ.

ವಕೀಲರಾದ ಅಣ್ಣಾ ಮ್ಯಾಥ್ಯೂ, ಸುಧಾ ರಾಮಲಿಂಗಂ ಹಾಗೂ ಡಿ. ನಾಗಶೈಲಾ ಅವರು ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಯುತ್ತಿದ್ದ ಸಂದರ್ಭದಲ್ಲೇ, ಗೌರಿ ಅವರು ಮದ್ರಾಸ್ ಹೈಕೋರ್ಟ್‌ನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಮದ್ರಾಸ್ ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಟಿ. ರಾಜಾ ಅವರು ಪ್ರಮಾಣವಚನ ಬೋಧಿಸಿದರು.

ಪ್ರಮಾಣವಚನ ಸ್ವೀಕರಿಸಿದ ಬಳಿಕ ಮಾತನಾಡಿದ 49 ವರ್ಷದ ಗೌರಿ, 'ಸಂವಿಧಾನ ಶಿಲ್ಪಿಗಳ ಕನಸನ್ನು ನನಸು ಮಾಡುವಂಥ ನ್ಯಾಯದಾನ ಮಾಡುತ್ತೇನೆ' ಎಂದರು.

ಸ್ವಾಮಿ ವಿವೇಕಾನಂದರ ನುಡಿಗಳನ್ನು ಉಲ್ಲೇಖಿಸಿ ಮಾತನಾಡಿದ ಅವರು, 'ಅತಿ ದೊಡ್ಡ ಜವಾಬ್ದಾರಿಯನ್ನು ನನಗೆ ವಹಿಸಲಾಗಿದೆ. ದನಿ ಇಲ್ಲದ, ದಮನಿತರ ಪರವಾಗಿ ಕೆಲಸ ಮಾಡಲು ನನಗೆ ಈ ಜವಾಬ್ದಾರಿ ನೀಡಲಾಗಿದೆ ಎನ್ನುವ ಅರಿವಿದೆ' ಎಂದರು.

ಪತಿಯ ಪಾದಕ್ಕೆ ಎರಗುವೆ: 'ಎಲ್ಲಾ 'ಪ್ರಯೋಗಗಳಲ್ಲೂ' ನನ್ನ ಜೊತೆಗಿದ್ದ, ನನ್ನ ಜೀವನವು ನಿಂತ ನೀರಾಗದೆ, ಸದಾ ಹರಿಯುತ್ತಿರುವಂತೆ ಮಾಡಿದ ನನ್ನ ಪತಿ ತಿರು ತುಳಸಿ ಮುತ್ತು ರಾಮ್ ಅವರ ಪವಿತ್ರ ಪಾದಗಳಿಗೆ ಎರಗುವೆ' ಎಂದರು.

ಇನ್ನಷ್ಟು ಸುದ್ದಿಗಳು ಪುಟ 11



ಸಮಾಜದಲ್ಲಿರುವ ಅಸಮಾನತೆಯನ್ನು ತೊಡೆದು ಹಾಕಿ, ವೈವಿಧ್ಯ ಭಾರತದ ಸಹೋದರತೆಯನ್ನು ಕಾಪಾಡುತ್ತೇನೆ
ಲಕ್ಷ್ಮಣ ಚಂದ್ರ ವಿಕ್ಟೋರಿಯಾ ಗೌರಿ
ಹೆಚ್ಚುವರಿ ನ್ಯಾಯಮೂರ್ತಿ, ಮದ್ರಾಸ್ ಹೈಕೋರ್ಟ್

ಬೆಂಗಳೂರಿನಲ್ಲಿ ಏಕಕಾಲಕ್ಕೆ 108 ಕಡೆ ಕ್ಲಿನಿಕ್‌ಗಳು ಶುರು

'ನಮ್ಮ ಕ್ಲಿನಿಕ್'ಗಳಿಗೆ ಸಿ.ಎಂ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡ, ಮಧ್ಯಮ ಮತ್ತು ಕೊಳೆಗೇರಿ ವಾಸಿಗಳಿಗೆ ಒಂದೇ ಸೂರಿನಡಿ ಎಲ್ಲ ರೀತಿಯ ಆರೋಗ್ಯ ಸೇವೆಗಳನ್ನು ನೀಡುವ 'ನಮ್ಮ ಕ್ಲಿನಿಕ್'ಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ಉದ್ಘಾಟಿಸಿದರು.

ಮಹಾಲಕ್ಷ್ಮೀ ಲೇಔಟ್‌ನ ರಾಣಿ ಅಬ್ಬಕ್ಕದೇವಿ ಆಟದ ಮೈದಾನದಲ್ಲಿ ಬಿಬಿಎಂಪಿ ವ್ಯಾಪ್ತಿಯ ಒಟ್ಟು 108 'ನಮ್ಮ ಕ್ಲಿನಿಕ್'ಗಳಿಗೆ ಏಕಕಾಲಕ್ಕೆ ಚಾಲನೆ ನೀಡಿದ ಅವರು, 'ನಮ್ಮ ಕ್ಲಿನಿಕ್ ಒಂದು ಕ್ರಾಂತಿಕಾರಿ ಹೆಜ್ಜೆ' ಎಂದು ವ್ಯಾಖ್ಯಾನಿಸಿದರು.


'ನೆಗಡಿ, ಕೆಮ್ಮು, ರಕ್ತದೊತ್ತಡ, ಮಧುಮೇಹ ಸೇರಿ ಹಲವು ರೀತಿಯ ಕಾಯಿಲೆಗಳ ತಪಾಸಣೆ ಮಾಡುವುದರ ಜತೆಗೆ ಔಷಧಿಗಳನ್ನೂ ವಿತರಿಸಲಾಗುವುದು. ಇಲ್ಲಿ ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಟೆಲಿ ಮೆಡಿಸಿನ್ ಸೌಲಭ್ಯವನ್ನು ಒದಗಿಸಲಾಗುವುದು. ಪರಿಣಿತರ ಜತೆಗೆ ಟೆಲಿ ಸಂವಾದ ನಡೆಸಿ ಉಪಚಾರ ನೀಡಲಾಗುವುದು. ಇದರಿಂದ ಸಾಮಾನ್ಯ ಜನರ ಆರೋಗ್ಯ ಸೇವೆಯನ್ನು ಇನ್ನಷ್ಟು ಗಟ್ಟಿಗೊಳಿಸಬಹುದು. ಕಳೆದ ಬಜೆಟ್‌ನಲ್ಲಿ ನೀಡಿದ ಭರವಸೆ ಈಡೇರಿದೆ' ಎಂದು ಹೇಳಿದರು.

'ಆರೋಗ್ಯದ ವಿಚಾರಕ್ಕೆ ಸಂಬಂಧಿಸಿದಂತೆ ನಮ್ಮದು ಸೂಕ್ಷ್ಮತೆ ಹೊಂದಿರುವ ಸರ್ಕಾರ. ಡಯಾಲಿಸಿಸ್ ಪ್ರಮಾಣ ದಿನವೊಂದಕ್ಕೆ 30 ಸಾವಿರ ಇದ್ದುದ್ದನ್ನು 60 ಸಾವಿರಕ್ಕೆ ಏರಿಸಲಾಗಿದೆ. ಕೀಮೋಥೆರಪಿ ಚಿಕಿತ್ಸೆಗಳನ್ನು 30 ಸಾವಿರದಿಂದ 60 ಸಾವಿರಕ್ಕೆ ಏರಿಸಿ 12 ಹೊಸ ಕೇಂದ್ರಗಳನ್ನು ತೆರೆಯಲಾಗಿದೆ. ಶ್ರವಣ ದೋಷ ಇರುವವರಿಗೆ ₹ 500 ಕೋಟಿ ವೆಚ್ಚದಲ್ಲಿ ಕಾಕ್ಲಿಯರ್ ಇಂಪ್ಲಾಂಟ್ ಅಳವಡಿಸಲಾಗುತ್ತಿದೆ' ಎಂದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 243 'ನಮ್ಮ ಕ್ಲಿನಿಕ್'ಗಳು ಕಾರ್ಯಾರಂಭ ಮಾಡಲಿದ್ದು, ಸದ್ಯ 108 ಕ್ಲಿನಿಕ್‌ಗಳು ಉದ್ಘಾಟನೆಯಾಗಿದೆ. ಇನ್ನು ಎರಡು ವಾರಗಳಲ್ಲಿ ಬಾಕಿವುಳಿದ 'ನಮ್ಮ ಕ್ಲಿನಿಕ್'ಗಳಿಗೆ ಚಾಲನೆ ನೀಡಲಾಗುವುದು ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

'ಈ ಹಿಂದೆ ನಗರ ಪ್ರದೇಶದ 50 ಸಾವಿರದಿಂದ 60 ಸಾವಿರ ಜನರಿಗೆ ಒಂದು ಚಿಕಿತ್ಸಾ ಕೇಂದ್ರವಿತ್ತು. ನಾವು 15 ಸಾವಿರದಿಂದ 20 ಸಾವಿರ ಜನಸಂಖ್ಯೆಗೆ ಒಂದು 'ನಮ್ಮ ಕ್ಲಿನಿಕ್' ಆರಂಭಿಸುತ್ತಿದ್ದೇವೆ. ಕೆಲವೇ ದಿನಗಳಲ್ಲಿ ಮಹಿಳೆಯರಿಗಾಗಿ 'ಆಯುಷ್ಮತಿ ಕ್ಲಿನಿಕ್' ಕೂಡ ಕಾರ್ಯಾರಂಭ ಆಗಲಿದೆ' ಎಂದರು.

ಅಬಕಾರಿ ಸಚಿವ ಕೆ. ಗೋಪಾಲಯ್ಯ ಇದ್ದರು.



'ನಮ್ಮ ಕ್ಲಿನಿಕ್' ಉದ್ಘಾಟಿಸಿದ ಬಳಿಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವೈದ್ಯಕೀಯ ಉಪಕರಣಗಳನ್ನು ವೀಕ್ಷಿಸಿದರು. ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಮತ್ತು ಅಬಕಾರಿ ಸಚಿವ ಕೆ.ಗೋಪಾಲಯ್ಯ ಇದ್ದರು


ಚಿನಕುರಳಿ
ಪ್ರಕಾಶ್ ಶೆಟ್ಟಿ



ಲಯನ್ಸ್ ಇಂಟರ್‌ನ್ಯಾಷನಲ್ ಐ ಬ್ಯಾಂಕ್ ಮನವಿ

'ನೇತ್ರದಾನದ ಮೂಲಕ ಬೆಳಕಾಗಿ'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ದೇಶದಲ್ಲಿ ಸುಮಾರು 46 ಲಕ್ಷ ಜನ ಅಂಧತ್ವ ಸಮಸ್ಯೆ ಎದುರಿಸುತ್ತಿದ್ದಾರೆ. ಅಂತಹವರಿಗೆ ದೃಷ್ಟಿ ಒದಗಿಸಲು ನೇತ್ರದಾನದ ಸಂಕಲ್ಪವನ್ನು ಪ್ರತಿಯೊಬ್ಬರೂ ಕೈಗೊಳ್ಳಬೇಕು' ಎಂದು ಲಯನ್ಸ್ ಇಂಟರ್‌ನ್ಯಾಷನಲ್ ಐ ಬ್ಯಾಂಕ್ ಮನವಿ ಮಾಡಿಕೊಂಡಿದೆ.

ನೇತ್ರದ ಮಹತ್ವದ ಬಗ್ಗೆ ಜಾಗೃತಿ ಮೂಡಿಸುತ್ತಿರುವ ಬ್ಯಾಂಕ್, 'ಜಗತ್ತಿನಲ್ಲಿ ಅಂಧತ್ವ ಸಮಸ್ಯೆ ಎದುರಿಸುತ್ತಿರುವ ಒಟ್ಟು ಜನರಲ್ಲಿ ಅರ್ಧಕ್ಕಿಂತ ಅಧಿಕ ಮಂದಿ ಭಾರತೀಯರೇ ಆಗಿದ್ದಾರೆ. ದೇಶದಲ್ಲಿ ಪ್ರತಿವರ್ಷ 25 ಸಾವಿರ ಅಂಧತ್ವ ಪ್ರಕರಣ ಹೊಸದಾಗಿ ಸೇರ್ಪಡೆ ಆಗುತ್ತಿದೆ. ನೇತ್ರದಾನ ಮಾಡುವವರ ಹಾಗೂ ಅಗತ್ಯ ಇರುವವರ ನಡುವೆ ದೊಡ್ಡ ಅಂತರವಿದೆ. ಇದಕ್ಕೆ ಜಾಗೃತಿ ಕೊರತೆಯೇ ಪ್ರಮುಖ ಕಾರಣ' ಎಂದು ಬ್ಯಾಂಕಿನ ವೈದ್ಯಕೀಯ ನಿರ್ದೇಶಕಿ ಡಾ. ರೇಖಾ ಧ್ಯಾನಚಂದ್ ತಿಳಿಸಿದ್ದಾರೆ.

'ಕಣ್ಣಿಗೆ ಗಾಯವಾಗುವಿಕೆ, ಅಪಘಾತ, ಜೀವಸತ್ವದ ಕೊರತೆ, ಆನುವಂಶಿಕ ಸಮಸ್ಯೆ ಸೇರಿ ವಿವಿಧ ಕಾರಣಗಳಿಂದ ಕೆಲವರು ದೃಷ್ಟಿ ಕಳೆದುಕೊಳ್ಳುತ್ತಿದ್ದಾರೆ. ಅಂತಹವರಿಗೆ ಕಣ್ಣುಗಳನ್ನು ದಾನ ಮಾಡಿದಲ್ಲಿ ಸಾವಿನಲ್ಲಿಯೂ ಸಾರ್ಥಕತೆ ಕಾಣಲು ಸಾಧ್ಯ. ಹಾಗಾಗಿ, ಮರಣಾನಂತರ ನೇತ್ರದಾನ ಮಾಡುವುದಾಗಿ ಪ್ರತಿಜ್ಞೆ ಕೈಗೊಳ್ಳಬೇಕು. ಆಗ 'ಕಾರ್ನಿಯಲ್' ಅಂಧತ್ವದಿಂದ ಪಾರು ಮಾಡಲು ಸಾಧ್ಯ. ಈಗಾಗಲೇ ನೇತ್ರದಾನ ಮಾಡಿದವರಿಗೆ ಧನ್ಯವಾದಗಳು' ಎಂದು ಅವರು ಹೇಳಿದ್ದಾರೆ.

'ಆರೋಗ್ಯಕರ ಕಣ್ಣುಗಳನ್ನು ಹೊಂದಲು ನಿಯಮಿತವಾಗಿ ಕಣ್ಣಿನ ತಪಾಸಣೆ ಮಾಡಿಸಿಕೊಳ್ಳಬೇಕು. ವೈದ್ಯರ ಸಲಹೆ ಪಡೆಯದೆ ಕಣ್ಣಿಗೆ ಯಾವುದೇ ಔಷಧವನ್ನು ಹಾಕಬಾರದು. ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಸಮಸ್ಯೆಗಳಿರುವವರು, 40 ವರ್ಷ ಮೇಲ್ಪಟ್ಟವರೂ ಕಣ್ಣಿನ ಪರೀಕ್ಷೆಗೆ ಆದ್ಯತೆ ನೀಡಬೇಕು' ಎಂದು ತಿಳಿಸಿದ್ದಾರೆ.

'ವ್ಯಕ್ತಿ ಮರಣ ಹೊಂದಿದ 6 ಗಂಟೆಯೊಳಗೆ ನೇತ್ರವನ್ನು ದಾನವಾಗಿ ಪಡೆಯಲಾಗುತ್ತದೆ. ಈ ಪ್ರಕ್ರಿಯೆ ಗರಿಷ್ಠ 20 ನಿಮಿಷಗಳಲ್ಲಿ ನಡೆಯಲಿದೆ. ಯಾವುದೇ ಸ್ಥಳದಲ್ಲಿ ನೇತ್ರದಾನಕ್ಕೆ ಸಂಪರ್ಕಿಸಬಹುದು. ನಮ್ಮ ತಂಡವು 24X7 ಕಾರ್ಯನಿರ್ವಹಿಸಲಿದೆ. ಎಲ್ಲರೂ ನೇತ್ರದಾನ ಮಾಡಬಹುದಾಗಿದೆ. ಒಂದು ವೇಳೆ ನೇತ್ರದಾನಕ್ಕೆ ಹೆಸರು ನೋಂದಾಯಿಸಿರದಿದ್ದರೂ ಕುಟುಂಬದ ಸದಸ್ಯರು ಇಚ್ಛಿಸಿದಲ್ಲಿ ಕಣ್ಣುಗಳನ್ನು ದಾನವಾಗಿ ಪಡೆಯಬಹುದು' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಸಂಪರ್ಕಕ್ಕೆ: ಲಯನ್ಸ್ ಇಂಟರ್ ನ್ಯಾಷನಲ್ ಐ ಬ್ಯಾಂಕ್‌ನ ಮೊಬೈಲ್ ನಂಬರ್: 97405 56666.

'ಸಮುದಾಯ ಪ್ರಜ್ಞೆ ಮೂಡಿಸಲು ಯತ್ನಿಸಿದ್ದ ಜಿ.ಎಸ್. ಶಿವರುದ್ರಪ್ಪ'

ಬಂಜಗೆರೆ ಜಯಪ್ರಕಾಶ್, ನಟರಾಜ್ ಹುಳಿಯಾರ್‌ಗೆ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಿ.ಎಸ್.ಶಿವರುದ್ರಪ್ಪ ಅವರು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ದೊಡ್ಡಮಟ್ಟದಲ್ಲಿ ಸಮುದಾಯ ಪ್ರಜ್ಞೆ ಮೂಡಿಸಲು ಪ್ರಯತ್ನಿಸಿದ್ದರು' ಎಂದು ಕವಿ ಬಂಜಗೆರೆ ಜಯಪ್ರಕಾಶ ಅಭಿಪ್ರಾಯಪಟ್ಟರು.

ನಗರದಲ್ಲಿ ಮಂಗಳವಾರ ಡಾ. ಜಿಎಸ್ಸೆಸ್ ವಿಶ್ವಸ್ತ ಮಂಡಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 2023ನೇ ಸಾಲಿನ ಡಾ. ಜಿ.ಎಸ್.ಶಿವರುದ್ರಪ್ಪ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

'ಜಿಎಸ್ಸೆಸ್ ಅವರು ಪ್ರಜಾತಾಂತ್ರಿಕ ಮನಸ್ಸಿನ ಬರಹಗಾರರನ್ನು ರೂಪಿಸಿದ್ದರು. ಕನ್ನಡ ವಿಭಾಗದಲ್ಲೂ ಎಲ್ಲ ರೀತಿಯ ಚಳವಳಿಗಳಿಗೂ ಅವಕಾಶ ಕಲ್ಪಿಸಿದ್ದರು. ಸಮಾಜದಲ್ಲಿ ಬೆಳಕಿನ ಹಾಗೂ ಅರಿವಿನ ಹಣತೆ ಹಚ್ಚಿದ್ದರು' ಎಂದರು.

ಜಿಎಸ್ಸೆಸ್ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಲೇಖಕ ನಟರಾಜ್ ಹುಳಿಯಾರ್, 'ಪೂರ್ವ ಹಾಗೂ ಪಶ್ಚಿಮದ ಕವಿಗಳನ್ನು ಬೆಸೆಯುವುದು ಹೇಗೆಂದು ಜಿಎಸ್ಸೆಸ್ ಕಲಿಸಿದ್ದಾರೆ. ಅವರು ಕೃತಿ ಹಾಗೂ ಕವಿಯ ಹಿನ್ನೆಲೆಗೆ ತೆರಳದೇ ಕೃತಿಯನ್ನೇ ಕೇಂದ್ರವಾಗಿಸಿ-ಕೊಂಡು ವಿಮರ್ಶೆ ಮಾಡುತ್ತಿದ್ದರು' ಎಂದರು.

ಮಹಾರಾಣಿ ಮಹಾವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕಿ ಡಾ.ಎಂ.ಎಸ್. ಆಶಾದೇವಿ, 'ಇಬ್ಬರು ಪ್ರಶಸ್ತಿ ಪುರಸ್ಕೃತರೂ ಕನ್ನಡ ಹಾಗೂ ನಾಡಿನ ವಿವೇಕವನ್ನು ಎಚ್ಚರಿಸುವ ಕೆಲಸದಲ್ಲಿ ತೊಡಗಿದ್ದಾರೆ. ವಿಮರ್ಶೆಗಳು ಜನಪರ, ಸಮಾಜಮುಖಿ ಆಗಿಯೇ ಇರಬೇಕು. ಬೌದ್ಧಿಕ ಅಹಂಕಾರಕ್ಕೆ ಬರೆಯದೇ ಭಾವಕೋಶದ ಒಳಗಿನಿಂದ ಸಾಹಿತ್ಯ ಹೊರಹೊಮ್ಮಿದರೆ, ಆ ಸಾಹಿತ್ಯವು ಸೂಕ್ಷ್ಮ ಸಂವೇದನೆಯನ್ನು ಒಳಗೊಂಡಿರುತ್ತದೆ' ಎಂದರು.



ನಗರದಲ್ಲಿ ಮಂಗಳವಾರ ಡಾ.ಜಿಎಸ್ಸೆಸ್ ವಿಶ್ವಸ್ತ ಮಂಡಲಿ ಆಯೋಜಿಸಿದ್ದ 2023ನೇ ಸಾಲಿನ ಜಿ.ಎಸ್. ಶಿವರುದ್ರಪ್ಪ ಪ್ರಶಸ್ತಿಯನ್ನು ಸಾಹಿತಿಗಳಾದ ನಟರಾಜ್ ಹುಳಿಯಾರ್ ಮತ್ತು ಬಂಜಗೆರೆ ಜಯಪ್ರಕಾಶ್ ಅವರಿಗೆ ಸಾಹಿತಿ ಕೆ.ಮರುಳಸಿದ್ಧಪ್ಪ ಪ್ರದಾನ ಮಾಡಿದರು. ಲೇಖಕಿ ಡಾ.ಎಂ.ಎಸ್. ಆಶಾದೇವಿ, ಸಿ.ಜಿ.ಲಕ್ಷ್ಮೀಪತಿ, ಬಸವರಾಜ ಕಲ್ಗುಡಿ, ಎಚ್.ದಂಡಪ್ಪ ಇದ್ದರು —ಪ್ರಜಾವಾಣಿ ಚಿತ್ರ

ಅಧ್ಯಾಪಕ ಸಿ.ಜಿ. ಲಕ್ಷ್ಮೀಪತಿ, 'ಪ್ರಭುತ್ವದಿಂದ ಹೊರಗುಳಿದ ಬಂಜಗೆರೆ ಜಯಪ್ರಕಾಶ್, ಹೋರಾಟದ ಒಡನಾಟದೊಂದಿಗೆ ಸಾಹಿತ್ಯ ರಚಿಸಿ ಚಳವಳಿ ರೂಪಿಸುತ್ತಾ ಬರುತ್ತಿದ್ದಾರೆ. ಕನ್ನಡದ ರಾಷ್ಟ್ರೀಯತೆ ಹಾಗೂ ಅಸ್ಮಿತೆಯನ್ನು ಸದಾ ಎಚ್ಚರಿಸುವ ಕೆಲಸದಲ್ಲಿ ತೊಡಗಿದ್ದಾರೆ' ಎಂದರು.

ಗ್ರಾ.ಪಂ ನೌಕರರ ಪ್ರತಿಭಟನೆಗೆ ಎಎಪಿ ಬೆಂಬಲ

ಬೆಂಗಳೂರು: ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗ್ರಾಮ ಪಂಚಾಯಿತಿ ನೌಕರರು ಪ್ರತಿಭಟನೆ ನಡೆಸುತ್ತಿದ್ದು, ಈ ಪ್ರತಿಭಟನೆಗೆ ಆಮ್ ಆದ್ಮಿ ಪಾರ್ಟಿ ಬೆಂಬಲ ಸೂಚಿಸಿದೆ.

'ನೌಕರರು ಪ್ರತಿಭಟನೆ ನಡೆಸುತ್ತಿದ್ದರೂ ರಾಜ್ಯ ಬಿಜೆಪಿ ಸರ್ಕಾರ ಇತ್ತ ಗಮನ ಹರಿಸಿಲ್ಲ. ಮುಖ್ಯಮಂತ್ರಿ, ಸಚಿವರಿಗೆ ಚುನಾವಣೆಯೇ ಮುಖ್ಯವಾಗಿದೆ. ಜನ ಸಾಮಾನ್ಯರು ಹಾಗೂ ನೌಕರರ ಹಿತ ಈ ಸರ್ಕಾರಕ್ಕೆ ಆದ್ಯತೆಯ ವಿಷಯವೇ ಆಗಿಲ್ಲ' ಎಂದು ಎಎಪಿ ಬೆಂಗಳೂರು ನಗರ ಅಧ್ಯಕ್ಷ ಸತೀಶ್ ಕುಮಾರ್ ಹೇಳಿ ದ್ದಾರೆ.

'ಪಂಚಾಯಿತಿ ಕಚೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಿಲ್ ಕಲೆಕ್ಟರ್, ಕ್ಲರ್ಕ್, ಡಾಟಾ ಎಂಟ್ರಿ ಆಪರೇಟರ್‌ಗಳಿಗೆ 'ಸಿ' ದರ್ಜೆ ಸ್ಥಾನಮಾನ ನೀಡಬೇಕು. ಕ್ಲೀನರ್, ನೀರುಗಂಟಿಗಳಿಗೆ 'ಡಿ' ದರ್ಜೆ ಸ್ಥಾನಮಾನ ನೀಡಬೇಕು. ಕನಿಷ್ಠ ವೇತನದ ಬದಲು ವೇತನ ಶ್ರೇಣಿ ನಿಗದಿಪಡಿಸಬೇಕು. ನೌಕರರು ಹಾಗೂ ಅವರನ್ನು ಅವಲಂಬಿಸಿದವ-ರಿಗೆ ಆರೋಗ್ಯ ಭದ್ರತೆ ಒದಗಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಎರಡು ದಿನ ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆಪಿಟಿಸಿಎಲ್‌ನಿಂದ ವಿದ್ಯುತ್ ಮಾರ್ಗದಲ್ಲಿ ನಿರ್ವಹಣಾ ಕಾರ್ಯ ನಡೆಸಲು ನಿರ್ಧರಿಸಲಾಗಿದ್ದು, ನಗರದ ಕೆಲವು ಪ್ರದೇಶಗಳಲ್ಲಿ ಎರಡು ದಿನ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಫೆ.9ರಂದು ಬೆಳಿಗ್ಗೆ 10 ರಿಂದ 5ರ ತನಕ ವೀವರ್ಸ್ ಕಾಲೊನಿ, 1ರಿಂದ 9ನೇ ಕ್ರಾಸ್, ಮಾರುತಿ ನಗರ, ಪಿಲ್ಲಗಾನಹಳ್ಳಿ, ಗೊಟ್ಟಿಗೆರೆ, ಎಂಎಲ್‌ಎ ಲೇಔಟ್, ಭೋರಾ ಲೇಔಟ್, ಆಶ್ರಮ ರಸ್ತೆ, ಹಿಮಗಿರಿ ಮೆಡೋಸ್, ಕಮ್ಮನಹಳ್ಳಿ, ಬಾಲಾಜಿ ಗಾರ್ಡನ್ ಲೇಔಟ್, ಬಸವನಪುರ, ನೊಬೆಲ್ ರೆಸಿಡೆನ್ಸಿ, ನಂದಿ ವುಡ್ ಅಪಾರ್ಟ್‌ಮೆಂಟ್, ಎಸ್‌ಎನ್‌ಎನ್ ರಾಜ್‌ನಗರ ಲೇಕ್, ಮೈಲಸಂದ್ರ, ಹೊಮ್ಮ-ದೇವನಹಳ್ಳಿ, ವಡ್ಡರಪಾಳ್ಯ, ಪ್ರಭಾಕರ ರೆಡ್ಡಿ ಲೇಔಟ್, ಬೇಟದಾಸಪುರ, ಹುಲ್ಲಹಳ್ಳಿ ಸುತ್ತಮುತ್ತ ಹಾಗೂ ಫೆ.10ರಂದು ಬೆಳಿಗ್ಗೆ 10ರಿಂದ ಸಂಜೆ 4ರ ತನಕ ಆರ್.ಜಿ.ಎ ಟೆಕ್‌ಪಾರ್ಕ್, ಪ್ರಥಮ್ ಮೋಟರ್ಸ್, ಬೆಳ್ಳಂದೂರು ಸುತ್ತಮುತ್ತಲು ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಾಂಸ್ಕೃತಿಕ ಸಿಂಚನ ನಾಳೆ

ಬೆಂಗಳೂರು: ಇದು ನಿಮ್ಮ ವಾಹಿನಿ ಕಲಾ ವೇದಿಕೆಯಿಂದ ಫೆ. 9ರಂದು 'ಸಾಂಸ್ಕೃತಿಕ ಸಿಂಚನ ಮತ್ತು ಪ್ರಶಸ್ತಿ ಪ್ರದಾನ' ಕಾರ್ಯಕ್ರಮವು ಜೆ.ಸಿ. ರಸ್ತೆ-ಯಲ್ಲಿರುವ ನಯನ ರಂಗ ಮಂದಿರದಲ್ಲಿ ನಡೆಯಲಿದೆ.

ಮಾಧ್ಯಮ ರತ್ನ, ಸಮಾಜ ಸೇವಾ ರತ್ನ ಮತ್ತು ಕಲಾ ಸೇವಾ ರತ್ನ ಎಂಬ ಮೂರು ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು. ಮಾಜಿ ಮೇಯರ್ ಗಂಗಾಂಬಿಕೆ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಿದ್ದು, ಗಂಡಸಿ ಸದಾನಂದಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ವೇದಿಕೆ ಅಧ್ಯಕ್ಷ ಕಿಶೋರ್ ಕುಮಾರ್ ಕೆ.ಎಸ್. ಪ್ರಕಟಣೆ-ಯಲ್ಲಿ ತಿಳಿಸಿದ್ದಾರೆ.

ದಾಖಲೆ ಬರೆದ ದೇವನಹಳ್ಳಿ ವಿಮಾನ ನಿಲ್ದಾಣ: ಸರಕು ಸಾಗಣೆಯಲ್ಲೂ ಚೇತರಿಕೆ

2.75 ಕೋಟಿ ಮಂದಿ ಪ್ರಯಾಣ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ (ಬಿಐಎಲ್‌ಆರ್) 2022ರಲ್ಲಿ ದೇಶದ ವಿವಿಧ ಸ್ಥಳಗಳಿಗೆ ಹಾಗೂ ವಿದೇಶಗಳಿಗೆ ಒಟ್ಟು 2.75 ಕೋಟಿ ಪ್ರಯಾಣಿಕರು ಪಯಣಿಸಿದ್ದು, ವಿಮಾನ ನಿಲ್ದಾಣ ದಾಖಲೆ ಬರೆದಿದೆ.

ವಾಯು ಸರಕು ಸಾಗಣೆ (ಏರ್ ಕಾರ್ಗೋ) ಕ್ಷೇತ್ರದಲ್ಲಿಯೂ ಗಣನೀಯ ಅಭಿವೃದ್ಧಿ ಸಾಧಿಸಲಾಗಿದೆ ಎಂದು ಬೆಂಗಳೂರು ವಿಮಾನ ನಿಲ್ದಾಣದ ಪ್ರಾಧಿಕಾರ ತಿಳಿಸಿದೆ.

ಕೋವಿಡ್ ಪೂರ್ವ ಅವಧಿಗೆ ಹೋಲಿಕೆ ಮಾಡಿದರೆ ಹೆಚ್ಚಿನ ಮಂದಿ ಪ್ರಯಾಣ ಬೆಳೆಸಿದ್ದಾರೆ. ದೇಶೀಯ ಪ್ರಯಾಣಿಕರ ಸಂಖ್ಯೆಯಲ್ಲಿ ಶೇ 85ರಷ್ಟು ಹಾಗೂ ಅಂತರರಾಷ್ಟ್ರೀಯ ಪ್ರಯಾಣಿಕರ ಸಂಖ್ಯೆಯಲ್ಲಿ ಶೇ 65ರಷ್ಟು ಏರಿಕೆಯಾಗಿದೆ.

ಈ ವಿಮಾನ ನಿಲ್ದಾಣಕ್ಕೆ ಅಂತರರಾಷ್ಟ್ರೀಯ ಪ್ರಮುಖ ಮಹಾನಗರಗಳು ಹಾಗೂ ದೇಶೀಯವಾಗಿ ಮುಖ್ಯ ಪಟ್ಟಣಗಳಿಗೆ ನೇರವಾಗಿ ಹೊಸ ವಿಮಾನಯಾನ ಸಂಪರ್ಕ ಕಲ್ಪಿಸುವುದರಿಂದ ಪ್ರಯಾಣಿಕರ ಸಂಖ್ಯೆ ಏರಿಕೆಯಾಗಿದೆ.

ವಾಯು ಮಾರ್ಗದ ಮೂಲಕ ಹೊಸ ಸ್ಥಳಗಳಿಗೆ ವಿಮಾನಯಾನದ ಮೂಲಕ ಸಂಪರ್ಕ ಕಲ್ಪಿಸುವುದರಲ್ಲಿ ಬೆಂಗಳೂರು ವಿಮಾನ ನಿಲ್ದಾಣ ಮೊದಲ ಆದ್ಯತೆ ನೀಡಿದೆ. ದೇಶದಾದ್ಯಂತ ಒಟ್ಟು 75 ಸ್ಥಳಗಳಿಗೆ ಇಲ್ಲಿಂದ ನೇರವಾಗಿ ನಿತ್ಯ ವಿಮಾನಗಳು ಕಾರ್ಯಾಚರಣೆ ನಡೆಸುತ್ತವೆ. ಇಲ್ಲಿಂದ ಆಸ್ಟ್ರೇಲಿಯಾದ ಸಿಡ್ನಿ, ದುಬೈ, ಸ್ಯಾನ್ ಫ್ರಾನ್ಸಿಸ್ಕೊಗೆ ಪ್ರತಿನಿತ್ಯ ವಿಮಾನಗಳು ಹಾರಾಟ ನಡೆಸುತ್ತವೆ.


ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

'ಟರ್ಮಿನಲ್‌–2 ಆರಂಭವಾದ ಬಳಿಕ ಹೆಚ್ಚುವರಿಯಾಗಿ ವಿಮಾನಗಳು ಕಾರ್ಯಾಚರಣೆ ಪ್ರಾರಂಭಿಸಿವೆ. ವಿಮಾನ ನಿಲ್ದಾಣವೂ ತನ್ನ ಸಾಮರ್ಥ್ಯ ಹೆಚ್ಚಿಸಿಕೊಂಡಿದೆ. ಇದರ ಫಲವಾಗಿ ಇಂದು ದಕ್ಷಿಣ ಭಾರತ ಮತ್ತು ಮಧ್ಯ ಭಾರತದ ವಿಮಾನಯಾನದ ಹೆಬ್ಬಾಗಿಲು ಆಗಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಗುರುತಿಸಿಕೊಳ್ಳಲು ಸಹಕಾರಿಯಾಗಿದೆ' ಎಂದು ವಿಮಾನ ನಿಲ್ದಾಣದ ಮುಖ್ಯ ಕಾರ್ಯತಂತ್ರ ಮತ್ತು ಅಭಿವೃದ್ಧಿ ಅಧಿಕಾರಿ ಸಾತ್ಯಕಿ ರಘುನಾಥ್ ತಿಳಿಸಿದ್ದಾರೆ.

ಅಂಕಿ ಅಂಶ

24.36 ದಶಲಕ್ಷ
ದೇಶೀಯ ಪ್ರಯಾಣಿಕರ ಸಂಚಾರ

3.14 ದಶಲಕ್ಷ
ಅಂತರರಾಷ್ಟ್ರೀಯ ಪ್ರಯಾಣಿಕರ ಸಂಚಾರ

1,07,825
ಡಿ. 23ರಂದು ಒಂದೇ ದಿನದಲ್ಲಿ ಪ್ರಯಾಣಿಸಿದ ಪ್ರಯಾಣಿಕರು

ಶೇ **85**
ದೇಶೀಯ ಪ್ರಯಾಣಿಕರ ಏರಿಕೆ

ಶೇ **65**
ಅಂತರರಾಷ್ಟ್ರೀಯ ಪ್ರಯಾಣಿಕರ ಏರಿಕೆ

ಕಾರ್ಗೋ ಕ್ಷೇತ್ರದಲ್ಲಿ ಬೆಳವಣಿಗೆ

ವಿಶ್ವದ ಅತಿದೊಡ್ಡ ವಾಯು ಮಾರ್ಗ ಸರಕು ಸಾಗಣೆಯಲ್ಲಿ ಹೆಸರುವಾಸಿಯಾಗಿರುವ ಯುಪಿಎಸ್, ಡಿಎಚ್‌ಎಲ್, ಫೆಡ್‌ಎಕ್ಸ್ ಕಂಪನಿಗಳು ಇಲ್ಲಿನ ವಿಮಾನ ನಿಲ್ದಾಣದಲ್ಲಿ ಕಾರ್ಯ ನಿರ್ವಹಿಸುತ್ತಿವೆ. 41 ವಾಯು ಮಾರ್ಗದಲ್ಲಿ ಸರಕು ಸಾಗಣೆಯ ಸೇವೆ ಒದಗಿಸುತ್ತಿವೆ. 2022ರಲ್ಲಿ ಒಟ್ಟು 41.26 ಲಕ್ಷ ಮೆಟ್ರಿಕ್ ಟನ್ ಸರಕು ಸಾಗಣೆಯಾಗಿದೆ.

ಕಳಪೆ ಆಹಾರ: ವಿದ್ಯಾರ್ಥಿನಿಯರು ಅಸ್ವಸ್ಥ

ಮಂಗಳೂರು: ನಗರದ 'ಸಿಟಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್'ನ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿನಿಯರು ಅಸ್ವಸ್ಥಗೊಂಡ ವಿಷಯ ತಿಳಿದು ಪೋಷಕರು ಸೋಮವಾರ ಹಾಸ್ಟೆಲ್‌ಗೆ ದೌಡಾಯಿಸಿದರು. ಹಾಸ್ಟೆಲ್‌ನ ಕಳಪೆ ಆಹಾರ ಹಾಗೂ ಸ್ವಚ್ಛ ಕುಡಿಯುವ ನೀರು ಒದಗಿಸದ ಬಗ್ಗೆ ಕಳವಳ ವ್ಯಕ್ತಪಡಿಸಿದರು.

'ಕೆಲವು ವಿದ್ಯಾರ್ಥಿನಿಯರಿಗೆ ಶನಿವಾರ ಬೆಳಿಗ್ಗೆ ಉಪಾಹಾರ ಸೇವನೆ ಬಳಿಕ ಹೊಟ್ಟೆನೋವು ಕಾಣಿಸಿತ್ತು. ಭಾನುವಾರ ಮತ್ತಷ್ಟು ವಿದ್ಯಾರ್ಥಿನಿಯರು ಅಸ್ವಸ್ಥಗೊಂಡರು. ಸೋಮವಾರ ರಾತ್ರಿ ವಾಂತಿ ಮತ್ತು ಉಸಿರಾಟದ ಸಮಸ್ಯೆ ಉಲ್ಬಣಿಸಿತು. ಆರೋಗ್ಯ ಅಧಿಕಾರಿಗಳು ಸೂಚಿಸಿದ ಬಳಿಕವಷ್ಟೇ ನೀರು ಶುದ್ಧೀಕರಣ ಉಪಕರಣ ಸ್ವಚ್ಛಗೊಳಿಸಲಾಗಿದೆ. ಕಸ ವಿಲೇವಾರಿಗೂ ವ್ಯವಸ್ಥೆ ಇಲ್ಲ' ಎಂದರು.

ಎಸಿಪಿ ಧನ್ಯಾ ಎನ್. ನಾಯಕ್ ನೇತೃತ್ವದಲ್ಲಿ ಹಾಸ್ಟೆಲ್‌ನ ಆಡಳಿತ ಮಂಡಳಿ ಹಾಗೂ ವಿದ್ಯಾರ್ಥಿನಿಯರ ಪೋಷಕರ ಸಭೆ ನಡೆಯಿತು. ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಹಾಸ್ಟೆಲ್‌ಗೆ ಭೇಟಿ ನೀಡಿ ವಿದ್ಯಾರ್ಥಿನಿಯರ ಪೋಷಕರ ಜೊತೆ ಚರ್ಚಿಸಿದರು.

ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನದಾಸ್ ಪ್ರಶ್ನೆ

ರಾಮಾಯಣ ಕಲಿತವರಿಗೆ ಸಂವಿಧಾನ ಅಸಾಧ್ಯವೇ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕ್ಷರಜ್ಞಾನ ಇಲ್ಲದವರಿಗೂ ರಾಮಾಯಣ, ಮಹಾಭಾರತ ಕಲಿಸಿದ ದೇಶವಿದು. ಅದೇ ರೀತಿ ಸಂವಿಧಾನವನ್ನು ಜನರಿಗೆ ಕಲಿಸಲು ಸಾಧ್ಯವಿಲ್ಲವೇ' ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಪ್ರಶ್ನಿಸಿದರು.

'ನಮ್ಮೂರಿನಲ್ಲಿದ್ದ ಅನಕ್ಷರಸ್ಥ ಕೂಲಿ ಕಾರ್ಮಿಕರು ರಾಮಾಯಣದ ಕಥೆ ಹೇಳುತ್ತಿದ್ದರು, ಹಾಡು ಹೇಳುತ್ತಿದ್ದರು. ಅವರಿಗೆಲ್ಲ ನಾಟಕ, ಪದಗಳ ಮೂಲಕ ಅದೆಲ್ಲ ಕಲಿಸಲಾಗಿದೆ. ಅದೇ ರೀತಿ ಸಂವಿಧಾನ ಕಲಿಸುವ ಕೆಲಸ ಆಗಬೇಕು. ಎಲ್ಲ ಸಾಹಿತಿಗಳು, ರಂಗ, ಹರಿಕಥೆ, ಸಿನಿಮಾ, ಯಕ್ಷಗಾನ ಕಲಾವಿದರು ಈ ಕೆಲಸ ಮಾಡಬೇಕು' ಎಂದು ಹೇಳಿದರು.

ರಾಷ್ಟ್ರಕವಿ ಪ್ರೊ. ಜಿ.ಎಸ್. ಶಿವರುದ್ರಪ್ಪ ಮತ್ತು ಜ್ಞಾನಪೀಠ ಪುರಸ್ಕೃತ ಪ್ರೊ. ಯು.ಆರ್. ಅನಂತಮೂರ್ತಿ ಪುಣ್ಯಸ್ಥಳ ಅಭಿವೃದ್ಧಿ ಜಂಟಿ ಕ್ರಿಯಾ ಸಮಿತಿ ಆಯೋಜಿಸಿದ್ದ ಶಿವರುದ್ರಪ್ಪ ಜನ್ಮದಿನೋತ್ಸವ ಸಮಾರಂಭದಲ್ಲಿ ಅವರು ಮಂಗಳವಾರ ಮಾತನಾಡಿದರು.


ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ರಾಷ್ಟ್ರೀಯ ಪುರಸ್ಕಾರವನ್ನು ಪುಸ್ತಕಮನೆ ಹರಿಹರಪ್ರಿಯ ಅವರಿಗೆ ಪ್ರದಾನ ಮಾಡಲಾಯಿತು. ರಂಗಕರ್ಮಿ ಜೆಪಿಒ ಚಂದ್ರು, ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನ ದಾಸ್, ಲೇಖಕಿ ಬಿ.ಟಿ. ಲಲಿತಾ ನಾಯಕ್, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯ, ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಸಾಹಿತಿ ಹಂಪ ನಾಗರಾಜಯ್ಯ ಮತ್ತು ರಂಗ ನಿರ್ದೇಶಕ ಕೆ.ಎಸ್. ಕುಮಾರ್ ಇದ್ದಾರೆ – ಪ್ರಜಾವಾಣಿ ಚಿತ್ರ

'ದೇಶದಲ್ಲಿರುವ ಸಮಸ್ಯೆಗಳ ಪರಿಹಾರಕ್ಕೆ, ಸವಾಲುಗಳನ್ನು ಹಿಮ್ಮೆಟ್ಟಿಸಲು ಇರುವ ಏಕೈಕ ಮಾರ್ಗವೆಂದರೆ ಸಂವಿಧಾನದ ಮಾರ್ಗ. ಈ ಮಾರ್ಗದಲ್ಲಿ ನಡೆದು, ಎಲ್ಲ ಪ್ರಾಕಾರಗಳ ಮೂಲಕ ಜನರನ್ನು ತಲುಪಬೇಕು. ಹಂಪ ನಾಗರಾಜಯ್ಯ, ಹರಿಹರಪ್ರಿಯ, ತಿಮ್ಮಯ್ಯ ಅವರಂತಹವರು ಸಂವಿಧಾನವನ್ನು ಜನರಿಗೆ ತಲುಪಿಸುವ ಎಲ್ಲ ಜವಾಬ್ದಾರಿಯನ್ನು ಹೊರಬೇಕು' ಎಂದು ಹೇಳಿದರು.

'ನಮ್ಮ ಸುತ್ತಮುತ್ತ ಬೆಂಕಿಯನ್ನೂ ಹಚ್ಚುವ ಸಾಹಿತಿಗಳಿದ್ದಾರೆ, ಹಚ್ಚುತ್ತಲೂ ಇದ್ದಾರೆ, ಹೊಗೆಯನ್ನು ಹುಟ್ಟಿಹಾಕುತ್ತಿದ್ದಾರೆ. ಉಸಿರುಕಟ್ಟುವ ವಾತಾವರಣದಲ್ಲಿ ಬದುಕುವಂತಹ ಸಾಹಿತ್ಯ ಕೂಡ ನಿರ್ಮಾಣವಾಗುತ್ತಿದೆ ಎಂಬ ಸತ್ಯವನ್ನು ನಾವು ಮರೆಯಬಾರದು' ಎಂದರು.

'ರೈತರು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕವಾಗಿ ದಿವಾಳಿಯಾಗಿದ್ದಾರೆ. ಸರಿ ದಾರಿ ಯಾವುದು ಎಂದು ಗೊತ್ತಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅವರಿಗೆ ಬೆಳಕು ತೋರುವ ಸಾಹಿತ್ಯ ಬೇಕು. ನಮ್ಮನ್ನು ಆಳುವಂತಹ ಸರ್ಕಾರಗಳು ಸುಳ್ಳು ಹೇಳುತ್ತಿವೆ.ಕನಿಷ್ಠ ಲಜ್ಜೆಯೂ ಅಲ್ಲಿನವರಿಗೆ ಇಲ್ಲ. ಅವರಲ್ಲಿ ಲಜ್ಜೆ ಹುಟ್ಟಿಹಾಕುಂತಹ ಸಾಹಿತ್ಯ ಇಂದು ಬೇಕು. ಅಂತಹ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸುವ ಕಾರ್ಯವಾಗಬೇಕಿದೆ' ಎಂದು ಪ್ರತಿಪಾದಿಸಿದರು.

ರಾಷ್ಟ್ರಕವಿ ಪ್ರೊ. ಜಿ.ಎಸ್. ಶಿವರುದ್ರಪ್ಪ ರಾಷ್ಟ್ರೀಯ ಪ್ರಥಮ ಪುರಸ್ಕಾರವನ್ನು ಪುಸ್ತಕಮನೆ ಹರಿಹರಪ್ರಿಯ ಅವರಿಗೆ ಪ್ರದಾನ ಮಾಡಲಾಯಿತು. ಮಾಜಿ ಸಚಿವೆ ಬಿ.ಟಿ. ಲಲಿತಾ ನಾಯಕ್ ಅವರು ಜಿ.ಎಸ್.ಎಸ್ ಕುರಿತ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು.

ಸಾಹಿತಿ ಪ್ರೊ. ಹಂಪ ನಾಗರಾಜಯ್ಯ, ಬಿಎಂಶ್ರೀ ಪ್ರತಿಷ್ಠಾನದ ಬೈರಮಂಗಲ ರಾಮೇಗೌಡ, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ತಿಮ್ಮಯ್ಯ, ಉದಯಭಾನು ಕಲಾಸಂಘದ ನರಸಿಂಹಮೂರ್ತಿ, ಗಂಗೋತ್ರಿ ಸಂಸ್ಥಾಪಕ ಕೆ.ಎಚ್. ಕುಮಾರ್, ಜೆಪಿಒ ಚಂದ್ರು, ಮಲ್ಲಿಕಾರ್ಜುನ ಮಹಾಮನೆ ಇದ್ದರು.

ಪುಣ್ಯಭೂಮಿ ಅಭಿವೃದ್ಧಿಗೆ ಆಗ್ರಹ

'ಸರ್ಕಾರ ಕಲಾವಿದರ ಪುಣ್ಯಭೂಮಿಗಳನ್ನು ಅಭಿವೃದ್ಧಿ ಮಾಡಲು ಕೋಟ್ಯಂತರ ವೆಚ್ಚ ಮಾಡುತ್ತಿದೆ. ಆದರೆ, ಸಾಹಿತಿಗಳಾದ ಅನಂತಮೂರ್ತಿ, ಶಿವರುದ್ರಪ್ಪ, ಸಿದ್ದಲಿಂಗಯ್ಯ ಅವರ ಪುಣ್ಯಭೂಮಿಯತ್ತ ನಿರ್ಲಕ್ಷ್ಯ ವಹಿಸಿದೆ. ಕಲಾಗ್ರಾಮದಲ್ಲಿ ಈ ಮಹನೀಯರನ್ನು ಹಾಕಿದ್ದು ಬಿಟ್ಟರೆ ಬೇರೇನೂ ಅಭಿವೃದ್ಧಿ ಕಾರ್ಯ ಮಾಡಿಲ್ಲ. ಇದನ್ನು ಸಾಹಿತ್ಯ ಭೂಮಿಯಾಗಿಸಿ, ಪ್ರತಿ ತಿಂಗಳೂ ಸಾಹಿತ್ಯ ಕಾರ್ಯಕ್ರಮಗಳು ಆಯೋಜನೆಯಾಗುವಂತೆ ಮಾಡಬೇಕು' ಎಂದು ಗಂಗೋತ್ರಿ ಸಂಸ್ಥಾಪಕ ಕೆ.ಎಚ್. ಕುಮಾರ್ ಆಗ್ರಹಿಸಿದರು.

ಎಸ್‌ಡಿಪಿಐ ಮೇಲೆ ದಾಳಿ: ದಾಖಲೆ ಒದಗಿಸಲು ಹೈಕೋರ್ಟ್‌ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾಗೆ (ಎಸ್‌ಡಿಪಿಐ) ಸೇರಿದ ಸ್ಥಳಗಳ ಮೇಲೆ ನಡೆಸಿದ ದಾಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ನೀಡಿರುವ ನಿರ್ದೇಶನದ ದಾಖಲೆಗಳನ್ನು ಒದಗಿಸಿ' ಎಂದು ಹೈಕೋರ್ಟ್‌, ರಾಜ್ಯ ಸರ್ಕಾರಕ್ಕೆ ಸೂಚಿಸಿದೆ.

'ಎಸ್‌ಡಿಪಿಐಗೆ ಸೇರಿದ ಸ್ಥಳಗಳ ಮೇಲೆ ದಾಳಿ ನಡೆಸಿ, ಜಪ್ತಿ ಮಾಡಿರುವ ಸ್ವತ್ತುಗಳಿಗೆ ಹಾಕಲಾದ ಮೊಹರು ತೆರವುಗೊಳಿಸಲು ನಿರ್ದೇಶಿಸಬೇಕು' ಎಂದು ಕೋರಿ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಎಸ್‌ಡಿಪಿಐ ಪ್ರಧಾನ ಕಾರ್ಯದರ್ಶಿ ಅನ್ವರ್ ಸಾದತ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ದಕ್ಷಿಣ ಕನ್ನಡ ಜಿಲ್ಲೆಯ ವಿವಿಧೆಡೆ ಎಸ್‌ಡಿಪಿಐನ 17 ಕಚೇರಿಗಳಿಗೆ ಮೊಹರು ಹಾಕಲಾಗಿದೆ. ಕಚೇರಿಗಳಿದ್ದ ಕಟ್ಟಡಗಳಿಗೆ ಬಾಡಿಗೆ ಕಟ್ಟುತ್ತಿದ್ದೇವೆ. ಮುಂಬರಲಿರುವ ವಿಧಾನಸಭೆ ಚುನಾವಣೆಗೆ ಎಸ್‌ಡಿಪಿಐ ಸಿದ್ಧವಾಗಬೇಕಿದ್ದು, ಕಚೇರಿಗಳನ್ನು ಬಂದ್ ಮಾಡಿರುವುದರಿಂದ ಯಾವುದೇ ರಾಜಕೀಯ ಕಾರ್ಯಕ್ರಮ ನಡೆಸಲಾಗುತ್ತಿಲ್ಲ. ಆದ್ದರಿಂದ ಮೊಹರುಗಳನ್ನು ತೆರವುಗೊಳಿಸಲು ಜಿಲ್ಲಾಡಳಿತಕ್ಕೆ ನಿರ್ದೇಶಿಸಬೇಕು' ಎಂದು ಮನವಿ ಮಾಡಿದರು.

ಅರ್ಜಿಗೆ ಪ್ರಾಥಮಿಕ ಆಕ್ಷೇಪ ವ್ಯಕ್ತಪಡಿಸಿದ ಸರ್ಕಾರಿ ವಕೀಲ ಎಂ. ವಿನೋದ್ ಕುಮಾರ್, 'ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾವನ್ನು (ಪಿಎಫ್‌ಐ) ಕೇಂದ್ರ ಸರ್ಕಾರ ನಿಷೇಧಿಸಿದೆ. ಪಿಎಫ್‌ಐನ ಸಾಮಗ್ರಿಗಳು ಎಸ್‌ಡಿಪಿಐ ಕಚೇರಿಯಲ್ಲಿ ದೊರೆತಿವೆ. ಕೇಂದ್ರ ಸರ್ಕಾರದ ನಿರ್ದೇಶನದಂತೆ ಕ್ರಮ ಕೈಗೊಳ್ಳಲಾಗಿದೆ. ಆದರೆ, ಅರ್ಜಿಯಲ್ಲಿ ಕೇಂದ್ರ ಸರ್ಕಾರವನ್ನು ಪ್ರತಿವಾದಿಯನ್ನಾಗಿ ಕಾಣಿಸಿಲ್ಲ' ಎಂದರು.


ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಕೇಂದ್ರ ಸರ್ಕಾರ ನೀಡಿರುವ ನಿರ್ದೇಶನದ ದಾಖಲೆಗಳನ್ನು ಮುಂದಿನ ವಿಚಾರಣೆ ವೇಳೆ ನ್ಯಾಯಾಲಯಕ್ಕೆ ಒದಗಿಸಿ' ಎಂದು ಸೂಚಿಸಿ, ಅರ್ಜಿಯನ್ನು ಇದೇ 16ಕ್ಕೆ ಮುಂದೂಡಿದೆ.

ಅರ್ಜಿಯಲ್ಲಿ ಏನಿದೆ?: 'ಎಸ್‌ಡಿಪಿಐ, ಪಿಎಫ್‌ಐ ಜತೆ ಯಾವುದೇ ಸಂಪರ್ಕ ಹೊಂದಿಲ್ಲ. ಪಿಎಫ್‌ಐ ಮತ್ತದರ ಸಂಸ್ಥೆಗಳನ್ನು ನಿಷೇಧಿಸುವ ಸಂದರ್ಭದಲ್ಲಿ ಗೃಹ ಸಚಿವಾಲಯ ಎಸ್‌ಡಿಪಿಐ ಹೆಸರನ್ನು ಸೇರಿಸಿಲ್ಲ. ಆದರೂ ಪ್ರತಿವಾದಿಗಳು ಪಕ್ಷಕ್ಕೆ ಸೇರಿದ ಸ್ಥಳಗಳ ಮೇಲೆ ಅಕ್ರಮವಾಗಿ ದಾಳಿ ನಡೆಸಿ, ಜಪ್ತಿ ಮಾಡಿದ್ದಾರೆ' ಎಂಬುದು ಅರ್ಜಿದಾರರ ಆಕ್ಷೇಪ.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಬೆಂಗಳೂರು: 'ಮಹಾನಸಾ ಮಲ್ಟಿ ಸ್ಪೆಷಾಲಿಟಿ ಕ್ಲಿನಿಕ್' ವತಿಯಿಂದ ವೈದ್ಯಕೀಯ ಆರೋಗ್ಯ ತಪಾಸಣೆಯ ಉಚಿತ ಶಿಬಿರವನ್ನು ಇದೇ 12ರಂದು ಸಿಡೇದಹಳ್ಳಿಯ ಕಿರ್ಲೋಸ್ಕರ್ ಲೇಔಟ್‌ನ 2ನೇ ಅಡ್ಡರಸ್ತೆಯಲ್ಲಿರುವ ಮಹಾನಸಾ ಕ್ಲಿನಿಕ್‌ನಲ್ಲಿ ಹಮ್ಮಿಕೊಳ್ಳಲಾಗಿದೆ. ಉಚಿತ ಶಿಬಿರವನ್ನು ಬೆಳಿಗ್ಗೆ 7ರಿಂದ ಮಧ್ಯಾಹ್ನ 2ರವರೆಗೆ ನಡೆಸಲಾಗುವುದು. ಆಸಕ್ತರು ಮೊಬೈಲ್ ಸಂಖ್ಯೆ 76761-63886ಗೆ ನೋಂದಣಿ ಮಾಡಿಕೊಳ್ಳಬಹುದು.

ಚಿತ್ರಾವಳಿ


ನಗರದ ಬಸವನಗುಡಿ ಡಿವಿಜಿ ರಸ್ತೆಯ ಅಡಿಗಾಸ್ ಯಾತ್ರಾ ಇನ್‌ಸ್ಟಿಟ್ಯೂಟ್‌ನಲ್ಲಿ ನಡೆದ 'ಅಡಿಗಾಸ್ ಯಾತ್ರಾ ಟ್ರಾವೆಲ್ ಫೇರ್' ಚಾಲನಾ ಸಮಾರಂಭದಲ್ಲಿ ಉದ್ಯಮಿಗಳಾದ ಕೆ.ಎಸ್‌.ಬಲದೇವಾ, ಎಂ.ಮಲ್ಲಿಕಾರ್ಜುನ್ ಸ್ವಾಮಿ, ಕೆನರಾ ಬ್ಯಾಂಕ್‌ನ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ ಕರಿನಾಯಕ್, ಅಡಿಗಾಸ್ ಯಾತ್ರಾದ ಸಂಸ್ಥಾಪಕ ಕೆ.ನಾಗರಾಜ್ ಅಡಿಗಾರ್ ಇದ್ದರು.


ಪ್ರತಿಭಾನ್ವಿತ ಕ್ರೀಡಾಪಟುಗಳ ಪೋಷಕರನ್ನು ಅಭಿನಂದಿಸಲು ಕ್ರೀಡಾ ಭಾರತಿ ಆಯೋಜಿಸಿದ್ದ ಜೀಜಾ ಮಾತಾ ಸಮ್ಮಾನ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಕಬಡ್ಡಿ ಆಟಗಾರರಾದ ಬಿ.ಸಿ.ರಮೇಶ್ ಮತ್ತು ಬಿ.ಸಿ. ಸುರೇಶ್ ಅವರ ತಾಯಿ ಪದ್ಮಮ್ಮ, ಈಜುಗಾರ ಶ್ರೀಹರಿ ನಟರಾಜ್ ಅವರು ತಾಯಿ ಕಲ್ಯಾಣಿ ನಟರಾಜ್, ಅಥ್ಲೆಟಿಕ್ ಪ್ರಿಯಾ ಮೋಹನ್ ಅವರು ತಾಯಿ ಚಂದ್ರಕಲಾ, ಫೆನ್ಸಿಂಗ್ ಆಟಗಾರ್ತಿ ಲಕ್ಷ್ಮಿ ಅವರ ತಾಯಿ ಸುಮಂಗಲ ಭಟ್, ಅಥ್ಲೆಟಿಕ್ ವಿಜಯಕುಮಾರಿ ಅವರ ತಾಯಿ ಪ್ರೇಮ ಸೇರಿ ಹಲವರಿಗೆ ಜೀಜಾ ಮಾತ ಪುರಸ್ಕಾರ ನೀಡಿ ಗೌರವಿಸಿದರು. ಕ್ರೀಡಾ ಭಾರತಿಯ ಅಖಿಲ ಭಾರತ ಕಾರ್ಯಾಧ್ಯಕ್ಷ ಚೈತನ್ಯ ಕಶ್ಯಪ್, ಕ್ರೀಡಾ ಭಾರತಿ ಕರ್ನಾಟಕದ ಅಧ್ಯಕ್ಷ ಮುಕುಂದರಾವ್ ಕಿಲ್ಲೇಕರ್, ಉಪಾಧ್ಯಕ್ಷ ಕೆ.ವೈ.ವೆಂಕಟೇಶ್, ದಕ್ಷಿಣ ಕರ್ನಾಟಕದ ಅಧ್ಯಕ್ಷ ವೈ.ಎಸ್‌.ಲಕ್ಷ್ಮೀಶ್, ಉಪಾಧ್ಯಕ್ಷ ನಾಗರಾಜ ಶೆಟ್ಟಿ ಇದ್ದರು



ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಶ್ರೀರಾಮಪುರದ ನಿಸರ್ಗ ಬಡಾವಣೆಯಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ಶಾಸಕ ಕೃಷ್ಣ ಬೈರೇಗೌಡ, ಕಾಮಗಾರಿ ವೀಕ್ಷಣೆ ನಡೆಸಿದರು. ಮುಖಂಡರಾದ ಎಂ.ಜಯಗೋಪಾಲಗೌಡ, ಎಚ್‌.ಎ.ಶಿವಕುಮಾರ್, ಚನ್ನಕೇಶವ, ವಿಶ್ವ ಇದ್ದರು.

ನಗರದಲ್ಲಿ ಇಂದು

2023–24ನೇ ಸಾಲಿನ ಎಂಬಿಎ ತರಗತಿಗಳ ಉದ್ಘಾಟನೆ: ಅತಿಥಿಗಳು: ವಿಜಯಕೃಷ್ಣನ್ ವೆಂಕಟೇಶನ್, ಸೌಂದರ್ಯ ಪಿ. ಮಂಜಪ್ಪ, ಕೀರ್ತನ್ ಕುಮಾರ್ ಎಂ., ಸುನಿತಾ ಪಿ. ಮಂಜಪ್ಪ, ಪ್ರತೀಕ್ಷ ಕೀರ್ತನ್, ವರುಣ್ ಕುಮಾರ್ ಎಂ., ವಾಸು ಬಿ.ಎ., ಆಯೋಜನೆ ಮತ್ತು ಸ್ಥಳ: ಸೌಂದರ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಸೈನ್ಸ್, ಸೌಂದರ್ಯನಗರ, ಸಿದ್ದೇದಹಳ್ಳಿ ನಾಗಸಂದ್ರ, ಬೆಳಿಗ್ಗೆ 10

ಸಂಸ ಪ್ರಶಸ್ತಿ ಪ್ರದಾನ: 'ಮುಖ್ಯಮಂತ್ರಿ' ಚಂದ್ರು, ಪ್ರಶಸ್ತಿ ಪುರಸ್ಕೃತರು: ಗಣೇಶ್ ಪಿ.ಬಿ., ಶಶಿಕಲಾ ಎನ್., ಅಧ್ಯಕ್ಷತೆ: ವೆಂಕಟರಾವ್, ಅತಿಥಿ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಭಾರತ ಯಾತ್ರಾ ಕೇಂದ್ರ–ರಂಗಸೌರಭ, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರ ಆವರಣ, ಜೆ.ಸಿ. ರಸ್ತೆ, ಸಂಜೆ 4.30

'ಎಸ್.ಪಿ. ವರದರಾಜು' ಪ್ರಶಸ್ತಿ ಪ್ರದಾನ:


ದತ್ತಣ್ಣ


ಬಿ. ಜಯಶ್ರೀ

ದತ್ತಾತ್ರೇಯ(ದತ್ತಣ್ಣ), ಪ್ರಶಸ್ತಿ ಪುರಸ್ಕೃತರು: ಡಿ. ಲಲಿತಮ್ಮ, ಬೆಂಗಳೂರು ನಾಗೇಶ್, ಅತಿಥಿ: ಬಿ. ಜಯಶ್ರೀ, ಆಶಯ ನುಡಿ: ಬರಗೂರು ರಾಮಚಂದ್ರಪ್ಪ, ಆಯೋಜನೆ: ಎಸ್.ಪಿ. ವರದರಾಜು ಆತ್ಮೀಯರ ಬಳಗ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

ಬಿ.ಕೆ.ಎಸ್. ವರ್ಮ ಒಂದು ನೆನಪು: ಉಪಸ್ಥಿತಿ: ಚಂದ್ರನಾಥ ಆಚಾರ್ಯ, ವೆಂಕಟಾಚಲಪತಿ, ಚಿ.ಸು. ಕೃಷ್ಣಸೆಟ್ಟಿ, ಕೆ.ವಿ. ಸುಬ್ರಮಣ್ಯಂ, ವಿ. ಹರಿರಾಂ, ಆಯೋಜನೆ ಮತ್ತು ಸ್ಥಳ: ಕಲಾಮಂದಿರ ಕಲಾ ಶಾಲೆ, ಕಲಾಮಂದಿರ, ಅ.ನ. ಸುಬ್ಬರಾಯರ ರಸ್ತೆ, ಹನುಮಂತನಗರ, ಬೆಳಿಗ್ಗೆ 11

ಶಾಂತ ಎ. ತಿಮ್ಮಯ್ಯ ಅವರೊಂದಿಗೆ ಸಂವಾದ ಸಭೆ: ಬಿ.ವಿ. ಗೋಪಾಲ್ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಎಫ್‌ಕೆಸಿಸಿಐನ ಎಸ್.ಎಂ.ವಿ ಸಭಾಂಗಣ, ಕೆ.ಜಿ. ರಸ್ತೆ, ಸಂಜೆ 5

ಡಾ. ಎಂ.ಎ. ಜಯಚಂದ್ರ ದತ್ತಿ ಕಾರ್ಯಕ್ರಮ: ವಿಷಯ: 'ಜೈನ ಸಾಹಿತ್ಯದಲ್ಲಿ ಅಹಿಂಸೆಯ ಪರಿಕಲ್ಪನೆ', ಉಪನ್ಯಾಸ: ಪದ್ಮಿನಿ ನಾಗರಾಜು, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ. ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ಪ್ರವಚನ ವಾಹಿನಿ ಕಾರ್ಯಕ್ರಮ: 'ಇಂದಿನ ಸಮಾಜಕ್ಕೆ ಶಂಕರರ ಕೊಡುಗೆಗಳು' ಕುರಿತು ಉಪನ್ಯಾಸ: ಮಂಜುನಾಥ್ ಭಟ್ ವಿನಾಯಕ, ಆಯೋಜನೆ ಮತ್ತು ಸ್ಥಳ: ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿಯ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ನಿಧನ ವಾರ್ತೆ

ಎಸ್‌. ಮಂಜು



ಬೆಂಗಳೂರು: 'ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್'ನ ಮುದ್ರಣ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಎಸ್. ಮಂಜು(54) ಮಂಗಳವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಗುರುವಾರ ಬೆಳಿಗ್ಗೆ 9 ಗಂಟೆಗೆ ಬನಶಂಕರಿ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಅಶ್ಲೀಲ ವಿಡಿಯೊ ತೋರಿಸಿ ಐದು ವರ್ಷ ಲೈಂಗಿಕ ಕಿರುಕುಳ ಎಸಗಿದ್ದ ಅಪರಾಧಿ

ಮೊಮ್ಮಗಳ ಮೇಲೆ ದೌರ್ಜನ್ಯ: ಅಜ್ಜನಿಗೆ ಜೈಲು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಮೊಮ್ಮಗಳ ಮೇಲೆ ನಿರಂತರವಾಗಿ ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರ ಎಸಗಿದ್ದ ಅಜ್ಜನಿಗೆ 20 ವರ್ಷಗಳ ಜೈಲು ಶಿಕ್ಷೆ ವಿಧಿಸಿ ನಗರದ ತ್ವರಿತ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ) ಆದೇಶ ಹೊರಡಿಸಿದೆ.

ಕುಮಾರಸ್ವಾಮಿ ಲೇಔಟ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ಕೆ.ಎಸ್. ರೂಪಾ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಪಿ. ಕೃಷ್ಣವೇಣಿ ವಾದಿಸಿದ್ದರು.

'ಪೋಷಕರ ಜೊತೆಯಲ್ಲಿ ಬಾಲಕಿ ವಾಸವಿದ್ದಳು. ಅವರ ಜೊತೆಯಲ್ಲೇ ಅಪರಾಧಿ ಸಹ ನೆಲೆಸಿದ್ದ. ನಿತ್ಯವೂ ಪೋಷಕರು ಕೆಲಸಕ್ಕೆಂದು ಹೊರಗೆ ಹೋಗುತ್ತಿದ್ದರು. ಅವರು ಬರುವವರೆಗೂ ಬಾಲಕಿ ಹಾಗೂ ಅಜ್ಜ (ಬಾಲಕಿಯ ತಂದೆಯ ಅಪ್ಪ) ಮಾತ್ರ ಮನೆಯಲ್ಲಿರುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'70 ವರ್ಷದ ಅಪರಾಧಿ, ಅಶ್ಲೀಲ ವಿಡಿಯೊಗಳನ್ನು ಹೆಚ್ಚಾಗಿ ನೋಡುತ್ತಿದ್ದ. ನಿತ್ಯವೂ ಶಾಲೆಗೆ ಹೋಗಿ ಬರುತ್ತಿದ್ದ ಮೊಮ್ಮಗಳನ್ನು ಆಟವಾಡಿಸುವ ನೆಪದಲ್ಲಿ ಮೈ-ಕೈ ಮುಟ್ಟಿ ದೌರ್ಜನ್ಯ ಎಸಗುತ್ತಿದ್ದ. 3ನೇ ತರಗತಿಯಿಂದ 8ನೇ ತರಗತಿಯವರೆಗೂ ಬಾಲಕಿ ಮೇಲೆ ದೌರ್ಜನ್ಯ ಮುಂದುವರಿಸಿದ್ದ. ಬಾಲಕಿಗೂ ಅಶ್ಲೀಲ ವಿಡಿಯೊ ತೋರಿಸುತ್ತಿದ್ದ ಆರೋಪಿ, ಲೈಂಗಿಕವಾಗಿ ಪ್ರಚೋದಿಸುತ್ತಿದ್ದ. ಐದು ವರ್ಷಗಳಲ್ಲಿ ಹಲವು ಬಾರಿ ಬಾಲಕಿ ಮೇಲೆ ಅಪರಾಧಿ ಅತ್ಯಾಚಾರವೆಸಗಿದ್ದ' ಎಂದು ಮೂಲಗಳು ತಿಳಿಸಿವೆ.

ತಂದೆಯನ್ನು ಕೊಲ್ಲುವ ಬೆದರಿಕೆ: 'ಮನೆಯಲ್ಲಿ ಯಾರೂ ಇಲ್ಲದ ವೇಳೆಯಲ್ಲಿ ಮೊಮ್ಮಗಳ ಜೊತೆ ಅಜ್ಜ ಅಸಭ್ಯವಾಗಿ ವರ್ತಿಸುತ್ತಿದ್ದ. ಈತನ ವರ್ತನೆಯಿಂದ ಬೇಸತ್ತ ಬಾಲಕಿ, ತಂದೆಗೆ ವಿಷಯ ತಿಳಿಸುವುದಾಗಿ ಹೇಳಿದ್ದಳು. ಬಾಲಕಿಯನ್ನೇ ಹೆದರಿಸಿದ್ದ ಅಪರಾಧಿ, ತಂದೆಯನ್ನೇ ಕೊಲೆ ಮಾಡುವುದಾಗಿ ಬೆದರಿಸಿದ್ದ. 2020ರಲ್ಲಿ 8ನೇ ತರಗತಿಯಲ್ಲಿ ಓದುತ್ತಿದ್ದ ಬಾಲಕಿ, ತನ್ನ ಮೇಲೆ ಅಜ್ಜ ಎಸಗುತ್ತಿದ್ದ ಕೃತ್ಯದ ಬಗ್ಗೆ ಪೋಷಕರಿಗೆ ವಿಷಯ ತಿಳಿಸಿದ್ದಳು. ಬಳಿಕವೇ ಪೋಷಕರು ಕುಮಾರಸ್ವಾಮಿ ಲೇಔಟ್ ಠಾಣೆಗೆ ದೂರು ನೀಡಿದ್ದರು. ಆರೋಪಿಯನ್ನು ಬಂಧಿಸಿ ತನಿಖೆ ಕೈಗೊಂಡಿದ್ದ ತನಿಖಾಧಿಕಾರಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು' ಎಂದು ' ಎಂದು ಪೊಲೀಸ್ ಮೂಲಗಳು ಹೇಳಿವೆ.

₹ 7 ಲಕ್ಷ ಪರಿಹಾರ: 'ನೊಂದ ಬಾಲಕಿಗೆ ಡಿಎಲ್‌ಎಸ್‌ಎ ವತಿಯಿಂದ ₹ 7 ಲಕ್ಷ ಪರಿಹಾರ ನೀಡಬೇಕು' ಎಂದು ನ್ಯಾಯಾಲಯದ ಆದೇಶದಲ್ಲಿ ತಿಳಿಸಲಾಗಿದೆ.

ಬಿ.ಇ ವಿದ್ಯಾರ್ಥಿ ಕೊಲೆ: ಅಪರಾಧಿಗೆ ಜೀವಾವಧಿ ಶಿಕ್ಷೆ


ಜಾನ್ಸನ್

ಬೆಂಗಳೂರು: ಚಿನ್ನದ ಸರ ಕಳ್ಳತನ ವೇಳೆ ಮಹಿಳೆಯ ಸಹಾಯಕ್ಕೆ ಹೋಗಿದ್ದ ಸಾಯಿಚರಣ್ (22) ಎಂಬುವವರನ್ನು ಕೊಲೆ ಮಾಡಿದ್ದ ಅಪರಾಧಿ ಜಾನ್ಸನ್‌ಗೆ (21) ಜೀವಾವಧಿ ಶಿಕ್ಷೆ ವಿಧಿಸಿ ನಗರದ 29ನೇ ಸಿಸಿಎಚ್ ನ್ಯಾಯಾಲಯ ಆದೇಶ ಹೊರಡಿಸಿದೆ.

ಎಚ್‌ಎಎಲ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಕೊಲೆ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶ ಕೆ.ಎಂ. ರಾಜಶೇಖರ್ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಜಹಿದಾ ಬಾನು ವಾದಿಸಿದ್ದರು.

'ವಿಭೂತಿಪುರ ನಿವಾಸಿ ಜಾನ್ಸನ್, ಎಚ್‌ಎಎಲ್ ಉದ್ಯೋಗಿಯೊಬ್ಬರ ಮಗ. ಅಪರಾಧ ಹಿನ್ನೆಲೆಯುಳ್ಳ ಈತ, ನಗರದಲ್ಲಿ ಸುತ್ತಾಡಿ ಮಹಿಳೆಯರ ಚಿನ್ನದ ಸರಗಳನ್ನು ಕಳವು ಮಾಡುತ್ತಿದ್ದ. ಈತನ ವಿರುದ್ಧ ಹಲವು ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೊಲೆಯಾಗಿದ್ದ ಸಾಯಿಚರಣ್ ಆಂಧ್ರಪ್ರದೇಶದವರು. ಬಿ.ಇ ವ್ಯಾಸಂಗಕ್ಕಾಗಿ ನಗರಕ್ಕೆ ಬಂದಿದ್ದರು. 2017ರ ಜೂನ್ 10ರಂದು ಸಾಯಿಚರಣ್ ಅವರನ್ನು ಜಾನ್ಸನ್ ಕೊಲೆ ಮಾಡಿದ್ದ' ಎಂದು ತಿಳಿಸಿವೆ.

ಬೈಕ್‌ನಲ್ಲಿ ಬೆನ್ನಟ್ಟಿದ್ದ ಸಾಯಿಚರಣ್: 'ವಿಜ್ಞಾನ ನಗರದಲ್ಲಿ ಹೊರಟಿದ್ದ ಮಹಿಳೆಯೊಬ್ಬರನ್ನು ಹಿಂಬಾಲಿಸಿದ್ದ ಜಾನ್ಸನ್, ಚಿನ್ನದ ಸರ ಕಿತ್ತುಕೊಂಡು ದ್ವಿಚಕ್ರ ವಾಹನದಲ್ಲಿ ಪರಾರಿಯಾಗಲು ಯತ್ನಿಸಿದ್ದ. ಸಹಾಯಕ್ಕಾಗಿ ಮಹಿಳೆ ಕೂಗಾಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸ್ನೇಹಿತರ ಜೊತೆ ನಿಂತಿದ್ದ ಸಾಯಿಚರಣ್, ಮಹಿಳೆ ಕೂಗಾಟ ಕೇಳಿ ಸಹಾಯಕ್ಕೆ ಹೋಗಿದ್ದರು. ತಮ್ಮ ಪಲ್ಸರ್ ಬೈಕ್‌ನಲ್ಲಿ ಜಾನ್ಸನ್‌ನನ್ನು ಬೆನ್ನಟ್ಟಿದ್ದರು. ಕಗ್ಗದಾಸಪುರ ಮುಖ್ಯರಸ್ತೆಯಲ್ಲಿ ಜಾನ್ಸನ್‌ನನ್ನು ಅಡ್ಡಗಟ್ಟಿ, ಹಿಡಿದುಕೊಳ್ಳಲು ಮುಂದಾಗಿದ್ದರು. ಇದೇ ವೇಳೆಯೇ ಅಪರಾಧಿ, ಚಾಕುವಿನಿಂದ ಇರಿದು ಸಾಯಿಚರಣ್ ಅವರನ್ನು ಕೊಂದು ಸ್ಥಳದಿಂದ ಪರಾರಿಯಾಗಿದ್ದ' ಎಂದು ಮೂಲಗಳು ತಿಳಿಸಿವೆ.

'ಕೊಲೆ ಸಂಬಂಧ ಪ್ರಕರಣ ದಾಖಲಿಸಿಕೊಂಡು ಜಾನ್ಸನ್‌ನನ್ನು ಬಂಧಿಸಿದ್ದ ಇನ್‌ಸ್ಪೆಕ್ಟರ್ ಸಾದಿಕ್ ಪಾಷಾ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ನ್ಯಾಯಾಲಯ, ಜೀವಾವಧಿ ಶಿಕ್ಷೆ ಜೊತೆಯಲ್ಲಿ ಅಪರಾಧಿಗೆ ₹ 2 ಲಕ್ಷ ದಂಡ ವನ್ನೂ ವಿಧಿಸಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ರೌಡಿ, ರಾಜಕಾರಣಿಗಳಿಗೆ ನಾಡ ಪಿಸ್ತೂಲ್ ಮಾರಾಟ

ಬೆಂಗಳೂರು: ಹೊರರಾಜ್ಯದಿಂದ ನಾಡ ಪಿಸ್ತೂಲ್‌ಗಳನ್ನು ತಂದು ಮಾರುತ್ತಿದ್ದ ಜಾಲ ಭೇದಿಸಿರುವ ಸಿಸಿಬಿ ಪೊಲೀಸರು, ಆರೋಪಿ ರೋಷನ್ ದಯರಾಮ್ ಬನ್ಸೂರ್ (40) ಎಂಬಾತನನ್ನು ಬಂಧಿಸಿದ್ದಾರೆ.

'ಮಹಾರಾಷ್ಟ್ರ ನಾಗ್ಪುರದ ರೋಷನ್, ಹಲವು ವರ್ಷಗಳಿಂದ ನಾಡ ಪಿಸ್ತೂಲ್ ಮಾರಾಟ ದಂಧೆಯಲ್ಲಿ ತೊಡಗಿಸಿಕೊಂಡಿದ್ದ. ಈತನಿಂದ 10 ನಾಡ ಪಿಸ್ತೂಲ್ ಹಾಗೂ 20 ಜೀವಂತ ಗುಂಡುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಜಂಟಿ ಕಮಿಷನರ್ ಎಸ್.ಡಿ.ಶರಣಪ್ಪ ತಿಳಿಸಿದರು.

'ವ್ಯಕ್ತಿಯೊಬ್ಬರ ಕೊಲೆ ಯತ್ನ ಹಾಗೂ ಕಳ್ಳತನ ಸಂಬಂಧ ರೋಷನ್ ವಿರುದ್ಧ ಮಹಾರಾಷ್ಟ್ರದ ಎರಡು ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದವು. ರೌಡಿಗಳು ಹಾಗೂ ಅಪರಾಧ ಕೃತ್ಯ ಎಸಗುವವರ ಜೊತೆ ಒಡನಾಟ ಹೊಂದಿದ್ದ ರೋಷನ್, ಅಕ್ರಮ ಪಿಸ್ತೂಲ್ ಮಾರಾಟಕ್ಕೆ ಇಳಿದಿದ್ದ' ಎಂದು ಹೇಳಿದರು.

'ನಗರದ ಕೆಲ ವ್ಯಕ್ತಿಗಳಿಗೆ ನಾಡ ಪಿಸ್ತೂಲ್ ಮಾರಲೆಂದು ಆರೋಪಿ ರೋಷನ್ ಇತ್ತೀಚೆಗೆ ನಗರಕ್ಕೆ ಬಂದಿದ್ದ. ಈತನ ಬಗ್ಗೆ ಮಾಹಿತಿ ಲಭ್ಯವಾಗುತ್ತಿದ್ದಂತೆ ಕಾರ್ಯಾಚರಣೆ ನಡೆಸಲಾಗಿತ್ತು. 4 ನಾಡಪಿಸ್ತೂಲ್ ಹಾಗೂ 12 ಜೀವಂತ ಗುಂಡುಗಳ ಸಮೇತ ಆರೋಪಿಯನ್ನು ಬಂಧಿಸಲಾಗಿತ್ತು' ಎಂದು ತಿಳಿಸಿದರು.

'ಆರೋಪಿಯನ್ನು ವಿಚಾರಣೆಗೆ ಒಳಪಡಿಸಿದಾಗ, ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಸ್ಥಳವೊಂದರಲ್ಲಿ ಮತ್ತಷ್ಟು ನಾಡ ಪಿಸ್ತೂಲ್ ಬಚ್ಚಿಟ್ಟಿದ್ದ ಮಾಹಿತಿ ಲಭ್ಯವಾಯಿತು. ಸ್ಥಳಕ್ಕೆ ಹೋಗಿದ್ದ ವಿಶೇಷ ತಂಡ, 6 ನಾಡ ಪಿಸ್ತೂಲ್ ಹಾಗೂ 8 ಜೀವಂತ ಗುಂಡುಗಳನ್ನು ಜಪ್ತಿ ಮಾಡಿದೆ' ಎಂದು ಶರಣಪ್ಪ ಹೇಳಿದರು.

₹ 50 ಸಾವಿರಕ್ಕೆ ಮಾರಾಟ: 'ಮಧ್ಯಪ್ರದೇಶ, ಬಿಹಾರ್ ಹಾಗೂ ಉತ್ತರ ಪ್ರದೇಶದಲ್ಲಿರುವ ಪಿಸ್ತೂಲ್ ತಯಾರಿಸುವವರ ಜೊತೆ ರೋಷನ್ ಒಡನಾಟ ಹೊಂದಿದ್ದ. ಅವರಿಂದ ಪಿಸ್ತೂಲ್ ಖರೀದಿಸಿ ತಂದು ರಾಜ್ಯದಲ್ಲಿ ಮಾರುತ್ತಿದ್ದ. ಒಂದು ಪಿಸ್ತೂಲ್‌ಗೆ ₹ 30 ಸಾವಿರದಿಂದ ₹ 50 ಸಾವಿರ ಹಣ ಪಡೆಯುತ್ತಿದ್ದ' ಎಂದು ಸಿಸಿಬಿ ಪೊಲೀಸರು ತಿಳಿಸಿದರು.

'ಅಪರಾಧ ಹಿನ್ನೆಲೆಯುಳ್ಳವರು, ರೌಡಿಗಳು, ರಿಯಲ್ ಎಸ್ಟೇಟ್ ಉದ್ಯಮಿಗಳು, ಕೆಲ ರಾಜಕಾರಣಿಗಳಿಗೆ ಆರೋಪಿ ಪಿಸ್ತೂಲ್ ಮಾರಿದ್ದಾನೆ. ಅವರೆಲ್ಲರ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಹೇಳಿದರು.

ಪಾರ್ಟಿ: ಸ್ನೇಹಿತೆಯರ ಮೇಲೆ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನೇಹಿತೆಯರಿಬ್ಬರನ್ನು ಮನೆಗೆ ಕರೆದು ಮದ್ಯದ ಪಾರ್ಟಿ ಮಾಡಿ ಅತ್ಯಾಚಾರ ಎಸಗಿದ್ದ ಇಬ್ಬರು ಆರೋಪಿಗಳನ್ನು ವಿವೇಕನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆಂಧ್ರ ಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯ ಗರಕಿಪತಿ ಅಜಯ್ ವೆಂಕಟ್ ಸಾಯಿ ಅಲಿಯಾಸ್ ಅಜಯ್ (23) ಹಾಗೂ ಬಿಹಾರದ ಮುಜಾಫರ್‌ಪುರ ಜಿಲ್ಲೆಯ ಆದಿತ್ಯ ಅಭಿರಾಜ್ (26) ಬಂಧಿತರು. ಸಂತ್ರಸ್ತ ಯುವತಿಯರು ನೀಡಿರುವ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಕೇಂದ್ರ ವಿಭಾಗದ ಡಿಸಿಪಿ ಶ್ರೀನಿವಾಸ್ ಗೌಡ ತಿಳಿಸಿದರು.

'ಆರೋಪಿ ಅಜಯ್, ಪಂಜಾಬ್‌ನಲ್ಲಿ ಎಂಬಿಎ ವ್ಯಾಸಂಗ ಮಾಡುತ್ತಿದ್ದ. ಇನ್ನೊಬ್ಬ ಆರೋಪಿ ಆದಿತ್ಯ, ನಗರದ ಕಾಲೇಜೊಂದರ ಸ್ನಾತಕೋತ್ತರ ಪದವಿ ವಿದ್ಯಾರ್ಥಿ. ಪಂಜಾಬ್‌ನಲ್ಲಿದ್ದ ಅಜಯ್, ಆಗಾಗ ಬೆಂಗಳೂರಿಗೆ ಬರುತ್ತಿದ್ದ. ಕೋರಮಂಗಲದ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿದ್ದ ಸ್ನೇಹಿತ ಆದಿತ್ಯ ಜೊತೆ ಸೇರಿ ಪಾರ್ಟಿ ಮಾಡುತ್ತಿದ್ದ' ಎಂದು ಹೇಳಿದರು.

'ಸಂತ್ರಸ್ತ ಯುವತಿಯರಿಬ್ಬರ ಪೈಕಿ ಒಬ್ಬರು, ಆರೋಪಿ ಅಜಯ್ ಜೊತೆ ಪಂಜಾಬ್‌ನ ಒಂದೇ ಕಾಲೇಜಿನಲ್ಲಿ ಮೂರು ವರ್ಷ ಓದಿದ್ದರು. ಬಳಿಕ ಬೆಂಗಳೂರಿಗೆ ಬಂದಿದ್ದ ಯುವತಿ, ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಆಗಾಗ ಅಜಯ್ ಜೊತೆ ಮಾತನಾಡುತ್ತಿದ್ದರು' ಎಂದು ತಿಳಿಸಿದರು.

ಕರೆ ಮಾಡಿ ಪಾರ್ಟಿಗೆ ಕರೆದಿದ್ದ: 'ಆರೋಪಿ ಅಜಯ್, ಪಂಜಾಬ್‌ನಿಂದ ಫೆ. 4ರಂದು ಬೆಂಗಳೂರಿಗೆ ಬಂದಿದ್ದ. ಆದಿತ್ಯ ಮನೆಯಲ್ಲಿ ಉಳಿದುಕೊಂಡಿದ್ದ. ಫೆ. 5ರಂದು ಸಂಜೆ ಸ್ನೇಹಿತೆಗೆ ಕರೆ ಮಾಡಿದ್ದ ಅಜಯ್, ಮದ್ಯದ ಪಾರ್ಟಿ ಮಾಡೋಣವೆಂದು ಮನೆಗೆ ಕರೆದಿದ್ದ' ಎಂದು ಪೊಲೀಸರು ಹೇಳಿದರು.

'ಅಜಯ್ ಮಾತಿಗೆ ಒಪ್ಪಿದ ಯುವತಿ, ತನ್ನ ಸ್ನೇಹಿತೆಯನ್ನು ಜೊತೆಯಲ್ಲಿ ಕರೆದುಕೊಂಡು ಆದಿತ್ಯ ಮನೆಗೆ ರಾತ್ರಿ ಹೋಗಿದ್ದರು. ನಾಲ್ವರೂ ಮದ್ಯ ಕುಡಿದಿದ್ದರು. ತಡರಾತ್ರಿ ಸ್ನೇಹಿತೆಯರಿಬ್ಬರ ಜೊತೆ ಅಸಭ್ಯವಾಗಿ ವರ್ತಿಸಿದ್ದ ಅಜಯ್ ಹಾಗೂ ಆದಿತ್ಯ, ಅತ್ಯಾಚಾರ ಎಸಗಿದ್ದರು. ಮರುದಿನ ಸ್ನೇಹಿತೆಯರು, ಕ್ಯಾಬ್‌ನಲ್ಲಿ ಮನೆಗೆ ಹೋಗಿದ್ದರು. ಮನೆಯವರಿಗೆ ವಿಷಯ ತಿಳಿಸಿ, ನಂತರ ಠಾಣೆಗೆ ಬಂದು ದೂರು ನೀಡಿದ್ದರು' ಎಂದು ಪೊಲೀಸರು ತಿಳಿಸಿದರು.

ನಕಲಿ ಫಲಕ, ತಪ್ಪು ಗ್ರಹಿಕೆಯಿಂದ ದಂಡ

ಸಂಚಾರ ನಿಯಮ ಪಾಲಿಸಿದವರ ಮೇಲೂ ಪ್ರಕರಣ • ಅಸಮಾಧಾನ ವ್ಯಕ್ತಪಡಿಸಿದ ಸಾರ್ವಜನಿಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ನೋಂದಣಿ ಸಂಖ್ಯೆ ಫಲಕ ಹಾಗೂ ಸಂಚಾರ ಪೊಲೀಸರ ತಪ್ಪು ಗ್ರಹಿಕೆಯಿಂದ ಹಲವು ವಾಹನಗಳ ಮೇಲೆ ಪ್ರಕರಣಗಳು ದಾಖಲಾಗುತ್ತಿದ್ದು, ಈ ಬಗ್ಗೆ ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ದಂಡ ಪಾವತಿ ಮೇಲೆ ಶೇ 50ರಷ್ಟು ರಿಯಾಯಿತಿ ಘೋಷಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಜನರು ದಂಡ ಪಾವತಿಸಲು ಆಸಕ್ತಿ ತೋರುತ್ತಿದ್ದಾರೆ. ಇದರ ನಡುವೆಯೇ ಕೆಲ ಸಾರ್ವಜನಿಕರು, ಸುಳ್ಳು ಪ್ರಕರಣಗಳಿಂದ ಸಂಕಷ್ಟಕ್ಕೆ ಸಿಲುಕಿದ್ದಾರೆ.

'ನಿಯಮ ಉಲ್ಲಂಘನೆ ಮಾಡದಿದ್ದರೂ ವಾಹನದ ಮೇಲೆ ಸುಖಾಸುಮ್ಮನೇ ಪ್ರಕರಣಗಳು ದಾಖಲಾಗಿವೆ. ಮಾಡದ ತಪ್ಪಿಗೆ ದಂಡ ತುಂಬುವುದೇ ಅಥವಾ ಬೇಡವೇ ಎಂಬ ಗೊಂದಲದಲ್ಲಿದ್ದೇವೆ' ಎಂದು ದ್ವಿಚಕ್ರ ವಾಹನ ಮಾಲೀಕರೊಬ್ಬರು ಹೇಳಿದರು.

ಪರಿಶೀಲನೆ ವೇಳೆ ಸುಳ್ಳು ಪ್ರಕರಣ ಪತ್ತೆ: ಶೇ 50ರಷ್ಟು ರಿಯಾಯಿತಿ ಇರುವುದರಿಂದ ಹೆಚ್ಚಿನ ಜನ, ತಮ್ಮ ವಾಹನಗಳ ಮೇಲಿನ ದಂಡದ ವಿವರವನ್ನು ಆನ್‌ಲೈನ್ ಮೂಲಕ ಪರಿಶೀಲಿಸುತ್ತಿದ್ದಾರೆ. ಈ ಪೈಕಿ ಹಲವರ ವಾಹನಗಳ ಮೇಲೆ ಸುಳ್ಳು ಪ್ರಕರಣಗಳು ದಾಖಲಾಗಿರುವುದು ಪತ್ತೆಯಾಗುತ್ತಿದೆ.

'ನನ್ನ ಬಳಿ ಹೊಂಡಾ ಆಕ್ಟಿವಾ ದ್ವಿಚಕ್ರ ವಾಹನವಿದೆ. ಇದರ ನೋಂದಣಿ ಸಂಖ್ಯೆಯನ್ನು ಅಪರಿಚಿತನೊಬ್ಬ ತನ್ನ ಪಲ್ಸರ್ ಬೈಕ್‌ಗೆ ಹಾಕಿಕೊಂಡು ಓಡಾಡುತ್ತಿದ್ದಾನೆ. ಆತ ಸಂಚಾರ ನಿಯಮ ಉಲ್ಲಂಘಿಸಿದ್ದಕ್ಕೆ ನನ್ನ ವಾಹನದ ಮೇಲೆ ದಂಡ ವಿಧಿಸಲಾಗಿದೆ' ಎಂದು ಸಂಜಯನಗರದ ನಿವಾಸಿಯೊಬ್ಬರು ಹೇಳಿದರು.

ರಾಜಾಜಿನಗರದ ನಿವಾಸಿಯೊಬ್ಬರು, 'ನಿಯಮ ಉಲ್ಲಂಘಿಸಿದ್ದ ಬೈಕ್‌ನ ನೋಂದಣಿ ಫಲಕದ ಸಂಖ್ಯೆಯನ್ನು ತಪ್ಪಾಗಿ ಗ್ರಹಿಸಿರುವ ಪೊಲೀಸರು, ನನ್ನ ವಾಹನದ ಮೇಲೆ ದಂಡ ಹಾಕಿದ್ದಾರೆ. ಉಲ್ಲಂಘನೆಯ ಫೋಟೊ ನೋಡಿದಾಗ, ಬೇರೆ ವಾಹನದ ಫೋಟೊ ಇದೆ' ಎಂದರು.

'ನಕಲಿ ನೋಂದಣಿ ಸಂಖ್ಯೆ ಫಲಕ ಹಾಗೂ ಪೊಲೀಸರ ತಪ್ಪು ಗ್ರಹಿಕೆಯಿಂದ ದಾಖಲಾಗಿರುವ ಪ್ರಕರಣಗಳನ್ನು ರದ್ದು ಮಾಡಬೇಕು' ಎಂದು ಅವರು ಒತ್ತಾಯಿಸಿದರು.

'ದೂರು ನೀಡಿದರೆ ಕ್ರಮ'

'ನಕಲಿ ನೋಂದಣಿ ಸಂಖ್ಯೆ ಫಲಕ ಹಾಗೂ ತಪ್ಪು ಗ್ರಹಿಕೆಯಿಂದ ಕೆಲ ವಾಹನಗಳ ಮೇಲೆ ಪ್ರಕರಣ ದಾಖಲಾಗಿರುವ ಮಾಹಿತಿ ಗಮನಕ್ಕೆ ಬಂದಿದೆ. ಇಂಥ ಪ್ರಕರಣಗಳಲ್ಲಿ ದಂಡ ಪಾವತಿಸುವ ಅಗತ್ಯವಿಲ್ಲ. ದೂರು ನೀಡಿದರೆ, ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದು ಜಂಟಿ ಕಮಿಷನರ್ (ಸಂಚಾರ) ಎಂ.ಎನ್. ಅನುಚೇತ್ ತಿಳಿಸಿದರು.

'ಸಂಚಾರ ನಿರ್ವಹಣಾ ಕೇಂದ್ರದಲ್ಲಿ (ಟಿಎಂಸಿ) ಖುದ್ದಾಗಿ ದೂರು ನೀಡಬಹುದು. automationpubbcp@ksp.gov.in ಇ–ಮೇಲ್ ವಿಳಾಸಕ್ಕೂ ದೂರು ಕಳುಹಿಸಹುದು' ಎಂದರು.

ಕಾಡುಗೋಡಿ ಠಾಣೆ ವ್ಯಾಪ್ತಿಯಲ್ಲಿ ಘಟನೆ • ಇಬ್ಬರ ಬಂಧನ

ಕೆಲಸಗಾರ ಆತ್ಮಹತ್ಯೆ: ವಿಷಯ ಮುಚ್ಚಿಟ್ಟು ಅಂತ್ಯಸಂಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸಗಾರ ಆತ್ಮಹತ್ಯೆ ಮಾಡಿಕೊಂಡಿದ್ದ ಸಂಗತಿ ಮುಚ್ಚಿಟ್ಟು ಅಂತ್ಯಕ್ರಿಯೆ ಮಾಡಿದ್ದ ಗುಜರಿ ವ್ಯಾಪಾರಿ ಸೇರಿ ಇಬ್ಬರನ್ನು ಕಾಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಎರಡು ತಿಂಗಳು ಸಂಬಳ ಸಿಗದಿದ್ದರಿಂದ ನೊಂದಿದ್ದ ಕೆಲಸಗಾರ ಎಂ.ಡಿ. ರಸೂಲ್ ಹೌಲಾದಾರ್ (30) ಜ. 14ರಂದು ಲುಂಗಿಯಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಸಾವಿನ ಸಂಗತಿ ಮುಚ್ಚಿಟ್ಟಿದ್ದ ಗುಜರಿ ವ್ಯಾಪಾರಿ ಮೊಹಮ್ಮದ್ ರಂಜಾನ್ (40), ಕೆಲಸಗಾರ ರಸಲ್ (24) ಎಂಬಾತನ ಸಹಾಯದಿಂದ ಅಂತ್ಯಕ್ರಿಯೆ ಮಾಡಿಸಿದ್ದ' ಎಂದು ಪೊಲೀಸರು ಹೇಳಿದರು.

'ರಸೂಲ್ ಅವರದ್ದು ಆತ್ಮಹತ್ಯೆ ಎಂಬುದು ಗೊತ್ತಾಗುತ್ತಿದ್ದಂತೆ ಕುಟುಂಬಸ್ಥರು ದೂರು ನೀಡಿದ್ದರು. ರಸೂಲ್ ಮೇಲೆ ಹಲ್ಲೆ ಮಾಡಿ ಜೀವ ಬೆದರಿಕೆಯೊಡ್ಡಿ ಆತ್ಮಹತ್ಯೆಗೆ ಪ್ರಚೋದನೆ ನೀಡಿದ್ದ ಆರೋಪದಡಿ ಮೊಹಮ್ಮದ್ ರಂಜಾನ್ ಹಾಗೂ ಕೃತ್ಯಕ್ಕೆ ಸಹಕರಿಸಿದ್ದ ರಸಲ್‌ನನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.

ಸಂಬಳ ಕೇಳಿದ್ದಕ್ಕೆ ಹಲ್ಲೆ: 'ಪಶ್ಚಿಮ ಬಂಗಾಳದ ಎಂ.ಡಿ. ರಸೂಲ್, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಸಿಗೇಹಳ್ಳಿಯಲ್ಲಿ ವಾಸವಿದ್ದರು. ಆರೋಪಿ ಮೊಹಮ್ಮದ್ ರಂಜಾನ್ ಗುಜರಿ ಮಳಿಗೆಯಲ್ಲಿ ಕೆಲಸಕ್ಕೆ ಸೇರಿದ್ದರು. ಸೈಕಲ್‌ನಲ್ಲಿ ಸುತ್ತಾಡಿ ಪ್ಲಾಸ್ಟಿಕ್ ಸಂಗ್ರಹಿಸಿ ತರುವುದು ರಸೂಲ್ ಕೆಲಸವಾಗಿತ್ತು' ಎಂದು ಪೊಲೀಸರು ಹೇಳಿದರು.

'ರಸೂಲ್ ಅವರು ಪ್ರತಿ ತಿಂಗಳು ಸಂಬಳ ಬರುತ್ತಿದ್ದಂತೆ ಪತ್ನಿಗೆ ಹಣ ಕಳುಹಿಸುತ್ತಿದ್ದರು. ಆದರೆ, ಎರಡು ತಿಂಗಳಿನಿಂದ ಅವರಿಗೆ ಸಂಬಳ ಬಂದಿರಲಿಲ್ಲ. ಪತ್ನಿಗೆ ಹಣ ಕಳುಹಿಸಲು ಸಾಧ್ಯವಾಗಿರಲಿಲ್ಲ' ಎಂದು ತಿಳಿಸಿದರು.

'ಜ. 14ರಂದು ಮೊಹಮ್ಮದ್ ರಂಜಾನ್ ಬಳಿ ತೆರಳಿದ್ದ ರಸೂಲ್, ಸಂಬಳ ನೀಡುವಂತೆ ಕೋರಿದ್ದರು. ಸಿಟ್ಟಾಗಿದ್ದ ರಂಜಾನ್, 'ನೀನು ಅಯೋಗ್ಯ. ನಿನಗೆ ಕೆಲಸ ಕೊಟ್ಟಿರುವುದೇ ಹೆಚ್ಚು. ಸಂಬಳ ಕೇಳುತ್ತಿಯಾ' ಎಂದು ಬೈದು ಹಲ್ಲೆ ಮಾಡಿದ್ದ. ಇದರಿಂದ ನೊಂದ ಎಂ.ಡಿ.ರಸೂಲ್ ಆತ್ಮಹತ್ಯೆ ಮಾಡಿಕೊಂಡಿದ್ದರು' ಎಂದು ಹೇಳಿದರು.

'ರಸೂಲ್ ಆತ್ಮಹತ್ಯೆ ಪ್ರಕರಣದಲ್ಲಿ ತಾನು ಜೈಲಿಗೆ ಹೋಗಬಹುದೆಂದು ತಿಳಿಸಿದ್ದ ಮೊಹಮ್ಮದ್ ರಂಜಾನ್, ಮೃತದೇಹವನ್ನು ಮುಸ್ಲಿಂ ವಿಧಿ-ವಿಧಾನದಂತೆ ಅಲಂಕರಿಸಿ ಖಾಜಿಸೊನ್ನೇನಹಳ್ಳಿಯ ಖಬರಸ್ತಾನ್‌ಕ್ಕೆ ತೆಗೆದುಕೊಂಡು ಹೋಗಿದ್ದ. ಅಲ್ಲಿಯ ಸಿಬ್ಬಂದಿಗೂ ಸುಳ್ಳು ಹೇಳಿ ಅಂತ್ಯಕ್ರಿಯೆ ಮಾಡಿದ್ದ' ಎಂದು ತಿಳಿಸಿದರು.

ಹೂತಿಟ್ಟಿದ್ದ ಮೃತದೇಹ ಹೊರಕ್ಕೆ: 'ಹೂತಿಟ್ಟಿದ್ದ ಎಂ.ಡಿ. ರಸೂಲ್ ಅವರ ಮೃತದೇಹವನ್ನು ನ್ಯಾಯಾಲಯದ ಅನುಮತಿಯಂತೆ ತಹಶೀಲ್ದಾರ್ ಸಮ್ಮುಖದಲ್ಲಿ ಹೊರಗೆ ತೆಗೆಯಲಾಗಿದೆ. ಮರಣೋತ್ತರ ಪರೀಕ್ಷೆ ಪ್ರಕ್ರಿಯೆ ಮುಗಿಸಿ, ಮೃತದೇಹವನ್ನು ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ದೊಣ್ಣೆಯಿಂದ ಹೊಡೆದು, ಮಹಿಳೆ ಮಾಂಗಲ್ಯ ಕಳವು

ಬೆಂಗಳೂರು: ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದ ಮಹಿಳೆಯೊಬ್ಬರಿಗೆ ದೊಣ್ಣೆಯಿಂದ ಹೊಡೆದು ಚಿನ್ನದ ಮಾಂಗಲ್ಯ ಸರ ಕದ್ದೊಯ್ದಿದ್ದ ಆರೋಪಿ ಪದ್ಮನಾಭ ಅಲಿಯಾಸ್ ಗೂಳಿ ಗುಂಡ (28) ಎಂಬುವವರನ್ನು ಬನಶಂಕರಿ ಪೊಲೀಸರು ಬಂಧಿಸಿದ್ದಾರೆ.

'ಬನಶಂಕರಿ 2ನೇ ಹಂತದ ಸರಬಂಡೆಪಾಳ್ಯದ ಪದ್ಮನಾಭ, ಅಪರಾಧ ಹಿನ್ನೆಲೆಯುಳ್ಳವ. ಈತನಿಂದ 40 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ. ಕೃತ್ಯದಲ್ಲಿ ಭಾಗಿಯಾಗಿದ್ದ ಇನ್ನೊಬ್ಬ ಆರೋಪಿ ಭುವನೇಶ್ ಅಲಿಯಾಸ್ ಮೈಕಲ್ ಎಂಬಾತ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

'ಸ್ಥಳೀಯ ನಿವಾಸಿ ಸುನಂದಾ ಎಂಬುವವರು ಫೆ. 2ರಂದು ಸಂಜೆ ಬನಶಂಕರಿಯ ರಾಘವೇಂದ್ರ ದೇವಸ್ಥಾನ ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದರು. ಎದುರುಗಡೆ ಬಂದಿದ್ದ ಆರೋಪಿಗಳು, ಸುನಂದಾ ಅವರನ್ನು ಅಡ್ಡಗಟ್ಟಿ ದೊಣ್ಣೆಯಿಂದ ಹೊಡೆದಿದ್ದರು. ಚಾಕು ತೋರಿಸಿ ಬೆದರಿಸಿ ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದರು' ಎಂದು ತಿಳಿಸಿದರು.

'ಕೃತ್ಯದ ಬಗ್ಗೆ ಸುನಂದಾ ಅವರಿಂದ ದೂರು ಪಡೆದು ಆರೋಪಿಯನ್ನು ಬಂಧಿಸಲಾಗಿದೆ. ಗಿರಿನಗರ, ಬಸವನಗುಡಿ, ಚನ್ನಮ್ಮನಕೆರೆ ಅಚ್ಚುಕಟ್ಟು, ಜಯನಗರ ಠಾಣೆ ವ್ಯಾಪ್ತಿಯಲ್ಲೂ ಆರೋಪಿ ಕೃತ್ಯ ಎಸಗಿರುವುದು ಗೊತ್ತಾಗಿದೆ' ಎಂದರು.

ಚಿತ್ರಾವಳಿ



ಬೆಂಗಳೂರು ವಕೀಲರ ಸಂಘದ ವತಿಯಿಂದ ರೂಪಿಸಲಾಗಿರುವ ನಗರದ ಮ್ಯಾಜಿಸ್ಟ್ರೇಟ್ ಕೋರ್ಟ್ ಕಟ್ಟಡದಲ್ಲಿನ ವಕೀಲರ ಅಗತ್ಯ ಮೂಲಸೌಕರ್ಯಗಳ ವೃದ್ಧಿ ಹಾಗೂ ಹಿರಿಯ ವಕೀಲರ ವಿಶ್ರಾಂತಿ ಸಭಾಂಗಣದ ಉದ್ಘಾಟನಾ ಸಮಾರಂಭ ಸೋಮವಾರ ನಡೆಯಿತು. ಈ ಸಂದರ್ಭದಲ್ಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಅವರನ್ನು (ಎಡದಿಂದ ನಾಲ್ಕನೆಯವರು) ಸಂಘದ ವತಿಯಿಂದ ಸನ್ಮಾನಿಸಲಾಯಿತು. ಖಜಾಂಚಿ ಎಂ.ಟಿ.ಹರೀಶ್, ಅಧ್ಯಕ್ಷ ವಿವೇಕ ಸುಬ್ಬಾರೆಡ್ಡಿ, ನ್ಯಾಯಮೂರ್ತಿಗಳಾದ ಬಿ.ವೀರಪ್ಪ ಮತ್ತು ಜಿ.ನರೇಂದರ್ ಹಾಗೂ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಜಿ.ಹರೀಶ್ ಮತ್ತು ಸಂಘದ ಮ್ಯಾಜಿಸ್ಟ್ರೇಟ್ ಕೋರ್ಟ್ ಘಟಕದ ಉಪಾಧ್ಯಕ್ಷ ಟಿ.ಎಂ.ಲಿಂಗೇಗೌಡ ಇದ್ದರು



ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ಜರಗನಹಳ್ಳಿ ವೀರಶೈವ ಸಮಾಜ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ, ವಚನಜ್ಯೋತಿ ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ, ಕಾವ್ಯ ಕ್ಷೇತ್ರದ ಎಂ.ಜಿ. ನಾಗರಾಜ್ ಅವರಿಗೆ ಲೇಖಕ ಎಸ್. ಷಡಕ್ಷರಿ 'ಶರಣ ದತ್ತಿ ಪ್ರಶಸ್ತಿ'ಯನ್ನು ಪ್ರದಾನ ಮಾಡಿದರು

ಮಹಿಳೆ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ತೂರು ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಮೋನಿಶಾ ಕತೂಮ್ (29) ಎಂಬುವವರ ಮೃತದೇಹ ಪತ್ತೆಯಾಗಿದ್ದು, ಕೊಲೆ ಶಂಕೆ ವ್ಯಕ್ತವಾಗಿದೆ.

ಮೋನಿಶಾ ಜೊತೆ ವಾಸವಿದ್ದ ಪತಿ ಶೇಖ್ ಮಜೀದ್ ಪರಾರಿಯಾಗಿದ್ದು, ಆತನೇ ಕೃತ್ಯ ಎಸಗಿರುವ ಬಗ್ಗೆ ಪೊಲೀಸರು ಅನುಮಾನ ವ್ಯಕ್ತಪಡಿಸಿದ್ದಾರೆ.

'ಪಶ್ಚಿಮ ಬಂಗಾಳದ ಮೋನಿಶಾ ಹಾಗೂ ಶೇಖ್ ಮಜೀದ್, ಮೂರು ವರ್ಷಗಳ ಹಿಂದೆಯಷ್ಟೇ ಮದುವೆಯಾಗಿದ್ದರು. ನಂತರ, ಕೆಲಸಕ್ಕಾಗಿ ಇಬ್ಬರೂ ನಗರಕ್ಕೆ ಬಂದಿದ್ದರು. ಮಜೀದ್, ಟೈಲ್ಸ್ ಜೋಡಣೆ ಕೆಲಸ ಮಾಡುತ್ತಿದ್ದ. ಮೋನಿಶಾ ಮನೆಯಲ್ಲಿರುತ್ತಿದ್ದರು' ಎಂದು ವರ್ತೂರು ಪೊಲೀಸರು ಹೇಳಿದರು.

'ಎರಡು ದಿನಗಳಿಂದ ಮನೆಗೆ ಹೊರಗಿನಿಂದ ಬೀಗ ಹಾಕಲಾಗಿತ್ತು. ಮಂಗಳವಾರ ಬೆಳಿಗ್ಗೆ ಮನೆಯಿಂದ ದುರ್ವಾಸನೆ ಬರುತ್ತಿತ್ತು. ಅನುಮಾನಗೊಂಡಿದ್ದ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ, ಮನೆಯ ಕೊಠಡಿಯಲ್ಲಿ ಮೃತದೇಹ ಪತ್ತೆಯಾಯಿತು' ಎಂದು ತಿಳಿಸಿದರು.

'ದಂಪತಿ ನಡುವೆ ಹಲವು ದಿನಗಳಿಂದ ಜಗಳವಿತ್ತು. ಇಬ್ಬರೂ ಪರಸ್ಪರ ಒಪ್ಪಿ 15 ದಿನಗಳ ಹಿಂದೆಯಷ್ಟೇ ತಲಾಕ್ ಪಡೆ ದಿದ್ದರು. ಇದಾದ ನಂತರವೂ ದಂಪತಿ ಒಟ್ಟಿಗೆ ಮನೆಯಲ್ಲಿ ಉಳಿದುಕೊಂಡಿದ್ದರು' ಎಂದು ತಿಳಿಸಿದರು.

ಬೀಗ ಹಾಕಿಕೊಂಡು ಪರಾರಿ: 'ಕುತ್ತಿಗೆ ಬಿಗಿದು ಮೋನಿಶಾ ಅವರನ್ನು ಕೊಲೆ ಮಾಡಿರುವ ಅನುಮಾನವಿದೆ. ಕೃತ್ಯದ ನಂತರ ಪತಿ ಶೇಖ್ ಮಜೀದ್, ಮನೆಗೆ ಬೀಗ ಹಾಕಿಕೊಂಡು ಹೋಗಿದ್ದಾನೆ. ಆತನ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ಪೊಲೀಸರು ಹೇಳಿದರು.



ಕರ್ನಾಟಕ ಮಹಿಳಾ ಯಕ್ಷಗಾನ ತಂಡದವರು ಮಾಯಾ ಮಾದಕ ಯಕ್ಷಗಾನ ಪ್ರದರ್ಶನ ನೀಡಿದರು

ಕೆ.ಆರ್. ಪುರದಲ್ಲಿ ಯಕ್ಷಗಾನ ಪ್ರದರ್ಶನ

ಕೆ.ಆರ್.ಪುರ: ಯುವಜನರು ತಮ್ಮ ಆರೋಗ್ಯ ಹಾಗೂ ಬದುಕು ನಾಶಗೊಳಿಸುವ ಮದ್ಯ, ಮಾದಕ ವಸ್ತುಗಳಿಂದ ಆರಂಭದಿಂದಲೇ ದೂರವಿರಬೇಕು ಎಂದು ರಾಜ್ಯ ಮದ್ಯಪಾನ ಸಂಯಮ ಮಂಡಳಿ ಕಾರ್ಯದರ್ಶಿ ಎಸ್. ಶಂಕರಪ್ಪ ಹೇಳಿದರು.

ಕೆ.ಆರ್.ಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಯಕ್ಷಗಾನ ಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

'ಮಹಿಳೆಯರೂ ಇಂಥ ವ್ಯಸನಕ್ಕೆ ಒಳಗಾಗಿರುವುದು ಕಳವಳಕಾರಿ. ವಿದ್ಯಾರ್ಥಿ ಜೀವನದಲ್ಲಿ ಎಚ್ಚರ ಇರಬೇಕು. ಸಾಮಾಜಿಕ ಮಾಧ್ಯಮಗಳಲ್ಲಿ ಬರುವ ಒಳ್ಳೆಯ ವಿಷಯಗಳನ್ನಷ್ಟೇ ಸ್ವೀಕರಿಸಿ' ಎಂದರು.

ಪ್ರಾಂಶುಪಾಲರಾದ ಪ್ರೊ. ಪ್ರತಿಭಾ ಪಾರ್ಶ್ವನಾಥ ಮಾತನಾಡಿದರು. ಮಾಮ್ ಅಧ್ಯಕ್ಷ ನವೀನ್ ಅಮ್ಮೆಂಬಳ, ಕಾಲೇಜಿನ ಸಾಂಸ್ಕೃತಿಕ ಸಮಿತಿಯ ಸಂಯೋಜಕ ಪ್ರೊ. ಎಂ.ನಾಗರಾಜ್, ಮಾಮ್ ಗೌರವಾಧ್ಯಕ್ಷ ವೇಣು ಶರ್ಮ, ಸಹ ಪ್ರಾಧ್ಯಾಪಕ ವಿಜಯ ಕುಮಾರ್, ಶರತ್ ಹೆಗ್ಡೆ ಇದ್ದರು.

ಪಾದಚಾರಿ ಸಾವು: ಕಾರು ಚಾಲಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿ ರಸ್ತೆಯ ಎಚ್.ಕ್ಯೂ.ಟಿ.ಸಿ ಬಸ್ ತಂಗುದಾಣದ ಎದುರು ಅಪಘಾತವನ್ನುಂಟು ಮಾಡಿ ಪಾದಚಾರಿ ವೆಂಕಟೇಶ್ (35) ಸಾವಿಗೆ ಕಾರಣವಾದ ಆರೋಪದಡಿ ಕಾರು ಚಾಲಕ ಸಿ. ರವಿ ಎಂಬುವವರನ್ನು ಸದಾಶಿವನಗರ ಸಂಚಾರ ಪೊಲೀಸರು ಬಂಧಿಸಿದ್ದಾರೆ.

'ವೆಂಕಟೇಶ್ ಅವರು ಜ. 26ರಂದು ರಾತ್ರಿ ರಸ್ತೆ ದಾಟುತ್ತಿದ್ದಾಗ ಕಾರು ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡಿದ್ದ ಅವರು, ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗಮಧ್ಯೆ ಮೃತಪಟ್ಟಿದ್ದರು. ಅಪಘಾತದ ನಂತರ ಚಾಲಕ ಪರಾರಿಯಾಗಿದ್ದ' ಎಂದು ಪೊಲೀಸರು ಹೇಳಿದರು.

'ದೇವನಹಳ್ಳಿ ತಾಲ್ಲೂಕಿನ ಸಾದಹಳ್ಳಿ ನಿವಾಸಿ ಸಿ.ರವಿ, ಮೀನುಕುಂಟೆಯ ಎಸ್.ಆರ್. ನಾಗಾರ್ಜುನ್ ಎಂಬುವವರ ಕಾರು ಚಲಾಯಿಸುತ್ತಿದ್ದ. ನೋಂದಣಿ ಸಂಖ್ಯೆ ಹಾಗೂ ಇತರೆ ಪುರಾವೆಗಳನ್ನು ಆಧರಿಸಿ ರವಿಯನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.

ದಂಪತಿ ಅಡ್ಡಗಟ್ಟಿ ಕಿರುಕುಳ: ಪೊಲೀಸರ ವಿರುದ್ಧ ದೂರು

ಬೆಂಗಳೂರು: 'ಆಸ್ಪತ್ರೆಗೆ ಹೊರಟಿದ್ದ ತಂದೆ–ತಾಯಿಯನ್ನು ಅಡ್ಡಗಟ್ಟಿದ್ದ ಜಯನಗರ ಸಂಚಾರ ಠಾಣೆ ಪೊಲೀಸರು, ಅಮಾನವೀಯವಾಗಿ ವರ್ತಿಸಿ ಕಿರುಕುಳ ನೀಡಿದ್ದಾರೆ' ಎಂದು ಆರೋಪಿಸಿ ಎನ್‌ಎಸ್‌ಯುಐ ಪ್ರಧಾನ ಕಾರ್ಯದರ್ಶಿ ರಾಕೇಶ್ ಅವರು ಇನ್‌ಸ್ಪೆಕ್ಟರ್‌ಗೆ ದೂರು ನೀಡಿದ್ದಾರೆ.

'ದಂಡ ವಸೂಲಿ ನೆಪದಲ್ಲಿ ತಂದೆ–ತಾಯಿ ಜೊತೆ ಅಗೌರವದಿಂದ ನಡೆದುಕೊಂಡು ದೌರ್ಜನ್ಯ ಎಸಗಲಾಗಿದೆ. ತಪ್ಪಿತಸ್ಥ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಿ' ಎಂದು ರಾಕೇಶ್ ಆಗ್ರಹಿಸಿದ್ದಾರೆ.

ಕೀ ಕಿತ್ತುಕೊಂಡು ದೌರ್ಜನ್ಯ: 'ತಾಯಿ ಮಂಗಳ (47), ಮಧುಮೇಹ ಹಾಗೂ ರಕ್ತದೊತ್ತಡ ಸಮಸ್ಯೆಯಿಂದ ಬಳಲುತ್ತಿದ್ದರು. ಅವರಿಗೆ ಚಿಕಿತ್ಸೆ ಕೊಡಿಸಲೆಂದು ತಂದೆ ಮಲ್ಲೇಶ್ (50) ದ್ವಿಚಕ್ರ ವಾಹನದಲ್ಲಿ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದರು. ಸಂಗಂ ವೃತ್ತದ ಬಳಿ ವಾಹನ ಅಡ್ಡಗಟ್ಟಿದ್ದ ಪೊಲೀಸರು, ಕೀ ಕಿತ್ತುಕೊಂಡಿದ್ದರು. ₹ 5,000 ಬಾಕಿ ದಂಡ ಪಾವತಿಸುವಂತೆ ಒತ್ತಾಯಿಸಿದ್ದರು' ಎಂದು ರಾಕೇಶ್ ಹೇಳಿದ್ದಾರೆ.

'ಆಸ್ಪತ್ರೆಗೆ ಹೊರಟಿರುವುದಾಗಿ ಹೇಳಿದ್ದ ತಂದೆ, ₹ 2 ಸಾವಿರ ಮಾತ್ರ ಇರುವುದಾಗಿ ತಿಳಿಸಿದ್ದರು. ಮತ್ತಷ್ಟು ಕೋಪಗೊಂಡಿದ್ದ ಪೊಲೀಸರು, ದಂಡ ಕಟ್ಟಬೇಕೆಂದು ರಶೀದಿ ನೀಡಿದ್ದರು. ವಾಹನ ಹಾಗೂ ತಾಯಿಯನ್ನು ಸ್ಥಳದಲ್ಲೇ ಬಿಟ್ಟು ಹಣ ತರಲೆಂದು 2 ಕಿ.ಮೀ. ದೂರದಲ್ಲಿರುವ ಮನೆಗೆ ತಂದೆ ನಡೆದುಕೊಂಡು ಹೋಗಿದ್ದರು. ಗಂಟೆ ಕಾಲ ತಾಯಿ ರಸ್ತೆಯಲ್ಲೇ ಕುಳಿತು, ನಿದ್ರಾಹೀನ ಸ್ಥಿತಿಗೆ ತಲುಪಿದ್ದರು' ಎಂದಿದ್ದಾರೆ.

'ವಿಷಯ ಗೊತ್ತಾಗಿ ಪೊಲೀಸರ ಜೊತೆ ಮಾತನಾಡಿದ್ದೆ. ಶಾಸಕಿ ಸೌಮ್ಯ ರೆಡ್ಡಿ ಕಚೇರಿಯಲ್ಲಿ ಕೆಲಸ ಮಾಡುತ್ತೇನೆ. ತಂದೆ–ತಾಯಿ ಆಸ್ಪತ್ರೆಗೆ ಹೊರಟಿದ್ದಾರೆ. ದಯವಿಟ್ಟು ಬಿಟ್ಟುಬಿಡಿ ಎಂದು ಕೋರಿದ್ದೆ. ಅದಕ್ಕೂ ಅವರು ಸ್ಪಂದಿಸಲಿಲ್ಲ' ಎಂದು ರಾಕೇಶ್ ಹೇಳಿದ್ದಾರೆ.

ಕ್ಯಾಮೆರಾದಲ್ಲಿ ಸೆರೆ: 'ಪೊಲೀಸರು ಕರ್ತವ್ಯ ನಿರ್ವಹಿಸಿದ್ದಾರೆ. ದಂಡ ಸಂಗ್ರಹ ಪ್ರಕ್ರಿಯೆ ದೃಶ್ಯ ಪೊಲೀಸರ ಬಾಡಿವೋರ್ನ್ ಕ್ಯಾಮೆರಾದಲ್ಲಿ ಸೆರೆಯಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ದಂಪತಿ ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು. ಅವರನ್ನು ತಡೆದಿದ್ದ ಪೊಲೀಸರು, ಹಳೇ ಪ್ರಕರಣ ಪರಿಶೀಲಿಸಿದ್ದರು. ದಂಡ ಬಾಕಿ ಇರುವುದು ಗೊತ್ತಾಗಿ, ಪಾವತಿಸುವಂತೆ ತಿಳಿಸಿದ್ದರು' ಎಂದು ತಿಳಿಸಿದರು.

ಮೈಸೂರು ರೇಸ್

ಗೋಲ್ಡನ್ ಗೆಸ್ಟ್ ಗೆಲ್ಲುವ ನಿರೀಕ್ಷೆ

ಮೈಸೂರು ರೇಸ್ ಕೋರ್ಸ್ ಬುಕ್‌ಮೇಕರ್ಸ್ ಅಸೋಸಿಯೇಷನ್ ಮಿಲಿಯನ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಗೋಲ್ಡನ್ ಗೆಸ್ಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಬೊನಿಟೊ 1, ಮೈ ಒನ್ ಅಂಡ್ ಒನ್ಲಿ 5, ದಿ ಥರ್ಟೀನ್ ಟ್ವೆಲ್ವ್ 4
2ನೇ ರೇಸ್: ಶೂಟಿಂಗ್ ವೀನಸ್ 1, ಉದುಕಾಯ್ 2, ವೈಟ್ ಲೈಸ್ 3
3ನೇ ರೇಸ್: ಓ ಮಂಚಲಿ 8, ಎಲಿವಾಡೊ 6, ಬ್ಯೂಟಿಫುಲ್ ಓಬ್ಲಿವಿಯನ್ 2
4ನೇ ರೇಸ್: ಆಕರ್ 3, ಸ್ಟಾರ್ ಜ್ಯೂಯಲ್ 4, ಎನ್.ಆರ್.ಐ ಮಿಲೆನಿಯಮ್ 5
5ನೇ ರೇಸ್: ಗೋಲ್ಡನ್ ಗೆಸ್ಟ್ 4, ಕೂಲ್ ರೈಡರ್ 1, ಓ ಹನ್ಸಿನಿ 7
6ನೇ ರೇಸ್: ಪವರ್ ಆಫ್ ಕಾಂತರ 8, ಪ್ರಿನ್ಸ್ ಕಾರ್ಪೊರೇಟ್ 1, ಕವರೊಜ್ಜಿ 2
7ನೇ ರೇಸ್: ಫನ್ ಅಂಡ್ ಲಾಫ್ಟರ್ 1, ಗುಡ್ ಅರ್ಥ್ 6, ಸರ್ ಕ್ಯಾಲ್‌ಕ್ಯುಲಸ್ 7

ಉತ್ತಮ ಬೆಟ್: ಓ ಮಂಚಲಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7

ಬೆಂಕಿ ಅವಘಡ: ಮಹಿಳೆ ಸಾವು

ಬೆಂಗಳೂರು: ಮಂತ್ರಿ ಸ್ಕ್ವೇರ್ ಮಾಲ್ ಹಿಂಭಾಗದ ಪ್ರದೇಶದಲ್ಲಿರುವ ಮನೆಯೊಂದರ ಕೊಠಡಿಯಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಬೆಂಕಿ ತಗುಲಿ ತೀವ್ರ ಗಾಯಗೊಂಡು ಮೇರಿ (55) ಎಂಬುವರು ಮೃತಪಟ್ಟಿದ್ದಾರೆ.

'ಮನೆಯ ಮೊದಲ ಮಹಡಿಯಲ್ಲಿರುವ 10x5 ಚದರ ಅಡಿಯ ಕೊಠಡಿಯಲ್ಲಿ ಅಡುಗೆ ಮಾಡುತ್ತಿದ್ದ ವೇಳೆ ಈ ಅವಘಡ ಸಂಭವಿಸಿದೆ. ಮೇರಿ ಅವರು ಮಂಗಳವಾರ ಮಧ್ಯಾಹ್ನ ಅಡುಗೆ ಮಾಡಲೆಂದು ಕೊಠಡಿಯಲ್ಲಿದ್ದ ಗ್ಯಾಸ್ ಸ್ಟೌ ಹಚ್ಚಿದ್ದರು. ಇದೇ ವೇಳೆಯೇ ಬೆಂಕಿ ಕೆನ್ನಾಲಗೆ ಹೆಚ್ಚಾಗಿ ಇಡೀ ಕೊಠಡಿ ಆವರಿಸಿತ್ತು. ಕೊಠಡಿಯಲ್ಲಿದ್ದ ವಸ್ತುಗಳಿಗೂ ಬೆಂಕಿ ತಗುಲಿತ್ತು. ಮೇರಿ ಅವರ ದೇಹಕ್ಕೂ ಬೆಂಕಿ ಹೊತ್ತಿಕೊಂಡಿತ್ತು' ಎಂದು ಮಲ್ಲೇಶ್ವರ ಠಾಣೆ ಪೊಲೀಸರು ಹೇಳಿದರು.

'ಸಹಾಯಕ್ಕಾಗಿ ಮೇರಿ ಚೀರಾಡಿದ್ದರು. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಬಂದು, ಮೇರಿ ಅವರನ್ನು ರಕ್ಷಿಸಿ ಆಂಬುಲೆನ್ಸ್‌ನಲ್ಲಿ ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಿದ್ದರು. ಆಸ್ಪತ್ರೆಯಲ್ಲಿ ಅವರು ಅಸುನೀಗಿದ್ದಾರೆ' ಎಂದು ತಿಳಿಸಿದರು.

'ಹೋಟೆಲ್‌ನಲ್ಲಿ ಬಳಸುವ ದೊಡ್ಡ ಸ್ಟೌ ಕೊಠಡಿಯಲ್ಲಿತ್ತು. ಸ್ಟೌನಿಂದ ಸೀರೆಗೆ ಬೆಂಕಿ ಹೊತ್ತಿಕೊಂಡು ಅವಘಡ ಸಂಭವಿಸಿರುವ ಅನುಮಾನವಿದ್ದು, ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಸಾಫ್ಟ್‌ವೇರ್ ಕಂಪನಿಯಲ್ಲಿ ಬೆಂಕಿ: 'ಯಲಹಂಕ ಬಳಿಯ ಸಾಫ್ಟ್‌ವೇರ್ ಕಂಪನಿಯೊಂದರ ಕಚೇರಿಯಲ್ಲಿ ಬೆಂಕಿ ಅವಘಡ ಸಂಭವಿಸಿದೆ. ಕಂಪ್ಯೂಟರ್ ಹಾಗೂ ಪೀಠೋಪಕರಣಗಳು ಸುಟ್ಟಿವೆ' ಎಂದು ಪೊಲೀಸರು ತಿಳಿಸಿದರು.



ಸಂಸದ ಡಿ.ವಿ. ಸದಾನಂದಗೌಡ, ಅಬಕಾರಿ ಸಚಿವ ಕೆ. ಗೋಪಾಲಯ್ಯ ಸಮ್ಮುಖದಲ್ಲಿ ಸೋಮಶೆಟ್ಟಿಹಳ್ಳಿ ಹಾಗೂ ಚಿಕ್ಕಬಾಣವಾರದ ಕಾರ್ಯಕರ್ತರು ಬಿಜೆಪಿ ಸೇರಿದರು

ಕಾಂಗ್ರೆಸ್‌ನಲ್ಲಿ ಕುರ್ಚಿಗೆ ಕಿತ್ತಾಟ: ಡಿವಿಎಸ್

ಪೀಣ್ಯ ದಾಸರಹಳ್ಳಿ: ಕಾಂಗ್ರೆಸ್‌ನಲ್ಲಿ ಕುರ್ಚಿಗಾಗಿ ಕಿತ್ತಾಟ ನಡೆಯುತ್ತಿದೆಯೇ ಹೊರತು ರಾಜ್ಯದ ಅಭಿವೃದ್ಧಿ ವಿಚಾರಕ್ಕೆ ಅಲ್ಲ. ಜೆಡಿಎಸ್‌ನಲ್ಲಿ ಪರಿಸ್ಥಿತಿ ಇನ್ನೂ ಹದಗೆಟ್ಟಿದೆ. ಮನೆಯಲ್ಲೇ ಜಗಳ ಇದೆ ಎಂದು ಸಂಸದ ಡಿ.ವಿ.ಸದಾನಂದ ಗೌಡ ಹೇಳಿದರು.

ಚಿಕ್ಕಬಾಣಾವರದಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಅವರು ಮಾತನಾಡಿದರು.

ಸಚಿವ ಕೆ.ಗೋಪಾಲಯ್ಯ, 'ಈ ಬಾರಿ ರಾಜ್ಯದಲ್ಲಿ 140ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಮೂಲಕ ಮತ್ತೆ ರಾಜ್ಯದ ಚುಕ್ಕಾಣಿ ಹಿಡಿಯಲಿದ್ದೇವೆ' ಎಂದರು.

ಮಾಜಿ ಶಾಸಕ ಎಸ್. ಮುನಿರಾಜು, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ. ಮರಿಸ್ವಾಮಿ ಇತರರಿದ್ದರು.

ಬುಧವಾರ • ಫೆಬ್ರುವರಿ 8, 2023 ಪ್ರಜಾವಾಣಿ

ಬಿಜೆಪಿಗೆ ಎಚ್‌ಡಿ. ಕುಮಾರಸ್ವಾಮಿ ಸವಾಲು • ಮರಾಠಿ ಪೇಶ್ವೆಗಳ ವಂಶವಾಹಿ ಕುರಿತ ಹೇಳಿಕೆಗೆ ಬದ್ಧ

‘ಜೋಶಿಯೇ ಸಿ.ಎಂ ಅಭ್ಯರ್ಥಿ ಎನ್ನಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮರಾಠಿ ಪೇಶ್ವೆಗಳ ವಂಶವಾಹಿ (ಡಿಎನ್‌ಎ) ಕುರಿತು ನಾನು ನೀಡಿದ್ದ ಹೇಳಿಕೆ ವಾಪಸ್ ಪಡೆಯುವ ಪ್ರಶ್ನೆಯೇ ಇಲ್ಲ. ಕ್ಷಮೆಯನ್ನೂ ಕೇಳುವುದಿಲ್ಲ. ಬಿಜೆಪಿಗೆ ತಾಕತ್ತಿದ್ದರೆ ಪ್ರಲ್ಹಾದ ಜೋಶಿಯೇ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಿ, ಚುನಾವಣೆ ಎದುರಿಸಲಿ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಸವಾಲು ಹಾಕಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ಬಿಜೆಪಿಯಿಂದ ಯಾರು ಮುಖ್ಯಮಂತ್ರಿ ಆಗಬೇಕು ಎಂದು ನಾನು ಹೇಳಿಲ್ಲ. ಬ್ರಾಹ್ಮಣರು ಸೇರಿದಂತೆ ಯಾರನ್ನೂ ಅವಮಾನ ಮಾಡಿಲ್ಲ. ಶಿವಾಜಿ ಮಹಾರಾಜ, ಮಹಾತ್ಮ ಗಾಂಧಿಯನ್ನು ಕೊಂದ ವಂಶದ ಡಿಎನ್‌ಎ ಇರುವವರನ್ನು ಮುಖ್ಯಮಂತ್ರಿ ಮಾಡಲು ನಡೆಯುತ್ತಿರುವ ಪ್ರಯತ್ನದ ಬಗ್ಗೆ ನಾನು ಮಾತನಾಡಿದ್ದೇನೆ’ ಎಂದರು.

‘ಮರಾಠಿ ಪೇಶ್ವೆಗಳ ಮೂಲದ ವ್ಯಕ್ತಿಯನ್ನು ರಾಜ್ಯದ ಮೇಲೆ ಹೇರಲು ಬಿಜೆಪಿ ಹೊರಟಿದೆ. ಮೂರು ವರ್ಷಗಳಿಂದ ತೆರೆಮರೆಯಲ್ಲಿ ಅಂತಹ ಪ್ರಯತ್ನ ನಡೆದಿದೆ. ಚುನಾವಣೆ ಬಳಿಕ ಅದನ್ನು ನೇರವಾಗಿ ಅನುಷ್ಠಾನಕ್ಕೆ ತರುವ ಯೋಜನೆ ಇದೆ. ಆ ವ್ಯಕ್ತಿಯ ಬಗ್ಗೆ ತಕರಾರು ಇಲ್ಲ. ಅವರ ಮೂಲದ ಬಗ್ಗೆ ತಕರಾರು ಇರುವುದು’ ಎಂದು ಹೇಳಿದರು.

‘ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಸಾವರ್ಕರ್ ಭಾವಚಿತ್ರ ಹಾಕಲಾಗಿದೆ. ರಾಜ್ಯದಲ್ಲಿ ಗೋಡ್ಸೆಗೆ ಗುಡಿ ಕಟ್ಟುವ ಪ್ರಯತ್ನಗಳೂ ನಡೆದಿವೆ. ಕರ್ನಾಟಕಕ್ಕೂ ಸಾವರ್ಕರ್‌ಗೂ ಏನು ಸಂಬಂಧವಿದೆ? ಈ ರಾಜ್ಯಕ್ಕೂ ಗೋಡ್ಸೆಗೂ ಏನು ಸಂಬಂಧವಿದೆ’ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ಪ್ರಜಾ ಮತ — ಜನತಂತ್ರದ ಹಬ್ಬ — ಕರ್ನಾಟಕ ವಿಧಾನಸಭಾ ಚುನಾವಣೆ - 2023

‘ಜನರ ಆಸ್ತಿ ತಿನ್ನಲು ಕುಳಿತಿದ್ದಾರೆ’

‘ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರು ನಮ್ಮ ಕುಟುಂಬದ ಬಗ್ಗೆ ಆರೋಪ ಮಾಡಿದ್ದಾರೆ. ಇಲ್ಲಿ ನೋಡಿ ಅವರು ಏನು ಮಾಡುತ್ತಿದ್ದಾರೆ. ಸಾರ್ವಜನಿಕ ಆಸ್ತಿಯಾದ ಬಿಎಂಎಸ್ ಶಿಕ್ಷಣ ಟ್ರಸ್ಟ್ ಅನ್ನು ಖಾಸಗಿ ವ್ಯಕ್ತಿಯ ಕೈಗೆ ನೀಡಿ ಅವರ ಜತೆ ತಿನ್ನಲು ಕುಳಿತಿದ್ದಾರೆ’ ಎಂದು ಅಶ್ವತ್ಥ ನಾರಾಯಣ ಮತ್ತು ಉದ್ಯಮಿ ದಯಾನಂದ ಪೈ ಜತೆಯಾಗಿ ಊಟ ಮಾಡುತ್ತಿರುವ ಫೋಟೊವನ್ನು ಕುಮಾರಸ್ವಾಮಿ ಪ್ರದರ್ಶಿಸಿದರು.

ಶಿಕ್ಷಕ ಸತ್ತಿದ್ದೇಕೆ: ಸಿ.ಟಿ ರವಿಗೆ ಪ್ರಶ್ನೆ

‘ಬಿಜೆಪಿ ಶಾಸಕ ಸಿ.ಟಿ. ರವಿ ಕೂಡ ನನ್ನ ಬಗ್ಗೆ ಲಘುವಾಗಿ ಮಾತನಾಡಿದ್ದಾರೆ. ಅಮಾಯಕ ಕುಟುಂಬದ ಶಿಕ್ಷಕರೊಬ್ಬರು ಕೆ.ಆರ್.ಎಸ್. ಜಲಾಶಯಕ್ಕೆ ಹಾರಿ ಆತ್ಮಹತ್ಯೆ ಮಾಡಿಕೊಂಡರು. ಅವರು ಏಕೆ ಸತ್ತರು? ಅದಕ್ಕೂ ಸಿ.ಟಿ. ರವಿಗೂ ಏನು ಸಂಬಂಧ? ಈ ಬಗ್ಗೆ ಅವರು ಉತ್ತರಿಸಲಿ. ಇವರೆಲ್ಲ ಸಾಚಾಗಳಾ’ ಎಂದು ಪ್ರಶ್ನಿಸಿದರು.

ಎಚ್‌ಡಿಕೆ ತಂತ್ರ ಕೆಲಸ ಮಾಡಲ್ಲ: ಅಶ್ವತ್ಥನಾರಾಯಣ

ಬೆಂಗಳೂರು: ‘ಜಾತಿ, ಧರ್ಮ, ಸಮುದಾಯಗಳ ಮಧ್ಯೆ ಸಂಶಯದ ಬೀಜ ಬಿತ್ತಿ ಚುನಾವಣೆಯಲ್ಲಿ ಬಿಜೆಪಿಗೆ ಹಾನಿ ಮಾಡಬಹುದು ಎಂಬ ಲೆಕ್ಕಾಚಾರ ಎಚ್. ಡಿ. ಕುಮಾರಸ್ವಾಮಿ ಅವರಿಗಿದ್ದರೆ, ಆ ತಂತ್ರ ಕೆಲಸ ಮಾಡುವುದಿಲ್ಲ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್. ಅಶ್ವತ್ಥನಾರಾಯಣ ಹೇಳಿದರು.

‘ಬಿಜೆಪಿಯು ಜೆಡಿಎಸ್‌ನಂತೆ ಜಾತಿ ಆಧಾರಿತ ಪಕ್ಷವಲ್ಲ. ಜಾತಿ ಮೀರಿದ ಪಕ್ಷವಾಗಿದೆ. ಬ್ರಾಹ್ಮಣ ಸಮುದಾಯದ ಬಗ್ಗೆ ಕುಮಾರಸ್ವಾಮಿ ಆಡಿರುವ ಮಾತುಗಳು ಖಂಡನೀಯ, ಜನತೆಯ ಕ್ಷಮೆ ಕೇಳಬೇಕು’ ಎಂದು ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

‘ಜಾತಿ- ಸಮುದಾಯಗಳ ಬಗ್ಗೆ ಈವರೆಗೆ ಇಷ್ಟೊಂದು ಕೀಳಾಗಿ ಯಾರೂ ಮಾತನಾಡಿಲ್ಲ. ಇವರ ಕೀಳುಮಟ್ಟದ ಹೇಳಿಕೆಯಿಂದ ಬಿಜೆಪಿಯಲ್ಲಿ ತಲ್ಲಣವಾಗಿದೆ ಎಂಬ ಗ್ರಹಿಕೆಯೇ ತಪ್ಪು. ತಲ್ಲಣ ಆಗಿರುವುದು ಜೆಡಿಎಸ್ ಪಕ್ಷದಲ್ಲಿ’ ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

‘ಪ್ರಲ್ಹಾದ ಜೋಶಿ ಅವರ ನೆಪದಲ್ಲಿ ಬ್ರಾಹ್ಮಣ ಸಮುದಾಯವನ್ನು ಕುಮಾರಸ್ವಾಮಿ ದೂಷಣೆ ಮಾಡಿದ್ದಾರೆ. ಬ್ರಾಹ್ಮಣರನ್ನು ಮುಖ್ಯಮಂತ್ರಿ ಮಾಡುತ್ತಾರೆ ಎಂದು ಹೇಳಿದರೆ, ವೀರಶೈವ-ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯವನ್ನು ಬಿಜೆಪಿಯಿಂದ ದೂರ ಮಾಡಬಹುದು ಎಂಬುದು ಅವರ ಲೆಕ್ಕಾಚಾರ ಆಗಿರಬಹುದು. ಆದರೆ, ಆ ‘ಟ್ರಿಕ್ಸ್’ ನಡೆಯುವುದಿಲ್ಲ. ಕುಮಾರಸ್ವಾಮಿ ಬಗ್ಗೆ ಜನರಿಗೆ ಚೆನ್ನಾಗಿ ಗೊತ್ತು’ ಎಂದರು.

‘ಮುಖ್ಯಮಂತ್ರಿ ಆಗಲು ಪ್ರಲ್ಹಾದ ಜೋಶಿ ಅವರಿಗೆ ಅರ್ಹತೆ ಇದೆ. ನಮ್ಮ ಪಕ್ಷದಲ್ಲಿರುವ ಪ್ರತಿಯೊಬ್ಬ ಕನ್ನಡಿಗನಿಗೂ ಮುಖ್ಯಮಂತ್ರಿ ಆಗುವ ಅರ್ಹತೆ ಇದೆ. ಆದರೆ, ಜೆಡಿಎಸ್ ಪಕ್ಷದಲ್ಲಿ ಕುಮಾರಸ್ವಾಮಿ ಬಿಟ್ಟರೆ ಬೇರೆ ಯಾರಿಗೆ ಅರ್ಹತೆ ಮತ್ತು ಅವಕಾಶ ಇದೆ ಎಂಬುದನ್ನು ಹೇಳಲಿ ನೋಡೋಣ’ ಎಂದು ಪ್ರಶ್ನಿಸಿದರು.

‘ಡಿ.ಕೆ.ಶಿವಕುಮಾರ್ ಮತ್ತು ಅವರ ಸಹೋದರರು ಸಿ.ಡಿ ಎಕ್ಸ್‌ಪರ್ಟ್‌ಗಳು. ಸಿ.ಡಿ ಬಗ್ಗೆ ಸಿಬಿಐ ತನಿಖೆ ಆಗಬೇಕು ಎಂದಾಗ ಗಡ ಗಡ ನಡುಗಿದರು. ಅವರ ಸಹೋದರನ ಮಟ್ಟಕ್ಕೆ ಇಳಿದು ಮಾತನಾಡುವುದಿಲ್ಲ’ ಎಂದರು.

ಸುದ್ದಿ 2 ನಿಮಿಷ

‘ಅರ್ಹರಿದ್ದರೆ ಬ್ರಾಹ್ಮಣರು ಸಿ.ಎಂ ಆಗಲು ಅಡ್ಡಿಯಿಲ್ಲ’

ಬಾಗಲಕೋಟೆ: ‘ಬ್ರಾಹ್ಮಣರು ಅರ್ಹರಾಗಿದ್ದು, ಸಮಾಜಮುಖಿಗಳಾಗಿದ್ದರೆ ಮುಖ್ಯಮಂತ್ರಿಯಾಗಲು ಯಾವುದೇ ಅಡ್ಡಿಯಿಲ್ಲ’ ಎಂದು ಮಂತ್ರಾಲಯದ ಸುಬುಧೇಂದ್ರತೀರ್ಥ ಸ್ವಾಮೀಜಿ ಮಂಗಳವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಜೆಡಿಎಸ್ ನಾಯಕ ಎಚ್‌.ಡಿ.ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿ, ‘ಬ್ರಾಹ್ಮಣರು ಬೇರೆ ಸಮಾಜದ ವಿರೋಧಿಯಲ್ಲ. ಎಲ್ಲರ ಕ್ಷೇಮ ಕೋರುವ ಸಮಾಜ’ ಎಂದು ಹೇಳಿದರು.



‘ಬ್ರಾಹ್ಮಣ ಸಮುದಾಯವನ್ನು ಯಾರೇ ನಿಂದಿಸಿದರೂ ಖಂಡಿಸುತ್ತೇವೆ. ಯಾರೂ, ಯಾವ ಸಮುದಾಯವನ್ನೂ ತೆಗಳಬಾರದು. ಒಂದು ಸಮುದಾಯದವರು ಯಾವುದೇ ಮುಖ್ಯ ಪದವಿ ಅಲಂಕರಿಸಬಾರದು ಎಂಬ ಹೇಳಿಕೆ ಸಂವಿಧಾನ ವಿರೋಧಿ. ಅದು ಪ್ರಜಾಪ್ರಭುತ್ವ ಆಗಲ್ಲ;ನಿರಂಕುಶ ಪ್ರಭುತ್ವ’ ಎಂದರು.

‘ಹಿಂದುತ್ವ ವಿರೋಧಿಸುವುದು ಅರ್ಥಹೀನ. ಸಿದ್ದರಾಮಯ್ಯ ಅವರು ತಾವು ಹಿಂದೂ ಎನ್ನುತ್ತಾರೆ. ಆದರೆ, ಹಿಂದುತ್ವ ಒಪ್ಪುವುದಿಲ್ಲ. ತಾಯಿ ಅನ್ನೋದು, ನಂತರ ಟೀಕಿಸುವುದು ಅಪಹಾಸ್ಯ’ ಎಂದು ಹೇಳಿದರು.

ಬ್ರಾಹ್ಮಣ ಸಂಘಟನೆಗಳ ಖಂಡನೆ

ಬೆಂಗಳೂರು: ಜೆಡಿಎಸ್ ನಾಯಕ ಎಚ್‌.ಡಿ.ಕುಮಾರಸ್ವಾಮಿ ಬ್ರಾಹ್ಮಣರ ಬಗ್ಗೆ ಉಲ್ಲೇಖಿಸಿ, ಗಾಂಧೀಜಿ ಕೊಂದವರು ಮುಖ್ಯಮಂತ್ರಿ ಆಗಬಾರದು ಎಂದು ಹೇಳಿರುವುದನ್ನು ಅಖಿಲ ಭಾರತೀಯ ಬ್ರಾಹ್ಮಣ ಮಹಾ ಸಂಘ ಖಂಡಿಸಿದೆ.

‘ಅವರು ಬ್ರಾಹ್ಮಣ ಸಮುದಾಯವನ್ನು ಒಡೆಯಲು ಸಂಚು ನಡೆಸಿದ್ದಾರೆ. ನಮ್ಮ ಸಮುದಾಯದಲ್ಲಿ ಶುದ್ಧ ಮತ್ತು ಶ್ರೇಷ್ಠ ರಾಜಕೀಯ ಮುಖಂಡರಿದ್ದಾರೆ. ಆ ಎಲ್ಲರಿಗೂ ಸಿ.ಎಂ ಆಗುವ ಅರ್ಹತೆಯಿದೆ. ಅದಕ್ಕೆ ಕುಮಾರಸ್ವಾಮಿ ಅವರ ಶಿಫಾರಸು ಬೇಕಾಗಿಲ್ಲ. ಸಮುದಾಯದ ಬಗ್ಗೆ ಕೆಟ್ಟ ಅಭಿಪ್ರಾಯ ಬರುವಂತೆ ಮಾತನಾಡಿರುವುದಕ್ಕೆ ಕೂಡಲೇ ಕ್ಷಮೆ ಕೇಳಬೇಕು’ ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಜಿ.ಆರ್. ಪ್ರದೀಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಂದನೆ ಖಂಡನೀಯ: ಪೇಶ್ವೆ ಬ್ರಾಹ್ಮಣರ ಇತಿಹಾಸ ತಿಳಿಯದೇ ಎಚ್. ಡಿ.ಕುಮಾರಸ್ವಾಮಿ ಅವರು ಟೀಕೆ ಮಾಡಿರುವುದು ಖಂಡನೀಯ ಎಂದು ವಿಶ್ವ ವಿಪ್ರ ಮೈತ್ರೇಯಿ ಪರಿಷತ್ ಅಧ್ಯಕ್ಷ ರಘುನಾಥ್ ಎಸ್ ತಿಳಿಸಿದ್ದಾರೆ.

‘ಪೇಶ್ವೆ ಬ್ರಾಹ್ಮಣರಾದ ವಾಸುದೇವ ಬಲವಂತ ಫಡಕೆ, ಬಾಲಗಂಗಾಧರ ತಿಲಕ, ವೀರ ಸಾವರ್ಕರ್, ಗೋಪಾಲಕೃಷ್ಣ ಗೋಖಲೆ, ವಿನೋಭಾ ಭಾವೆ ಮೊದಲಾದವರು ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದರು. ಹಲವರು ಪ್ರಾಣ ತ್ಯಾಗ ಮಾಡಿದ್ದಾರೆ. ಮಹಾದೇವ ಗೋವಿಂದ ರಾನಡೆ ಅವರ ವ್ಯಕ್ತಿತ್ವದಿಂದ ಪ್ರಭಾವಿತನಾಗಿದ್ದೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ತಮ್ಮ ಪುಸ್ತಕದಲ್ಲಿ ಬರೆದಿದ್ದಾರೆ. ಸಮಾಜಕ್ಕೆ ಇವರ ಕೊಡುಗೆ ಏನು ಎಂಬುದು ಗೊತ್ತೆ’ ಎಂದು ಪ್ರಶ್ನಿಸಿದ್ದಾರೆ.

ಇವೆಲ್ಲವನ್ನು ಅರಿಯದ ಕುಮಾರಸ್ವಾಮಿ ಅವರು ಪೇಶ್ವೆ ಬ್ರಾಹ್ಮಣ ಸಮುದಾಯವನ್ನು ಗುರಿ ಮಾಡಿ ಹೇಳಿಕೆ ನೀಡಿದ್ದಾರೆ. ಕರ್ನಾಟಕ ಬ್ರಾಹ್ಮಣ, ಮಹಾರಾಷ್ಟ್ರ ಬ್ರಾಹ್ಮಣ ಎಂದು ವಿಭಜಿಸಲು ಮುಂದಾಗಿರುವುದು ಸರಿಯಲ್ಲ. ತಮ್ಮ ಹೇಳಿಕೆ ಹಿಂಪಡೆಯಬೇಕು ಎಂದು ರಘುನಾಥ್ ಒತ್ತಾಯಿಸಿದ್ದಾರೆ.

‘ಸಾವರ್ಕರ್–ಟಿಪ್ಪು ಸಿದ್ಧಾಂತದ ನಡುವೆ ಸ್ಪರ್ಧೆ’

ಭಟ್ಕಳ (ಉತ್ತರ ಕನ್ನಡ): ‘ಈ ಬಾರಿ ವಿಧಾನಸಭೆ ಚುನಾವಣೆ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಅಲ್ಲ. ಬದಲಿಗೆ, ಸಾರ್ವಕರ್ ಹಾಗೂ ಟಿಪ್ಪು ಸಿದ್ಧಾಂತಗಳ ನಡುವೆ ನಡೆಯಲಿದೆ. ದೇಶಭಕ್ತ ಸಾವರ್ಕರ್ ಬೇಕಾ ಅಥವಾ ಮತಾಂಧ ಟಿಪ್ಪು ಬೇಕಾ ಎಂದು ಜನ ತೀರ್ಮಾನಿಸುತ್ತಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ಮಂಗಳವಾರ ತಾಲ್ಲೂಕಿನ ಶಿರಾಲಿಯಲ್ಲಿ ನಡೆದ ವಿಧಾನಸಭಾ ಕ್ಷೇತ್ರದ ಪೇಜ್ ಪ್ರಮುಖರ ಸಮಾವೇಶದಲ್ಲಿ ಅವರು, ‘ಸಿದ್ದರಾಮಯ್ಯ ಅವರು ಟಿಪ್ಪು ಜಯಂತಿ ಹೆಸರಿನಲ್ಲಿ ಹಿಂದೂ, ಮುಸ್ಲಿಮರನ್ನು ಒಡೆದರು’ ಎಂದು ಹೇಳಿದರು.

‘ಇನ್ನೊಂದಡೆ, ಎಚ್‌.ಡಿ. ಕುಮಾರಸ್ವಾಮಿ ಈಗ ಅವಹೇಳನಕಾರಿ ಹೇಳಿಕೆ ನೀಡಿ ಬ್ರಾಹ್ಮಣ ಸಮಾಜ ಒಡೆಯುವ ಕೆಲಸ ಮಾಡಿದ್ದಾರೆ. ಈ ಪಾರ್ಟಿಯವರು ಅಂದು ರಾಮಕೃಷ್ಣ ಹೆಗಡೆಯವರಿಗೆ ಕಲ್ಲು ಹೊಡೆದಿದ್ದರು’ ಎಂದು ಟೀಕಿಸಿದರು.

‘ಎಚ್‌ಡಿಕೆ ಅವರಿಗೆ ಮೂರು ಜಿಲ್ಲೆಯಲ್ಲಷ್ಟೆ ಪ್ರಭಾವವಿದೆ. ಮತ್ತೆ ಸಿ.ಎಂ ಆಗುವ ಕನಸು ಹೊತ್ತು ತಿರುಗಾಡುತ್ತಿದ್ದಾರೆ. ಅಧಿಕಾರಕ್ಕೆ ಏರಲಾಗದು ಎಂಬುದು ಅರಿವಾಗುತ್ತಿದ್ದಂತೇ ಜಾತಿ ಹೇಳಿಕೆ ನೀಡುತ್ತಿದ್ದಾರೆ’ ಎಂದು ಆರೋಪಿಸಿದರು.

‘ಕಾಂಗ್ರೆಸ್ ಪಕ್ಷವೇ ಉಗ್ರ ಸಂಘಟನೆ’

ಕಾರವಾರ: ಕಾಂಗ್ರೆಸ್ ಪಕ್ಷವೇ ಭಯೋತ್ಪಾದಕ ಸಂಘಟನೆ. ಅವರ ತುಷ್ಟೀಕರಣ ನೀತಿಯಿಂದಲೇ ಮತೀಯ ಗಲಭೆಗಳು ನಡೆದಿವೆ ಎಂದು ನಳಿನ್ ಕುಮಾರ್ ಕಟೀಲ್ ಆರೋಪಿಸಿದರು.

‘ಬಿಜೆಪಿ ಅವಧಿಯಲ್ಲಿ ಹಿಂದೂಗಳ ಅತಿ ಹೆಚ್ಚು ಹತ್ಯೆ ಆಗಿದೆ’ ಎಂಬ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದರು. ‘ಕಾಂಗ್ರೆಸ್ ಆಡಳಿತ ಮತೀಯ ಗಲಭೆಗೆ ಪ್ರೇರಣೆ ನೀಡಿತ್ತು. ಪಿಎಫ್‌ಐ ಕಾರ್ಯಕರ್ತರನ್ನು ಜೈಲಿನಿಂದ ಸಿದ್ದರಾಮಯ್ಯ ಬಿಡುಗಡೆ ಮಾಡಿಸಿದ್ದರು. ಅವರ ಆಡಳಿತದಲ್ಲಿ 25 ಮಂದಿ ಹಿಂದೂಗಳ ಹತ್ಯೆಯಾಗಿತ್ತು’ ಎಂದರು.

ನಾನೂ ಆಕಾಂಕ್ಷಿ: ಆಯನೂರು

ಶಿವಮೊಗ್ಗ: ‘ಈಶ್ವರಪ್ಪ ಚಾಲಕನ (ಶಾಸಕ) ಸ್ಥಾನದಲ್ಲಿ ಸುದೀರ್ಘ ಅವಧಿಯಿಂದ ಇದ್ದಾರೆ. ಈಗ ಚಾಲನೆ ಮಾಡಲು ನನಗೂ ಮನಸ್ಸಾಗಿದೆ. ನನಗೂ ಡ್ರೈವರ್ ಸೀಟ್‌ನಲ್ಲಿ ಕುಳಿತುಕೊಳ್ಳಲು ಅವಕಾಶ ಕೊಡಿ ಎಂದು ಹೈಕಮಾಂಡ್‌ಗೆ ಕೇಳಿದ್ದೇನೆ. ಟಿಕೆಟ್ ಸಿಗುವ ವಿಶ್ವಾಸವಿದೆ’ ಎಂದು ವಿಧಾನ ಪರಿಷತ್ ಸದಸ್ಯ ಆಯನೂರು ಮಂಜುನಾಥ್ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಈ ರೀತಿ ಪ್ರತಿಕ್ರಿಯಿಸಿದ ‘ಶಿವಮೊಗ್ಗ ನಗರ ಕ್ಷೇತ್ರದಿಂದ ನಾನೂ ಆಕಾಂಕ್ಷಿ’ ಎಂದು ಪ್ರತಿಪಾದಿಸಿದರು. ‘ಪಕ್ಷ ಟಿಕೆಟ್ ಕೊಡದಿದ್ದರೆ ಸಹ ಚಾಲಕನಾಗಿ ಮುಂದುವರಿಯುವೆ. ಈಶ್ವರಪ್ಪ ಅವರನ್ನು ಎಳೆದು ಅಲ್ಲಿ ಕೂರುವುದಿಲ್ಲ’ ಎಂದರು.

ಎನ್‌ಪಿಎ ಹೆಸರಲ್ಲಿ ಎಳ್ಳು ನೀರು: ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರೈತರ ಸಾಲ ಮನ್ನಾ ಮಾಡುವುದು ನಿಷ್ಪ್ರಯೋಜಕ ಎಂದಿರುವ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರೇ, ಉದ್ಯಮಿಗಳ ₹ 10 ಲಕ್ಷ ಕೋಟಿ ಸಾಲವನ್ನು ಎನ್‌ಪಿಎ (ವಸೂಲಾಗದ ಸಾಲ) ಹೆಸರಲ್ಲಿ ಎಳ್ಳುನೀರು ಬಿಟ್ಟಿದ್ದು ಆರ್ಥಿಕತೆಗೆ ಉಪಯೋಗವೇ’ ಎಂದು ರಾಜ್ಯ ಕಾಂಗ್ರೆಸ್ ಘಟಕ ಪ್ರಶ್ನಿಸಿದೆ.

‘#ರೈತವಿರೋಧಿ ಬಿಜೆಪಿ’ ಎಂದು ಟ್ಯಾಗ್ ಸಹಿತ ಟ್ವೀಟ್ ಮಾಡಿರುವ ಕಾಂಗ್ರೆಸ್, ‘ತಾಲಿಬಾನಿಗಳ ಅಫ್ಗಾನಿಸ್ತಾನಕ್ಕೆ ಪ್ರತಿವರ್ಷ ನೂರಾರು ಕೋಟಿ ದಾನ ಮಾಡುವುದು ದೇಶದ ಆರ್ಥಿಕತೆಗೆ ಸಹಾಯಕವೇ’ ಎಂದೂ ಕೇಳಿದೆ.



ಪ್ರಜಾಧ್ವನಿ

ಕಲಬುರಗಿ ಜಿಲ್ಲೆಯ ಅಫಜಲಪುರದಲ್ಲಿ ಮಂಗಳವಾರ ನಡೆದ ಪ್ರಜಾಧ್ವನಿ ಸಮಾವೇಶದಲ್ಲಿ ನೆರೆದಿದ್ದ ಜನರು -ಪ್ರಜಾವಾಣಿ ಚಿತ್ರ

ಸಿಎನ್‌ಜಿ ವಾಹನ: ಸುರಕ್ಷತಾ ಪರೀಕ್ಷೆ ಕಡ್ಡಾಯ

ಬೆಂಗಳೂರು: ರಾಜ್ಯದ ಎಲ್ಲ ಸಿಎನ್‌ಜಿ ವಾಹನಗಳ ಸಿಲಿಂಡರ್‌ಗಳಿಗೆ ಸುರಕ್ಷತಾ ಪರೀಕ್ಷೆ ಕಡ್ಡಾಯ ಎಂದು ಸಾರಿಗೆ ಮತ್ತು ಸುರಕ್ಷತೆ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ.

ರಾಷ್ಟ್ರೀಯ ಮಾರ್ಗಸೂಚಿಗೆ ಅನುಗುಣವಾಗಿ ವಾಹನ ಮಾಲೀಕರು ಮೂರು ವರ್ಷಗಳಿಗೊಮ್ಮೆ ‘ಹೈಡ್ರೋ ಸ್ಟಾಟಿಕ್ ಸ್ಟ್ರೆಚ್’ ಪರೀಕ್ಷೆ ನಡೆಸಬೇಕು. ಪರೀಕ್ಷೆಯ ಸಮಯದಲ್ಲಿ ವಾಹನ ಸುರಕ್ಷತಾ ಸಾಮರ್ಥ್ಯದ ಪ್ರಮಾಣ ಪತ್ರ ಹಾಜರುಪಡಿಸಬೇಕು ಎಂದು ವಿವರಿಸಿದ್ದಾರೆ.

‘ಸಿಲಿಂಡರ್ ಬಾಳಿಕೆ 20 ವರ್ಷಗಳು. ಈ ಪರೀಕ್ಷೆಗಳನ್ನು ನಡೆಸಲು ಸರ್ಕಾರ ಬೆಂಗಳೂರು ಮೂಲದ ಸಂಸ್ಥೆ-ಎಂಜಿಆರ್ ಹೈಡ್ರೋಟೆಸ್ಟ್ ಇಂಕ್ ಸಂಸ್ಥೆಯನ್ನು ಅಧಿಕೃತವಾಗಿ ನೇಮಿಸಿದೆ. ಇನ್ನೂ ಎರಡು ಕಂಪನಿಗಳು ಈ ಪರೀಕ್ಷೆಗಳನ್ನು ನಡೆಸಲು ಅಧಿಕಾರ ಪಡೆಯಲಿವೆ’ ಎಂದು ವ್ಯವಸ್ಥಾಪಕ ಪಾಲುದಾರ ಜ್ಞಾನಚಂದ್ ಬಾಂಟಿಯಾ ಹೇಳಿದ್ದಾರೆ.

ಬಿಜೆಪಿ: 40.50 ಲಕ್ಷ ಹೊಸ ಸದಸ್ಯತ್ವ

ಬೆಂಗಳೂರು: ಬಿಜೆಪಿಯ ವಿಜಯ ಸಂಕಲ್ಪ ಅಭಿಯಾನದ ವೇಳೆ ಒಟ್ಟು 40.50 ಲಕ್ಷ ಹೊಸ ಸದಸ್ಯತ್ವ ನೋಂದಣಿ ಮಾಡಲಾಗಿದೆ ಎಂದು ಸಚಿವ ಅಶ್ವತ್ಥ ನಾರಾಯಣ ಹೇಳಿದರು.

ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ಎಲ್ಲ ದ್ವೀಪವಾಸಿಗಳನ್ನೂ ಸಂಪರ್ಕಿಸಲಾಗಿದೆ. ಕೊಡಗು, ಶಿವಮೊಗ್ಗ ಮತ್ತು ಮೈಸೂರಿನಲ್ಲಿ ಶೇ 100 ರಷ್ಟು ಮನೆಗಳನ್ನು ಸಂಪರ್ಕಿಸಲಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಕಾಡುಗಳಲ್ಲಿ ವಾಸವಾಗಿರುವ ಬುಡಕಟ್ಟು ಜನಾಂಗದವರನ್ನೂ ಸಂಪರ್ಕಿಸಲಾಗಿದೆ ಎಂದು ಹೇಳಿದರು. ಅಭಿಯಾನದಲ್ಲಿ 58,186 ಬೂತ್‌ಗಳ ಪೈಕಿ 39,572 ಬೂತ್‌ಗಳನ್ನು ಸಂಪರ್ಕ ಮಾಡಲಾಗಿದೆ. 22,55,562 ಮನೆಗಳನ್ನು ಸಂಪರ್ಕ ಮಾಡಿದ್ದೇವೆ ಎಂದು ತಿಳಿಸಿದರು.

ದಂಡ ಪಾವತಿಸದ ಸವಾರನಿಗೆ ಜೈಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮದ್ಯ ಸೇವಿಸಿ ದ್ವಿಚಕ್ರ ವಾಹನ ಚಾಲನೆ ಮಾಡಿದ್ದರಿಂದ ವಿಧಿಸಲಾದ ₹ 10,250 ದಂಡ ಪಾವತಿಸಲು ಆಗದ ಸವಾರನಿಗೆ ಒಂದು ವರ್ಷ ಶಿಕ್ಷೆ ವಿಧಿಸಿ ಇಲ್ಲಿನ ಸಿಜೆಎಂ ನ್ಯಾಯಾಲಯ ಆದೇಶ ನೀಡಿದೆ. ನಗರದ ಸಂಪಿಗೆ ಸಿದ್ಧೇಶ್ವರ ಶಾಲೆ ಸಮೀಪದ ನಿವಾಸಿ ಟಿ. ರವಿಕುಮಾರ್ ಜೈಲು ಸೇರಿದ ಬೈಕ್ ಸವಾರ.

ಹಮಾಲಿ ಕಾರ್ಮಿಕನಾಗಿರುವ ರವಿಕುಮಾರ್, ಸಂಚಾರ ನಿಯಮ ಉಲ್ಲಂಘನೆ ಮಾಡಿದ ಆರೋಪದಡಿ ಫೆ.2ರಂದು ಮದೇಹಳ್ಳಿ ರಸ್ತೆಯಲ್ಲಿ ಸಂಚಾರ ಠಾಣೆ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದರು. ಕುಡಿದು ವಾಹನ ಚಾಲನೆ ಮಾಡಿದ್ದಕ್ಕೆ ₹ 10 ಸಾವಿರ, ಅಪಾಯಕಾರಿ ಚಾಲನೆಗೆ ₹ 10 ಸಾವಿರ ಹಾಗೂ ಹೆಲ್ಮೆಟ್ ಧರಿಸದೇ ಇರುವುದಕ್ಕೆ ₹ 500 ದಂಡ ವಿಧಿಸಲಾಗಿತ್ತು. ನ್ಯಾಯಾಲಯಕ್ಕೆ ಹಾಜರಾಗಿ ದಂಡ ಪಾವತಿಸುವಂತೆ ಪೊಲೀಸರು ತಾಕೀತು ಮಾಡಿದ್ದರು.

ಸಿಜೆಎಂ ನ್ಯಾಯಾಲಯಕ್ಕೆ ಮಂಗಳವಾರ ಹಾಜರಾದ ರವಿಕುಮಾರ್‌ಗೆ ದಂಡದ ಮೊತ್ತದಲ್ಲಿ ಶೇ 50ರಷ್ಟು ವಿನಾಯಿತಿ ನೀಡಿದ ನ್ಯಾಯಾಧೀಶ ಕೆಂಪರಾಜು, ₹ 10,250 ಪಾವತಿಸಲು ಸೂಚಿಸಿದರು. ತನ್ನ ಬಳಿ ₹ 2 ಸಾವಿರ ಮಾತ್ರ ಇದೆ ಎಂದು ರವಿಕುಮಾರ್ ಹೇಳಿದರು. ದಂಡ ಪಾವತಿಸದಿದ್ದುದಕ್ಕೆ ಜೈಲು ಶಿಕ್ಷೆ ವಿಧಿಸಿ ಆದೇಶಿಸಿದರು.

ಸಂಕ್ಷಿಪ್ತ ಸುದ್ದಿ

ದಿಕ್ಸೂಚಿ ಭಾಷಣಕ್ಕೆ ಚಕ್ರತೀರ್ಥಗೆ ಆಹ್ವಾನ: ಆಕ್ಷೇಪ

ಉಡುಪಿ: ಫೆ.11ರಿಂದ ಇಲ್ಲಿ ನಡೆಯುವ ರಾಜ್ಯಮಟ್ಟದ ಸಮಗ್ರ ಯಕ್ಷಗಾನ ಸಮ್ಮೇಳನದ ಗೋಷ್ಠಿ ಉದ್ಘಾಟನೆ ಹಾಗೂ ದಿಕ್ಸೂಚಿ ಭಾಷಣಕ್ಕೆ ಲೇಖಕ ರೋಹಿತ್ ಚಕ್ರತೀರ್ಥ ಅವರಿಗೆ ಅವಕಾಶ ನೀಡಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ.

‘ಯಾವ ಮಾನದಂಡದಡಿ ರೋಹಿತ್ ಅವರನ್ನು ಆಹ್ವಾನಿಸಲಾಗಿದೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿರಿಯ ಯಕ್ಷಗಾನ ಕಲಾವಿದರು ಇಲ್ಲವೇ’ ಎಂದು ರಂಗಕರ್ಮಿ ಉದ್ಯಾವರ ನಾಗೇಶ್ ಕುಮಾರ್ ಪ್ರಶ್ನಿಸಿದ್ದಾರೆ.

‘ಕೊಳ್ಯೂರು ರಾಮಚಂದ್ರ ರಾಯರು, ಶ್ರೀಧರ ಹಂದೆ, ಗೋವಿಂದ ಭಟ್ಟರಂತಹ ದಿಗ್ಗಜರನ್ನು ಬಿಟ್ಟು, ಚಕ್ರತೀರ್ಥಗೆ ಮಣೆ ಹಾಕುವ ಔಚಿತ್ಯವೇನು, ಇದು ಯಕ್ಷಗಾನ ಸಮ್ಮೇಳನವೇ ಅಥವಾ ರಾಜಕೀಯ ಸಮ್ಮೇಳನವೇ’ ಎಂದು ಪ್ರಶ್ನಿಸಿದ್ದಾರೆ.

ಮುರುಘಾ ಶರಣರ ಜಾಮೀನು ಅರ್ಜಿ ತಿರಸ್ಕೃತ

ಚಿತ್ರದುರ್ಗ: ಪೋಕ್ಸೊ ಹಾಗೂ ಪರಿಶಿಷ್ಟ ಜಾತಿ, ಪಂಗಡದ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿ ಬಂಧಿತರಾಗಿರುವ ಮುರುಘಾಮಠದ ಶಿವಮೂರ್ತಿ ಶರಣರು ಜಾಮೀನು ಕೋರಿ ಸಲ್ಲಿಸಿದ್ದ ಎರಡನೇ ಅರ್ಜಿಯನ್ನು ಜಿಲ್ಲಾ ನ್ಯಾಯಾಲಯ ಮಂಗಳವಾರ ತಿರಸ್ಕರಿಸಿತು.

ತನಿಖೆ ನಡೆಸಿದ್ದ ಪೊಲೀಸರು ಎರಡು ಪ್ರತ್ಯೇಕ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಎರಡನೇ ದೋಷಾರೋಪ ಪಟ್ಟಿ ಆಧರಿಸಿ ಸಲ್ಲಿಸಲಾಗಿದ್ದ ಜಾಮೀನು ಅರ್ಜಿ ವಿಚಾರಣೆ ನಡೆಸಿದ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶೆ ಬಿ.ಕೆ. ಕೋಮಲಾ ಅರ್ಜಿ ತಿರಸ್ಕರಿಸಿದರು.

ಮೊದಲ ಜಾಮೀನು ಅರ್ಜಿಯನ್ನು ಕೋರ್ಟ್ ಜ.31ರಂದು ತಿರಸ್ಕರಿಸಿತ್ತು.

ಲೈಂಗಿಕ ದೌರ್ಜನ್ಯ: ಪ್ರಾಚಾರ್ಯರ ವಿರುದ್ಧ ದೂರು

ಬಾಗಲಕೋಟೆ: ನಗರದ ಶಾಲೆಯೊಂದರಲ್ಲಿ ವಿದ್ಯಾರ್ಥಿನಿ ಮೇಲೆ ಲೈಂಗಿಕ ದೌರ್ಜನ್ಯವೆಸಗಿರುವ ಪ್ರಕರಣ ನವನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಮಂಗಳವಾರ ದಾಖಲಾಗಿದೆ. ಪ್ರಾಚಾರ್ಯರ ವಿರುದ್ಧ ದೂರು ದಾಖಲಾಗಿರುವುದನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಯಪ್ರಕಾಶ ಖಚಿತ ಪಡಿಸಿದ್ದಾರೆ.

ವಶಕ್ಕೆ ಪಡೆದ ₹12 ಲಕ್ಷ ವಾಪಸ್‌ಗೆ ಆದೇಶ

ಬೆಂಗಳೂರು: ಭ್ರಷ್ಟಾಚಾರದ ಆರೋಪಕ್ಕೆ ಸಂಬಂಧಿಸಿದಂತೆ ಉದ್ಯೋಗ ಮತ್ತು ತರಬೇತಿ ಇಲಾಖೆಯ ನಿವೃತ್ತ ನಿರ್ದೇಶಕರೊಬ್ಬರ ಮನೆ ಮೇಲೆ ದಾಳಿ ನಡೆಸಿದಾಗ, ವಶಕ್ಕೆ ಪಡೆಯಲಾಗಿದ್ದ ₹ 12.15 ಲಕ್ಷ ಮೊತ್ತವನ್ನು ಹಿಂದಿರುಗಿಸುವಂತೆ ಲೋಕಾಯುಕ್ತ ವಿಶೇಷ ನ್ಯಾಯಾಲಯಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

67 ವರ್ಷದ ಶಿವಲಿಂಗಮೂರ್ತಿ ಎಂಬುವರು ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಆದೇಶ ನೀಡಿ, ಅರ್ಜಿ ವಿಲೇವಾರಿ ಮಾಡಿದೆ.

‘ಒಬಿಸಿ ಕೆನೆಪದರ: ಆದಾಯ ಮಿತಿ ಪರಿಷ್ಕರಣೆ ಇಲ್ಲ’

ನವದೆಹಲಿ (ಪಿಟಿಐ): ಇತರ ಹಿಂದುಳಿದ ವರ್ಗಗಳ (ಒಬಿಸಿ) ಕೆನೆಪದರ ವಾರ್ಷಿಕ ಆದಾಯ ಮಿತಿ ₹ 8 ಲಕ್ಷ ಇದ್ದು, ಅದನ್ನು ಪರಿಷ್ಕರಿಸುವ ಯಾವುದೇ ಪ್ರಸ್ತಾವ ಇಲ್ಲ ಎಂದು ಕೇಂದ್ರ ಸರ್ಕಾರ ಮಂಗಳವಾರ ಲೋಕಸಭೆಗೆ ತಿಳಿಸಿದೆ. ಪ್ರಸ್ತುತ ಚಾಲ್ತಿಯಲ್ಲಿರುವ ಒಬಿಸಿ ಕೆನೆಪದರ ವಾರ್ಷಿಕ ಆದಾಯದ ಮಿತಿ ಸಮರ್ಪಕವಾಗಿದೆ. ಈ ಮಿತಿಯನ್ನು ಇಲ್ಲಿಯವರೆಗೆ ನಾಲ್ಕು ಬಾರಿ ಪರಿಷ್ಕರಿಸಲಾಗಿದೆ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆಯ ಸಚಿವ ವಿರೇಂದ್ರ ಕುಮಾರ್ ಲೋಕಸಭೆಯಲ್ಲಿ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ನಕಲಿ ದಾಖಲೆಗಳನ್ನು ಸಲ್ಲಿಸಿ ಬ್ಯಾಂಕ್‌ನಿಂದ ಸಾಲ ಪಡೆದು ವಂಚನೆ

₹13.87 ಕೋಟಿ ಆಸ್ತಿ ಮುಟ್ಟುಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಳ್ಳು ಲೆಕ್ಕಪತ್ರ ಮತ್ತು ಫೋರ್ಜರಿ ದಾಖಲೆಗಳನ್ನು ಸಲ್ಲಿಸಿ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಿಂದ ಸಾಲ ಪಡೆದು ವಂಚಿಸಿದ್ದ ಆರೋಪ ಎದುರಿಸುತ್ತಿರುವ ತುಮಕೂರಿನ ಅಪ್ಕಾನ್ ಕ್ರಷರ್ ಕಂಪನಿಗೆ ಸೇರಿದ ₹ 13.87 ಕೋಟಿ ಮೌಲ್ಯದ ಆಸ್ತಿಗಳನ್ನು ಜಾರಿ ನಿರ್ದೇಶನಾಲಯ(ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ಮುಖ್ಯಾಂಶಗಳು
- ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಿಂದ ಪಡೆದ ಸಾಲ
- ತುಮಕೂರಿನ ಅಪ್ಕಾನ್ ಕ್ರಷರ್ ಕಂಪನಿಗೆ ಸೇರಿದ ಆಸ್ತಿ

₹ 10 ಲಕ್ಷ ಮೌಲ್ಯದ ದಾಸ್ತಾನು ಮಾತ್ರ ಇದ್ದರೂ, ₹ 28.68 ಕೋಟಿ ಮೌಲ್ಯದ ಜೆಲ್ಲಿ ಮತ್ತಿತರ ವಸ್ತುಗಳ ದಾಸ್ತಾನು ಇದೆ ಎಂದು ಸುಳ್ಳು ಲೆಕ್ಕಪತ್ರ ಸಲ್ಲಿಸಲಾಗಿತ್ತು. ಅದರ ಆಧಾರದಲ್ಲಿ 2016ರ ಫೆಬ್ರುವರಿ 23ರಿಂದ 2017ರ ಅಕ್ಟೋಬರ್ 16ರವರೆಗೆ ಅಪ್ಕಾನ್ ಕಂಪನಿಗೆ ₹ 26 ಕೋಟಿ ನಗದು ಸಾಲ ಮತ್ತು ₹ 1.09 ಕೋಟಿ ವಾಹನ ಸಾಲ ಮಂಜೂರು ಮಾಡಲಾಗಿತ್ತು. ₹ 13.87 ಕೋಟಿಯಷ್ಟು ಸಾಲವನ್ನು ಕಂಪನಿ ಬಳಸಿಕೊಂಡಿತ್ತು.

ಬ್ಯಾಂಕ್ ಅಧಿಕಾರಿಗಳು ಸಲ್ಲಿಸಿದ್ದ ದೂರು ಆಧರಿಸಿ 202ರಲ್ಲಿ ಎಫ್‌ಐಆರ್ ದಾಖಲಿಸಿದ್ದ ಸಿಬಿಐ, ತನಿಖೆ ನಡೆಸಿತ್ತು. ಕಂಪನಿಯ ಪ್ರವರ್ತಕರು ಮತ್ತು ನಿರ್ದೇಶಕರ ವಿರುದ್ಧ ಸಿಬಿಐ ಆರೋಪಪಟ್ಟಿ ಸಲ್ಲಿಸಿತ್ತು. ಬಳಿಕ ಇ.ಡಿ ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಪ್ರತ್ಯೇಕ ಪ್ರಕರಣ ದಾಖಲಿಸಿತ್ತು.

‘ಸುಳ್ಳು ಲೆಕ್ಕಪತ್ರ ಹಾಗೂ ದಾಖಲೆಗಳನ್ನು ಸಲ್ಲಿಸಿ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಿಂದ ಸಾಲ ಪಡೆದು ಅದನ್ನು ನಿರ್ದಿಷ್ಟ ಉದ್ದೇಶಕ್ಕೆ ಬಳಸದೇ ಅಕ್ರಮವಾಗಿ ಬೇರೆ ಖಾತೆಗಳಿಗೆ ವರ್ಗಾವಣೆ ಮಾಡಲಾಗಿತ್ತು. ಕಂಪನಿಯ ಪಾಲುದಾರರ ವೈಯಕ್ತಿಕ ಖಾತೆಗಳಿಗೆ ವರ್ಗಾಯಿಸಿ|ಕೊಂಡು ಅನ್ಯ ಉದ್ದೇಶಕ್ಕೆ ಬಳಸಿರುವುದು ತನಿಖೆಯಲ್ಲಿ ಪತ್ತೆಯಾಗಿದೆ’ ಎಂದು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಅಪ್ಕಾನ್ ಕ್ರಷರ್ ಕಂಪನಿ ಹಾಗೂ ಅದರ ಪಾಲುದಾರರಿಗೆ ಸೇರಿದ ಎರಡು ಸ್ಥಿರಾಸ್ತಿಗಳು, ಐದು ವಾಹನಗಳು ಸೇರಿದಂತೆ ₹ 13.87 ಕೋಟಿ ಮೌಲ್ಯದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಜಾರಿ ನಿರ್ದೇಶನಾಲಯದ ಪ್ರಕಟಣೆ ತಿಳಿಸಿದೆ.

ಬಾಲ್ಯವಿವಾಹ: ಸ್ವಯಂ ಪ್ರೇರಿತ ದೂರು ದಾಖಲು

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಪ್ರಜಾವಾಣಿ’ ಫೆ.6 ಸಂಚಿಕೆಯ ಆಳ-ಅಗಲದಲ್ಲಿ ‘ಬಾಲ್ಯ ವಿವಾಹ ತಡೆ ಸರ್ಕಾರಕ್ಕೆ ಅಸಡ್ಡೆ, ಜನರಿಗೆ ಬೇಕಿಲ್ಲ’ ಶೀರ್ಷಿಕೆಯಲ್ಲಿ ಪ್ರಕಟವಾದ ವರದಿ ಆಧರಿಸಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದ್ದು, ಬಾಲ್ಯ ವಿವಾಹಗಳ ಕಟ್ಟುನಿಟ್ಟಿನ ತಡೆಗೆ ಇನ್ನಷ್ಟು ನಿಗಾವಹಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ನಿರ್ದೇಶಕರಿಗೆ ಪತ್ರ ಬರೆದಿದೆ.

ರಾಜ್ಯದ 14 ಜಿಲ್ಲೆಗಳಲ್ಲಿ ಬಾಲ್ಯ ವಿವಾಹ ಪ್ರಕರಣಗಳಲ್ಲಿ ಏರಿಕೆ ಕಂಡುಬಂದಿವೆ. ಬಾಲ್ಯ ವಿವಾಹ ನಡೆಯುತ್ತಿದ್ದರೂ, ಪ್ರಕರಣಗಳು ದಾಖಲಾಗುತ್ತಿಲ್ಲ. ಸರ್ಕಾರದ ಬಳಿ ನಿಖರ ಮಾಹಿತಿ ಇಲ್ಲ ಎನ್ನುವುದನ್ನು ‘ಪ್ರಜಾವಾಣಿ’ ಅಂಕಿ ಅಂಶಗಳ ಸಮೇತ ವರದಿ ಮಾಡಿದೆ.

ವರದಿ ಪರಿಣಾಮ

ಬಾಲ್ಯ ವಿವಾಹಗಳಿಗೆ ಆಸ್ಪದ ನೀಡಬಾರದು. ಗ್ರಾಮ ಮಟ್ಟದಿಂದಲೇ ತಡೆಗೆ ಶ್ರಮಿಸಬೇಕು. ಸಮಿತಿಗಳು ನಿರಂತರ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಆಯೋಗದ ಅಧ್ಯಕ್ಷ ನಾಗಣ್ಣಗೌಡ ಸೂಚಿಸಿದ್ದಾರೆ.

ಜೋಶಿ ಕಚೇರಿಗೆ ₹ 2.5 ಕೋಟಿ ಲಂಚ

ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಎಸ್.ಎಲ್. ಭೋಜೇಗೌಡ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕ ಡಾ. ಹರೀಶ್ ಅಯ್ಯಣ್ಣ ಅವರನ್ನು ರಾಷ್ಟ್ರೀಯ ವೈದ್ಯಕೀಯ ಮಂಡಳಿ (ಎನ್‌ಎಂಸಿ) ಸದಸ್ಯರನ್ನಾಗಿ ನೇಮಿಸುವುದಕ್ಕಾಗಿ ಪ್ರಲ್ಹಾದ ಜೋಶಿಯವರ ಕಚೇರಿಯ ಸಿಬ್ಬಂದಿಗೆ ₹ 2.5 ಕೋಟಿ ಲಂಚ ಸಂದಾಯವಾಗಿದೆ’ ಎಂದು ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಎಸ್.ಎಲ್. ಭೋಜೇಗೌಡ ಆರೋಪಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಾಖಲೆಗಳನ್ನು ಪ್ರದರ್ಶಿಸಿದರು.

ಜೋಶಿ ಅವರ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿತೇಂದ್ರ ಕುಮಾರ್ ಎಂಬುವವರ ಬ್ಯಾಂಕ್ ಖಾತೆಗೆ 2021ರ ಜುಲೈನಲ್ಲಿ ₹ 2 ಕೋಟಿ ವರ್ಗಾವಣೆ ಮಾಡಲಾಗಿದೆ. ₹ 50 ಲಕ್ಷ ನಗದು ರೂಪದಲ್ಲಿ ನೀಡಲಾಗಿದೆ. ಹರೀಶ್ ಅಯ್ಯಣ್ಣ ಅವರನ್ನು ಎನ್‌ಎಂಸಿ ಸದಸ್ಯರನ್ನಾಗಿ ನೇಮಕ ಮಾಡಬೇಕೆಂಬ ಕೋರಿಕೆಯನ್ನು ಪರಿಗಣಿಸುವುದಾಗಿ ಆಗ ಕೇಂದ್ರ ಆರೋಗ್ಯ ಸಚಿವರಾಗಿದ್ದ ಡಾ.ಹರ್ಷವರ್ಧನ್ ಅವರು ಪ್ರಲ್ಹಾದ ಜೋಶಿಯವರಿಗೆ ಪತ್ರವನ್ನೂ ಬರೆದಿದ್ದರು ಎಂದು ಬ್ಯಾಂಕ್ ಪಾಸ್ ಬುಕ್ ಹಾಗೂ ಕೇಂದ್ರ ಸಚಿವರ ಪತ್ರಗಳನ್ನು ತೋರಿಸಿದರು.

‘ಜೋಶಿ ಅವರು ನಮ್ಮ ಪಕ್ಷದ ವರಿಷ್ಠ ಎಚ್.ಡಿ. ದೇವೇಗೌಡರ ಕುಟುಂಬದ ಕುರಿತು ಲಘುವಾಗಿ ಮಾತನಾಡಿದ್ದಾರೆ. ಆದರೆ, ಅವರ ಕಚೇರಿಯಲ್ಲೇ ಲಂಚದ ಕಳ್ಳ ವ್ಯವಹಾರ ನಡೆದಿರುವ ಕುರಿತು ಏನು ಹೇಳುತ್ತಾರೆ? ಅವರ ಕಚೇರಿಯಲ್ಲಿ ಏನು ನಡೆಯುತ್ತಿದೆ ಎನ್ನುವುದು ರಾಜ್ಯಕ್ಕೆ ಗೊತ್ತಾಗಬೇಕು. ಪರಿಶುದ್ಧರು ಎಂದು ಬೊಬ್ಬಿರಿದು ಹೇಳುವ ಅವರ ಕರ್ಮಕಾಂಡ ಇಲ್ಲಿದೆ. ಕೇಂದ್ರ ಸರ್ಕಾರದ ಹುದ್ದೆಗಳನ್ನು ಪ್ರಲ್ಹಾದ ಜೋಶಿಯವರ ಕಚೇರಿಯಲ್ಲಿ ಹಣಕ್ಕಾಗಿ ಬಿಕರಿಗಿಡಲಾಗಿದೆ’ ಎಂದು ಆರೋಪಿಸಿದರು.

ಈ ಪ್ರಕರಣದ ಕುರಿತು ಉನ್ನತ-ಮಟ್ಟದ ತನಿಖೆ ನಡೆಸಬೇಕು. ಹಣ ನೀಡಿದವರು ಮತ್ತು ಪಡೆದವರು ಯಾರು? ಬಹುಕೋಟಿ ರೂಪಾಯಿ ಹಗರಣದ ನಿಜವಾದ ‘ಕಿಂಗ್‌ಪಿನ್’ ಯಾರು? ಇದರಲ್ಲಿ ಪ್ರಲ್ಹಾದ ಜೋಶಿಯವರ ಪಾತ್ರ ಏನು? ಎಂಬುದು ತನಿಖೆಯಿಂದ ಹೊರಬರಬೇಕು ಎಂದು ಆಗ್ರಹಿಸಿದರು.

‘ಆರಂಭದಲ್ಲಿ ಎನ್‌ಎಂಸಿ ಸದಸ್ಯರನ್ನಾಗಿ ನೇಮಿಸುವ ಆಮಿಷವೊಡ್ಡಿ ಹಣ ಪಡೆಯಲಾಗಿತ್ತು. ನಂತರ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರನ್ನಾಗಿ ಮಾಡುವ ಭರವಸೆ ನೀಡಲಾಗಿತ್ತು. ಕೇಂದ್ರ ಆರೋಗ್ಯ ಸಚಿವರು ಜೋಶಿಯವರಿಗೆ ಬರೆದಿರುವ ಪತ್ರಕ್ಕೂ ಹಗರಣಕ್ಕೂ ಇರುವ ನಂಟಿನ ಕುರಿತು ಕೂಡ ತನಿಖೆ ನಡೆಸಬೇಕು’ ಎಂದು ಒತ್ತಾಯಿಸಿದರು.

ಮಾನನಷ್ಟ ಮೊಕದ್ದಮೆ ಹೂಡುವೆ: ಜೋಶಿ

‘ಭೋಜೇಗೌಡ ಅವರು ಪ್ರದರ್ಶಿಸಿರುವ ಪತ್ರವನ್ನು ವೈದ್ಯರೊಬ್ಬರಿಗೆ ಬರೆಯಲಾಗಿತ್ತು. ಅವರು ಆರೋಪಿಸಿದಂತಹ ವ್ಯಕ್ತಿ ನನ್ನ ಕಚೇರಿಯಲ್ಲೂ ಇಲ್ಲ. ಅವರಿಗೆ ದಾಖಲೆಯ ಮೇಲೆ ಅಷ್ಟೊಂದು ವಿಶ್ವಾಸವಿದ್ದರೆ ಹೆಸರನ್ನು ಏಕೆ ಅಡಗಿಸಿಡಲಾಗಿದೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಟ್ವಿಟರ್‌ನಲ್ಲಿ ಪ್ರಶ್ನಿಸಿದ್ದಾರೆ.

‘ಇಂತಹ ಆಧಾರರಹಿತ ಆರೋಪಗಳನ್ನು ಗಂಭೀರವಾಗಿ ಎದುರಿಸಲಾಗುವುದು. ನನ್ನ ವ್ಯಕ್ತಿತ್ವದ ತೇಜೋವಧೆಗೆ ಯತ್ನಿಸುತ್ತಿರುವವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ’ ಎಂದಿರುವ ಅವರು, ಕೇಂದ್ರ ಆರೋಗ್ಯ ಸಚಿವರಾಗಿದ್ದ ಹರ್ಷವರ್ಧನ್ ಅವರು ಡಾ.ಬಿ.ಡಿ. ಪಾಂಡೆ ಎಂಬುವವರಿಗೆ ಬರೆದಿದ್ದ ಪತ್ರವನ್ನು ಹಂಚಿಕೊಂಡಿದ್ದಾರೆ.



ವಿಜಯನಗರ ಜಿಲ್ಲೆ ಮೈಲಾರದ ಡೆಂಕನಮರಡಿಯಲ್ಲಿ ಮಂಗಳವಾರ ಗೊರವಯ್ಯ ರಾಮಣ್ಣ ಅವರು ಬಿಲ್ಲು ಏರಿ ಕಾರಣಿಕ ನುಡಿದರು. ಈ ಕ್ಷಣಕ್ಕೆ ಅಪಾರ ಸಂಖ್ಯೆಯ ಜನರು ಸಾಕ್ಷಿಯಾದರು —ಪ್ರಜಾವಾಣಿ ಚಿತ್ರ: ಲವ

ಮೈಲಾರಲಿಂಗೇಶ್ವರ ಕಾರಣಿಕ ಮಹೋತ್ಸವದ ಭವಿಷ್ಯವಾಣಿ

‘ಅಂಬಲಿ ಹಳಸಿತು, ಕಂಬಳಿ ಬೀಸಿತಲೇ...’

ಪ್ರಜಾವಾಣಿ ವಾರ್ತೆ

ಮೈಲಾರ (ವಿಜಯನಗರ ಜಿಲ್ಲೆ): ‘ಅಂಬಲಿ ಹಳಸಿತು, ಕಂಬಳಿ ಬೀಸಿತಲೇ ಪರಾಕ್’- ಇದು ಈ ವರ್ಷದ ಮೈಲಾರಲಿಂಗೇಶ್ವರ ಸ್ವಾಮಿಯ ಕಾರಣಿಕ ನುಡಿ.

ಹೂವಿನಹಡಗಲಿ ತಾಲ್ಲೂಕಿನ ಪ್ರಸಿದ್ಧ ಧಾರ್ಮಿಕ ಸುಕ್ಷೇತ್ರ ಮೈಲಾರದಲ್ಲಿ ಮಂಗಳವಾರ ಸಂಜೆ ಅಪಾರ ಸಂಖ್ಯೆಯ ಭಕ್ತರ ನಡುವೆ ಕಾರಣಿಕ ಮಹೋತ್ಸವ ಜರುಗಿತು.

ದೇವಸ್ಥಾನದ ಧರ್ಮಕರ್ತೃ ವೆಂಕಪ್ಪಯ್ಯ ಒಡೆಯರ್ ಅವರು ಅಶ್ವಾರೂಢರಾಗಿ ಡೆಂಕನಮರಡಿಗೆ ಬಂದು ಕಾರಣಿಕ ಸ್ಥಳದಲ್ಲಿ ಪ್ರದಕ್ಷಿಣೆ ಹಾಕಿದರು. ಮೂರ್ತಿಗಳ ಉತ್ಸವದೊಂದಿಗೆ ಗೊರವಯ್ಯ ರಾಮಣ್ಣ ಅವರನ್ನು ಸಿಂಹಾಸನ ಕಟ್ಟೆಯಿಂದ ಕಾರಣಿಕ ಸ್ಥಳಕ್ಕೆ ಗೊರವ ಸಮೂಹ ಭವ್ಯ ಮೆರವಣಿಗೆಯಲ್ಲಿ ತರಲಾಯಿತು. ಈ ವೇಳೆ ‘ಏಳು ಕೋಟಿ...ಏಳು ಕೋಟಿಗೂ...ಚಹಾಂಗ ಬಲೋ’ ಎಂಬ ಸ್ವಾಮಿಯ ಉದ್ಘೋಷ ಮುಗಿಲು ಮುಟ್ಟಿತು.

ಸುಕ್ಷೇತ್ರದ ಪರಂಪರೆಯಂತೆ ಧರ್ಮಕರ್ತರಿಂದ ಭಂಡಾರದ ಆಶೀರ್ವಾದ ಪಡೆದ ಗೊರವಯ್ಯ ರಾಮಣ್ಣ ಬಿಲ್ಲು ಏರಿ ಮೇಲಿನಂತೆ ಕಾರಣಿಕ ನುಡಿದರು. ಈ ವರ್ಷದ ಕಾರಣಿಕ ನುಡಿಯನ್ನು ಭಕ್ತರು ತಮ್ಮದೇ ರೀತಿಯಲ್ಲಿ ವಿಶ್ಲೇಷಿಸಿದರು.

‘ಸ್ವಾಮಿಯ ನುಡಿಯಲ್ಲಿ ಮಿಶ್ರಫಲ ಅಡಗಿದೆ. ಮಳೆ, ಬೆಳೆ ಸಮೃದ್ಧಿಯಾಗಿ ನಾಡು ಸುಭಿಕ್ಷೆಯಾಗಬಹುದು. ಮಳೆ ಹೆಚ್ಚಾಗಿ ಬೆಳೆಹಾನಿ ಸಾಧ್ಯತೆಯೂ ಇದೆ. ಮುಂದಿನ ಚುನಾವಣೆಯಲ್ಲಿ ಒಂದೇ ಪಕ್ಷ ಸ್ಪಷ್ಟ ಬಹುಮತ ಪಡೆದು ಅಧಿಕಾರ ಹಿಡಿಯುವ ಸೂಚನೆ ಇದೆ’ ಎಂದು ಹಿರಿಯರು ಕೃಷಿ, ರಾಜಕೀಯ, ವಾಣಿಜ್ಯ, ಸಾಮಾಜಿಕ ಕ್ಷೇತ್ರಗಳ ಮೇಲೆ ತಾಳೆ ಹಾಕಿ ವಿಶ್ಲೇಷಿಸುತ್ತಿದ್ದರು. ಸ್ವಾಮಿಯ ಉಕ್ತಿ ಶುಭದಾಯಕವಾಗಿದೆ ಎಂದು ಕೆಲವರು ಅರ್ಥೈಸಿದರು.

ಕಾಗಿನೆಲೆ ಕನಕ ಪೀಠದ ನಿರಂಜನಾನಂದಪುರಿ ಸ್ವಾಮೀಜಿ, ಶಾಸಕ ಪಿ.ಟಿ. ಪರಮೇಶ್ವರ ನಾಯ್ಕ, ಸಂಸದ ವೈ.ದೇವೇಂದ್ರಪ್ಪ ಇತರರು ಇದ್ದರು.

₹6 ಸಾವಿರ ಆಮಿಷ: ಆಯೋಗಕ್ಕೆ ದೂರು

ನವದೆಹಲಿ: ಮತದಾರರಿಗೆ ತಲಾ ₹6 ಸಾವಿರ ನೀಡುವುದಾಗಿ ಹೇಳಿಕೆ ನೀಡಿರುವ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಕೇಂದ್ರ ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ನೇತೃತ್ವದ ನಿಯೋಗವು ಮಂಗಳವಾರ ದೂರು ನೀಡಿದೆ.

‘ಮುಂಬರುವ ಚುನಾವಣೆಯಲ್ಲಿ ಮತದಾರರಿಗೆ ತಲಾ ₹ 6 ಸಾವಿರ ನೀಡಿ ಮತ ಕೇಳಲಾಗುವುದು. ಎದುರಾಳಿಗಿಂತ ₹ 10 ಕೋಟಿ ಹೆಚ್ಚು ಖರ್ಚು ಮಾಡಲು ನಾವು ಸಿದ್ಧರಿದ್ದೇವೆ’ ಎಂಬ ಹೇಳಿಕೆ ನೀಡಿರುವ ಜಾರಕಿಹೊಳಿ ವಿರುದ್ಧ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ನೇತೃತ್ವದ ನಿಯೋಗ ಹೈಗ್ರೌಂಡ್ ಪೊಲೀಸ್ ಠಾಣೆಯಲ್ಲಿ ಜ. 25ರಂದು ದೂರು ನೀಡಿತ್ತು. ಆಯೋಗಕ್ಕೂ ದೂರು ನೀಡಿತ್ತು. ಆದರೆ, ಆಯೋಗದ ಅಧಿಕಾರಿಗಳು, ಪೊಲೀಸರು ಈವರೆಗೆ ಕ್ರಮ ಕೈಗೊಂಡಿಲ್ಲ’ ಎಂದು ದೂರಿನಲ್ಲಿ ತಿಳಿಸಲಾಗಿದೆ.

‘ಆಮಿಷ ಒಡ್ಡಿ ರಾಜ್ಯದ 5 ಕೋಟಿ ಮತದಾರರನ್ನು ಖರೀದಿಸುವ ಸಂಚು ನಡೆಸಿರುವ ರಮೇಶ ಜಾರಕಿಹೊಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಪ್ರೇರಣೆ ನೀಡಿದ್ದಾರೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕು’ ಎಂದು ದೂರಿನಲ್ಲಿ ನಿಯೋಗ ಆಗ್ರಹಿಸಿದೆ.



‘ಪ್ರಜಾವಾಣಿ’ ಅಮೃತ ಮಹೋತ್ಸವ ಪ್ರಯುಕ್ತ ಕಲಬುರಗಿಯಲ್ಲಿ ಮಂಗಳವಾರ ಯುನೈಟೆಡ್ ಆಸ್ಪತ್ರೆ ಸಹಯೋಗದಲ್ಲಿ ನಡೆದ 5 ಕಿ.ಮೀ. ಓಟದ ಸ್ಪರ್ಧೆಯಲ್ಲಿ ಕ್ರೀಡಾಪಟುಗಳು ಸೇರಿ ವಿವಿಧ ಜಿಲ್ಲೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಂಡಿದ್ದರು. ವಿಜೇತರಿಗೆ ನಗದು ಬಹುಮಾನ ವಿತರಿಸಲಾಯಿತು —ಪ್ರಜಾವಾಣಿ ಚಿತ್ರ

ಮಾರ್ಚ್ 23ರಿಂದ ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವ

ಬೆಂಗಳೂರು: ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ 14ನೇ ಆವೃತ್ತಿ ಮಾರ್ಚ್ 23ರಿಂದ ಪ್ರಾರಂಭವಾಗಲಿದೆ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಅಶೋಕ್ ಕಶ್ಯಪ್ ಪ್ರಜಾವಾಣಿಗೆ ತಿಳಿಸಿದರು.

ಮಂಗಳವಾರ ಚಲನಚಿತ್ರೋತ್ಸವ ಸಲಹಾ ಸಮಿತಿ ಸಭೆ ನಡೆದಿದ್ದು, ಸಭೆಯಲ್ಲಿ ಚಿತ್ರೋತ್ಸವದ ದಿನಾಂಕದ ಚರ್ಚೆಯಾಗಿದೆ. ಬುಧವಾರ ನಡೆಯಲಿರುವ ಸಂಘಟನಾ ಸಮಿತಿ ಸಭೆ ಬಳಿಕ ಕಂದಾಯ ಸಚಿವ ಆರ್.ಅಶೋಕ್ ಅವರೊಂದಿಗೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ದಿನಾಂಕ ಅಧಿಕೃತವಾಗಿ ಘೋಷಿಸುತ್ತೇವೆ. ಸರ್ಕಾರದಿಂದ ಅನುದಾನ ಬಿಡುಗಡೆ ಪ್ರಕ್ರಿಯೆ ಕೂಡ ಮುಗಿದಿದೆ ಎಂದು ಕಶ್ಯಪ್ ಹೇಳಿದರು.

ಮಂಗಳವಾರ ನಗರದ ಪದ್ಮನಾಭನಗರದ ಬಳಿಯ ಹೊರವರ್ತುಲ ರಸ್ತೆಯಲ್ಲಿ ನಡೆದ ಪುನೀತ್ ರಾಜ್‌ಕುಮಾರ್ ರಸ್ತೆ ನಾಮಕರಣ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಿತ್ರೋತ್ಸವದ ಅಧಿಕೃತ ಲಾಂಛನವನ್ನು ಬಿಡುಗಡೆಗೊಳಿಸಿದ್ದಾರೆ.

ಈ ತಿಂಗಳ ಅಂತ್ಯದಲ್ಲಿ ಚಿತ್ರೋತ್ಸವ ಮತ್ತು ಸ್ಪರ್ಧಾ ವಿಭಾಗಕ್ಕೆ ಚಲನಚಿತ್ರಗಳನ್ನು ಆಹ್ವಾನಿಸಲಾಗುವುದು. ಎಲ್ಲ ಪ್ರಕ್ರಿಯೆ ಆನ್‌ಲೈನ್‌ನಲ್ಲಿ ನಡೆಯುವುದುರಿಂದ ಗುಣಮಟ್ಟದ ಚಿತ್ರಗಳ ಆಯ್ಕೆಗೆ ಹೆಚ್ಚಿನ ಸಮಯ ಬೇಕಾಗುವುದಿಲ್ಲ ಎಂದು ತಿಳಿಸಿದರು.

ತೀರ್ಪುಗಾರರ ಸಮಿತಿಯಲ್ಲಿ ಪ್ರಶಸ್ತಿ ವಿಜೇತರು ಹಿಂದಿನ ಚಿತ್ರೋತ್ಸವದಲ್ಲಿ ನಡೆದ ಯಾವ ಲೋಪದೋಷಗಳೂ ಮರುಕಳಿಸದಂತೆ ಈ ಸಲ ಸಮಿತಿ ಎಚ್ಚರಿಕೆ ವಹಿಸುತ್ತಿದೆ. ‘ನಮ್ಮಲ್ಲಿ ರಾಜ್ಯ, ರಾಷ್ಟ್ರ ಪ್ರಶಸ್ತಿ ಪಡೆದ ಸಾಕಷ್ಟು ಗಣ್ಯರು, ಹಿರಿಯರು ಇದ್ದಾರೆ. ಯಾರಿಗೂ ಅನ್ಯಾಯವಾಗಲು ಬಿಡುವುದಿಲ್ಲ. ಸಿನಿಮಾ ಯಾವತ್ತಿಗೂ ಸಿನಿಮಾ. ಹೀಗಾಗಿ ಈ ಸಲದ ಆಯ್ಕೆಯಲ್ಲಿ ಎಡ, ಬಲದ ವಿವಾದ ನುಸುಳುವುದಿಲ್ಲ. ಚಿತ್ರ ಆಯ್ಕೆ ಸಮಿತಿಯಲ್ಲಿ ಪ್ರಶಸ್ತಿ ವಿಜೇತರೇ ಮುನ್ನೆಲೆಯಲ್ಲಿರುತ್ತಾರೆ’ ಎಂದು ಕಶ್ಯಪ್ ಹೇಳಿದರು.

ಇಂದು ಸಂಘಟನಾ ಸಮಿತಿ ಸಭೆ: ಈ ಸಲ ಚಿತ್ರೋತ್ಸವದಲ್ಲಿ ಸ್ಥಳೀಯ, ದೇಶೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡ ಅತ್ಯುತ್ತಮ ಚಿತ್ರಗಳು ಸೇರಿ ಸುಮಾರು 300 ಸಿನಿಮಾ ಪ್ರದರ್ಶನಕ್ಕೆ ಸಮಿತಿ ಆಲೋಚಿಸಿದೆ. ಆಯ್ಕೆಗಾಗಿ ಸೂಕ್ತ ಮಾನದಂಡ ಮತ್ತು ನಿಯಮಗಳನ್ನು ಸಿದ್ಧಪಡಿಸಲಾಗಿದ್ದು ಬುಧವಾರ ನಡೆಯಲಿರುವ ಸಂಘಟನಾ ಸಮಿತಿ ಸಭೆಯಲ್ಲಿ ಇದಕ್ಕೊಂದು ಅಂತಿಮ ರೂಪ ಸಿಗಲಿದೆ.

ಕೋರ್ಟ್ ಆದೇಶ ಉಲ್ಲಂಘನೆ: 3 ತಿಂಗಳ ಜೈಲು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೋರ್ಟ್ ಆದೇಶ ಉಲ್ಲಂಘಿಸಿ ಜಮೀನು ಮಾರಾಟ ಮಾಡಿದ ಪ್ರಕರಣವೊಂದರಲ್ಲಿ ನಂಜನಗೂಡಿನ ತುಮ್ಮನೇರಳೆ ಗ್ರಾಮದ ಪ್ರಕಾಶ್ ಎಂಬುವರಿಗೆ ಹೈಕೋರ್ಟ್, ‘ಮೂರು ತಿಂಗಳು ಜೈಲುವಾಸ ಅಥವಾ ಮಾರಾಟದ ಹಣವನ್ನು ಠೇವಣಿಯನ್ನಾಗಿ ಇಡಬೇಕು. ಇವರೆಡರಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಂಡು ಶಿಕ್ಷೆ ಅನುಭವಿಸಬೇಕು’ ಎಂದು ಆದೇಶಿಸಿದೆ.

ಈ ಸಂಬಂಧ ಸೋಮಣ್ಣ ಮತ್ತಿತರರು ಸಲ್ಲಿಸಿದ್ದ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಬಿ.ವೀರಪ್ಪ ಮತ್ತು ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಆದೇಶ ಹೊರಡಿಸಿದೆ.

‘ಆರೋಪಿಯು ಉದ್ದೇಶಪೂರ್ವಕವಾಗಿಯೇ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿರುವುದರಿಂದ ತಪ್ಪೆಸಗಿರುವುದು ಸಾಬೀತಾಗಿದೆ. ಅರ್ಜಿದಾರರು ಬೇಷರತ್ ಕ್ಷಮೆ ಕೋರಿದ್ದಾರೆ. ಆದರೆ, ಕ್ಷಮೆ ಎನ್ನುವುದು ಪ್ರಾಯಶ್ಚಿತ್ತ, ಪಶ್ಚಾತಾಪ ಅಥವಾ ವಿಷಾದವಲ್ಲ. ಕ್ಷಮೆಯನ್ನು ಪರಿಗಣಿಸಿ ಪ್ರಕರಣವನ್ನು ಹಾಗೆಯೇ ಬಿಟ್ಟರೆ ಉದ್ದೇಶಪೂರ್ವಕವಾಗಿಯೇ ನ್ಯಾಯಾಂಗ ನಿಂದನೆ ಎಸಗಿದವರನ್ನು ಸುಮ್ಮನೇ ಬಿಟ್ಟಂತಾಗುತ್ತದೆ’ ಎಂದು ನ್ಯಾಯಪೀಠ ಅಭಿಪ್ರಾಯ ಪಟ್ಟಿದೆ.

‘ನ್ಯಾಯಾಂಗ ನಿಂದನೆ ಕಾಯ್ದೆ ಕಲಂ 12(1)ರ ಪ್ರಕಾರ ಆರೋಪ ಸಾಬೀತಾಗಿರುವ ಹಿನ್ನೆಲೆಯಲ್ಲಿ ಆರೋಪಿ 3 ತಿಂಗಳು ಸೆರೆವಾಸ ಅನುಭವಿಸಬೇಕು ಅಥವಾ ಮೇಲ್ಮನವಿ ಇತ್ಯರ್ಥವಾಗುವವರೆಗೆ ಜಮೀನು ಮಾರಾಟ ಮಾಡಿದ ಹಣವನ್ನು ಎರಡು ತಿಂಗಳಲ್ಲಿ ಠೇವಣಿ ಇಡಬೇಕು. ಒಂದು ವೇಳೆ ಹಣವನ್ನು ಠೇವಣಿ ಇಡದೇ ಹೋದಲ್ಲಿ ಪ್ರಕಾಶ್ ಅವರನ್ನು ಬಂಧಿಸಲು ವಾರಂಟ್ ಹೊರಡಿಸಬೇಕು’ ಎಂದು ರಿಜಿಸ್ಟ್ರಾರ್ ಜನರಲ್ ಅವರಿಗೆ ನಿರ್ದೇಶಿಸಿದೆ.

ಪ್ರಕರಣವೇನು?: ಜಮೀನು ವಿಷಯಕ್ಕೆ ಸಂಬಂಧಿಸಿದಂತೆ ಸೋಮಣ್ಣ ಮತ್ತು ಪ್ರಕಾಶ್ ನಡುವೆ ವ್ಯಾಜ್ಯವಿತ್ತು. ವಿಚಾರಣಾ ನ್ಯಾಯಾಲಯ ಅರ್ಜಿಯನ್ನು ವಜಾಗೊಳಿಸಿದೆ ಎಂಬ ಕಾರಣಕ್ಕೆ ಸೋಮಣ್ಣ ಹೈಕೋರ್ಟ್ ಮೆಟ್ಟಿಲೇರಿದ್ದರು. ಮೇಲ್ಮನವಿ ವಿಚಾರಣೆಯಲ್ಲಿ, ‘ವ್ಯಾಜ್ಯ ಇತ್ಯರ್ಥವಾಗುವ ತನಕ ಜಮೀನು ಪರಭಾರೆ ಮಾಡಬಾರದು’ ಎಂದು 2011ರಲ್ಲಿ ಹೈಕೋರ್ಟ್ ಮಧ್ಯಂತರ ಆದೇಶ ನೀಡಿತ್ತು. ಆದರೆ, ಈ ಆದೇಶ ಉಲ್ಲಂಘಿಸಿ ವ್ಯಾಜ್ಯದಲ್ಲಿರುವ ಜಮೀನನ್ನು ಮಾರಾಟ ಮಾಡಲಾಗಿದೆ ಎಂದು 2017ರಲ್ಲಿ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿ ದಾಖಲು ಮಾಡಲಾಗಿತ್ತು

ಲೋಕಾಯುಕ್ತ ಕಾಯ್ದೆ ತಿದ್ದುಪಡಿಗೆ ನಿರಾಸಕ್ತಿ

ಒಂದನೇ ಪುಟದಿಂದ

ಇದರಿಂದಾಗಿ ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತರು ಸಲ್ಲಿಸುವ ವಿಚಾರಣಾ ವರದಿಗಳಲ್ಲಿ ಹೆಚ್ಚಿನವು ತಿರಸ್ಕೃತವಾಗುತ್ತಿವೆ. ನೂರಾರು ಸಂಖ್ಯೆಯ ವರದಿಗಳಿಗೆ ಸಂಬಂಧಿಸಿದಂತೆ ಯಾವುದೇ ತೀರ್ಮಾನ ಕೈಗೊಳ್ಳದೆ ವಿಳಂಬ ಧೋರಣೆ ಅನುಸರಿಸಲಾಗುತ್ತಿದೆ. ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ರದ್ದುಗೊಳಿಸಿ ಲೋಕಾಯುಕ್ತಕ್ಕೆ ಮರಳಿ ತನಿಖಾ ಅಧಿಕಾರ ನೀಡುವಂತೆ ಕೋರಿದ್ದ ಅರ್ಜಿಗಳ ವಿಚಾರಣೆ ವೇಳೆ ಈ ಬಗ್ಗೆಯೂ ಹೈಕೋರ್ಟ್ ಪರಿಶೀಲನೆ ನಡೆಸಿತ್ತು.

ಚಿದಾನಂದ ಅರಸ್ ಬಿ.ಜಿ. ಹಾಗೂ ಇತರರು ಮತ್ತು ಕರ್ನಾಟಕ ಸರ್ಕಾರದ ಮಧ್ಯದ ಪ್ರಕರಣಗಳ ವಿಚಾರಣೆ ನಡೆಸಿ 2022ರ ಆಗಸ್ಟ್ 11ರಂದು ತೀರ್ಪು ನೀಡಿದ್ದ ನ್ಯಾಯಮೂರ್ತಿ ಬಿ. ವೀರಪ್ಪ ಮತ್ತು ಕೆ.ಎಸ್. ಹೇಮಲೇಖಾ ಅವರಿದ್ದ ವಿಭಾಗೀಯ ಪೀಠ, ಎಸಿಬಿ ರಚನೆಯನ್ನು ರದ್ದುಗೊಳಿಸಿತ್ತು. ಲೋಕಾಯುಕ್ತ ಸಂಸ್ಥೆಗೆ 2014ರ ಮಾರ್ಚ್‌ಗೂ ಮೊದಲು ಇದ್ದ ಎಲ್ಲ ಅಧಿಕಾರಗಳನ್ನು ಮರುಸ್ಥಾಪಿಸಿ ಆದೇಶ ಹೊರಡಿಸಿತ್ತು.

ಹೈಕೋರ್ಟ್ ಶಿಫಾರಸಿನಲ್ಲೇನಿದೆ?: ‘ಕರ್ನಾಟಕ ಲೋಕಾಯುಕ್ತ ಕಾಯ್ದೆ-1984ರ ಸೆಕ್ಷನ್ 12(3)ರ ಅಡಿಯಲ್ಲಿ ಸಲ್ಲಿಸುವ ವರದಿಗಳನ್ನು ಸರ್ಕಾರ ಒಪ್ಪಿಕೊಳ್ಳುವುದನ್ನು ಕಡ್ಡಾಯಗೊಳಿಸಲು ಇದೇ ಕಾಯ್ದೆಯ ಸೆಕ್ಷನ್ 12(4)ಕ್ಕೆ ತಕ್ಷಣವೇ ತಿದ್ದುಪಡಿ ತರುವ ಅಗತ್ಯವಿದೆ’ ಎಂದು ಹೈಕೋರ್ಟ್ ಶಿಫಾರಸು ಮಾಡಿತ್ತು.

ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಹೆಚ್ಚಿನ ಸಿಬ್ಬಂದಿ ಒದಗಿಸುವುದು, ಲೋಕಾಯುಕ್ತಕ್ಕೆ ನಿಯೋಜಿತರಾದ ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಕನಿಷ್ಠ ಮೂರು ವರ್ಷಗಳವರೆಗೆ ವರ್ಗಾವಣೆ ಮಾಡದೇ ಇರುವುದು ಸೇರಿದಂತೆ ಐದು ಶಿಫಾರಸುಗಳು ಹೈಕೋರ್ಟ್ ತೀರ್ಪಿನಲ್ಲಿವೆ. ಅದರಲ್ಲಿ ಮೊದಲ ಅಂಶವೇ ಸೆಕ್ಷನ್ 12(4)ರ ತಿದ್ದುಪಡಿ. ಉಳಿದ ಶಿಫಾರಸುಗಳ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಹಲವು ಕ್ರಮ ಕೈಗೊಂಡಿದೆ.


‘ಲೋಕಾಯುಕ್ತ ಕಾಯ್ದೆಗೆ ತಿದ್ದುಪಡಿ ತರುವುದಕ್ಕೆ ಸಂಬಂಧಿಸಿದಂತೆ ಈವರೆಗೆ ಯಾವುದೇ ಪ್ರಕ್ರಿಯೆ ಆರಂಭವಾಗಿಲ್ಲ. ಈಗಿನ ಸ್ಥಿತಿಯಲ್ಲಿ ಕಾಯ್ದೆಗೆ ತಿದ್ದುಪಡಿ ತರುವ ಸಾಧ್ಯತೆ ಇಲ್ಲ’ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.


ಪ್ರಜಾವಾಣಿ ಪ್ರಜಾಧ್ವನಿ — ಜನರ ಮನದಾಳದ ಮಾತು

ಬಿಜೆಪಿ ಮುಂಬರುವ ವಿಧಾನಸಭೆ ಚುನಾವಣೆ ಮೇಲೆ ಕಣ್ಣಿಟ್ಟು ಬೆಳಗಾವಿ ಮೇಯರ್, ಉಪ ಮೇಯರ್ ಸ್ಥಾನವನ್ನು ಮರಾಠಿ ಭಾಷಿಗರಿಗೆ ಬಿಟ್ಟುಕೊಟ್ಟು, ಕನ್ನಡಿಗರಿಗೆ ಅನ್ಯಾಯ ಮಾಡಿದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ







ನಾಯಿ ನರಿಗಳು ಊಳಿಟ್ಟರೆ...

ಅಮೃತೇಶ್ವರಿ ಬಿ.

> ನಾಯಿಗಳು ಊಳಿಡುವುದಕ್ಕೆ ಕಾರಣಗಳು ಏನು? ಕೆಲವು ನಿರ್ದಿಷ್ಟ ಜಾತಿಯ ನಾಯಿಗಳು ಮಾತ್ರ ಊಳಿಡುತ್ತವೆಯೆ? ನರಿಗಳಿಗೂ ನಾಯಿಗಳೂ ಏನಾದರೂ ಸಂಬಂಧವಿದೆಯೆ?...

ಸಾವಿರಾರು ವರ್ಷಗಳ ಹಿಂದೆ ಮನುಷ್ಯನು ಪ್ರಾಣಿಗಳನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳುವುದನ್ನು ಕಲಿತ. ಸಾಕುಪ್ರಾಣಿಗಳು ಎಂದಾಗ ನೆನಪಾಗುವ ಮೊದಲ ಪ್ರಾಣಿಯೇ ನಾಯಿ. ಸುಮಾರು 20000ದಿಂದ 30000 ವರ್ಷಗಳ ಹಿಂದೆಯೇ ಮನುಷ್ಯನು ನಾಯಿಗಳನ್ನು ಸಾಕುತ್ತಿದ್ದ ಎನ್ನುವ ಅಂದಾಜಿದೆ. ಹಾಗಾಗಿ ನಾಯಿ ಹಾಗೂ ಮನುಷ್ಯನ ಸಂಬಂಧ ಬಹಳ ಗಾಢವಾದದ್ದು ಎನ್ನಬಹುದು. ನಮ್ಮ ಪೂರ್ವಜರು ಶತಮಾನಗಳಿಂದ ನಾಯಿಗಳೊಂದಿಗೆ ಒಡನಾಡಿದ್ದರಿಂದ ಅವುಗಳ ನಡವಳಿಕೆ ಹಾಗೂ ಚಲನವಲನಗಳಿಗೆ ಕಾರಣ ಹಾಗೂ ಅದರ ಸೂಚನೆಗಳನ್ನು ಅಂದಾಜಿಸಿಯೂ ನೋಡಿದ್ದಾರೆ. ರಾತ್ರಿ ವೇಳೆ ನಾಯಿಗಳು ಊಳಿಡುವುದನ್ನು ನಾವೆಲ್ಲರೂ ಸಾಮಾನ್ಯವಾಗಿ ಕೇಳಿರುತ್ತೇವೆ. ಅದಕ್ಕೆಲ್ಲೊ ದೆವ್ವಭೂತಗಳು ಕಾಣಿಸಿರಬೇಕು ಎನ್ನುವುದು ಒಂದು ಜನಪ್ರಿಯ ಕಲ್ಪನೆ. ಆದರೆ ಕಾಡಿನಲ್ಲಿ ನರಿ–ತೋಳಗಳು ಕೂಡ ಊಳಿಡುತ್ತವೆ. ಈ ನಾಯಿ ಹಾಗೂ ನರಿಗಳೆರಡೂ 'ಕ್ಯಾನಿಸ್ ಲೂಪಸ್' ಎನ್ನುವ ಒಂದೇ ಕುಟುಂಬದ ಪ್ರಾಣಿಗಳು. ಹಾಗಾದರೆ ಇವೆರಡರ ನಡವಳಿಕೆಯಲ್ಲಿ ಸಾಮ್ಯ ಇರಬೇಕಲ್ಲವೇ? ನರಿಗಳು ಊಳಿಟ್ಟಾಗ ನಾಯಿಗಳೂ ಪ್ರತಿಕ್ರಿಯಿಸಬಲ್ಲವೇ?

ಎರಡೂ ಪ್ರಾಣಿಗಳೂ ಊಳಿಡುವುದೂ ಮತ್ತೊಬ್ಬ ಸದಸ್ಯನೊಂದಿಗೆ ಸಂವಹಿಸುವುದಕ್ಕಾಗಿ ಮತ್ತು ತಮ್ಮ ಗಡಿಯನ್ನು ಖಾತರಿಪಡಿಸಿಕೊಂಡು ರಕ್ಷಿಸಿಕೊಳ್ಳುವುದಕ್ಕಾಗಿ ಎನ್ನುವುದು ಈಗ ತಿಳಿದಿರುವ ವಿಷಯ. ಆದರೆ ತನ್ನ ಸಂಬಂಧಿಕರಾದ ನರಿಗಳ ಕೂಗಿಗೆ ನಾಯಿಗಳು ಹೇಗೆ ಪ್ರತಿಕ್ರಿಯಿಸುತ್ತವೆ? ಎಲ್ಲ ನಾಯಿಗಳೂ ಏಕೆ ಊಳಿಡುವುದಿಲ್ಲ ಎನ್ನುವುದು ಸಂಕೀರ್ಣ ಹಾಗೂ ಗೊಂದಲದ ವಿಷಯಗಳಾಗಿದ್ದವು. ಹಿಮಪ್ರದೇಶಗಳಲ್ಲಿ ತೋಳ–ನರಿಗಳಂತೆಯೇ ಇರುವ ಒಂದು ಜಾತಿಯ ನಾಯಿಯನ್ನು ಸರಕುಗಳನ್ನು ಎಳೆದುಕೊಂಡು ಸಾಗಿಸಲು ಬಳಸಿಕೊಳ್ಳುತ್ತಾರೆ. ಅವು ಹೆಚ್ಚು ಊಳಿಡುತ್ತವೆ; ಮೇಲಿಂದ ಮೇಲೆ ಊಳಿಡುತ್ತಲೇ ಇರುತ್ತವೆ. ಅಂದರೆ ಅವು ಊಳಿಡುತ್ತಲೇ ಸಂಭಾಷಿಸುತ್ತವೆ. ಗಂಟೆ, ಸೈರನ್ ಅಥವಾ ಸಂಗೀತದ ಸದ್ದಿಗೂ ಕೂಗುತ್ತಲೇ ಪ್ರತಿಕ್ರಿಯಿಸುತ್ತವೆ. ಕೆಲವೊಂದು ನಾಯಿಗಳಂತೂ ಜೀವಮಾನವಿಡೀ ಕೂಗುವುದೇ ಇಲ್ಲ. 'ಕುಯ್ ಕುಯ್' ಎಂದೇ ಮಾತನಾಡಿಕೊಳ್ಳುತ್ತವೆ – ಅವುಗಳಿಗೆ ಕೂಗುವ ಸಾಮರ್ಥ್ಯ ಹಾಗೂ ಅಂಗವಿದ್ದರೂ. ಇದು ಕುತೂಹಲಕಾರಿ ವಿಷಯ. ಇದೋ ಯೋಟೋಸ್ ಲೊರ್ಯಾಂಡ್ ವಿಶ್ವವಿದ್ಯಾನಿಲಯದ ನಡವಳಿಕೆ ತಜ್ಞರಾದ ಥಾಮಸ್ ಫರಗೋ ಮತ್ತು ಫನ್ನಿ ಲೆಹೋಸ್ಕಿ ಈ ಪ್ರಶ್ನೆಗಳಿಗೆ ಉತ್ತರ ಹುಡುಕಿದ್ದಾರೆ. ಮೊದಲಿಗೆ ಥಾಮಸ್ ಹಾಗೂ ಲೆಹೋಸ್ಕಿ ಅವರು ನಾಯಿಗಳು ಊಳಿಡುವುದಕ್ಕೆ ಕಾರಣಗಳ ಏನು ಹಾಗೂ ಅದು ಕೆಲವು ನಿರ್ದಿಷ್ಟ ಜಾತಿಗೆ ಮಾತ್ರ ಸೀಮಿತವೇ ಅಥವಾ ಆನುವಂಶಿಕವಾಗಿ ನರಿಗಳೊಂದಿಗೆ ಏನಾದರೂ ಸಂಬಂಧವಿದೆಯೇ ಎಂದು ತಿಳಿಯಲೆತ್ನಿಸಿದ್ದಾರೆ. ನಾಯಿ ಹಾಗೂ ನರಿಗಳ ಅನುವಂಶಿಕ ಧಾತುಗಳೂ ಸುಮಾರು ಪ್ರತಿಶತ 90ರಷ್ಟು ಒಂದೇ ಆಗಿವೆಯೆಂತೆ. ಅರ್ಥಾತ್ ನಾಯಿ–ನರಿಗಳೆರಡೂ ಒಂದೇ ಕುಟುಂಬದ ಪ್ರಾಣಿಗಳಾಗಿವೆ ಎನ್ನುವುದು ಖಚಿತವಾಯಿತು.

ಇನ್ನು ಇವುಗಳು ನಡವಳಿಕೆಯ ಸಾಮ್ಯಗಳನ್ನು ಪರೀಕ್ಷಿಸಲು ಇವರು 68 ಶುದ್ಧ ತಳಿಯ ನಾಯಿಗಳನ್ನು ಪ್ರಯೋಗಾಲಯದಲ್ಲಿಟ್ಟು ನರಿಗಳ ರೆಕಾರ್ಡ್ ಮಾಡಿದ ಕೂಗನ್ನು ಕೇಳಿಸಿ ನೋಡಿದ್ದಾರೆ. ತಳಿಯಿಂದ ತಳಿಗೆ ಹೇಗೆ ವ್ಯತ್ಯಾಸವಾಗುತ್ತದೆ ಎಂದು ನೋಡಲು ವಿವಿಧ ತಳಿಗಳ ನಾಯಿಗಳನ್ನೂ ಸೇರಿಸಿಕೊಂಡಿದ್ದಾರೆ. ಫಲಿತಾಂಶಗಳ ಪ್ರಕಾರ ಹಳೆಯ ತಳಿಗಳ ನಾಯಿಗಳು ನರಿಗಳ ಊಳನ್ನು ಕೇಳಿ ಊಳಿಡತೊಡಗಿದವಂತೆ. ಜೊತೆಗೆ ಅವುಗಳ ವರ್ತನೆಯಲ್ಲಿ ಕೊಂಚ ಒತ್ತಡವೂ ಇದ್ದಂತೆ ತೋರಿತಂತೆ. ಎಲ್ಲಿ ತನ್ನ ಗಡಿಯನ್ನು ಮತ್ತೊಂದು ಪ್ರಾಣಿಯು ಪ್ರವೇಶಿಸಿಬಿಟ್ಟಾತು ಎನ್ನುವ ಭಯವೂ ಇದ್ದಿರಬೇಕು. ಆದರೆ ದೂರದ ಸಂಬಂಧಿಗಳೆಂದಿನಿಸುವ ಹೊಸ ತಳಿಯ ನಾಯಿಗಳು ನರಿಗಳ ಕೂಗನ್ನು ಕೇಳಿದಾಗ ತಾವೂ ಊಳಿಡದೇ ಬೊಗಳಲು ಶುರು ಮಾಡಿವೆ. ಹೊಸ ತಳಿಯ ನಾಯಿಗಳಿಗೂ ಕೂಗುವ ಸಾಮರ್ಥ್ಯವಿದ್ದರೂ ಅವು ಕೂಗದಿರುವುದಕ್ಕೆ ಕಾರಣ ಅವು ವಾಸಿಸುವ ವಾತಾವರಣವಿರಬಹುದು ಎನ್ನುತ್ತಾರೆ ಲೆಹೊಸ್ಕಿ.

ನರಿಗಳ ಊಳಿನಲ್ಲಿ ಅವು ಹೇಳಬಯಸುತ್ತಿದ್ದ ಮಾಹಿತಿಯನ್ನು ಹೊಸತಳಿಯ ನಾಯಿಗಳಿಗಿಂತ ಹಳೆಯ ತಳಿಯ ನಾಯಿಗಳು ಹೆಚ್ಚೆಚ್ಚು ಅರ್ಥಮಾಡಿಕೊಂಡು ಭಾವಿಸಬಲ್ಲವು ಎನ್ನುವುದು ವಿಜ್ಞಾನಿಗಳ ಅಭಿಪ್ರಾಯ. ಪರೀಕ್ಷೆಗೆ ಬಳಸಿದವುಗಳಲ್ಲಿ ವಿವಿಧ ತಳಿ, ವಯಸ್ಸು, ಮತ್ತು ಲಿಂಗದ ನಾಯಿಗಳೂ ಹಾಗೂ ಬಂಜೆತನವಿದ್ದ ನಾಯಿಗಳೂ ಇದ್ದುವು. ಇವುಗಳಲ್ಲಿ ಹೆಚ್ಚಾಗಿ ಐದು ವರ್ಷ ಮೇಲ್ಪಟ್ಟ ನಾಯಿಗಳು ಹೆಚ್ಚಾಗಿ ಪ್ರತಿಕ್ರಿಯಿಸಿವೆ. ಗಂಡುಪ್ರಾಣಿಗಳು ತನ್ನ ಸೀಮೆಯನ್ನು ಕಾಯ್ದುಕೊಳ್ಳುವುದರಲ್ಲಿ ಪ್ರಬಲರಾಗಿರುವುದೂ ಇದಕ್ಕೆ ಕಾರಣವಿರಬಹುದು. ಮತ್ತೊಂದು ಪ್ರಾಣಿ ತನ್ನ ಗಡಿಯನ್ನು ಪ್ರವೇಶಿಸುತ್ತಿದ್ದಂತೆಯೇ ಭಯ ಹಾಗೂ ರಕ್ಷಿಸಿಕೊಳ್ಳುವ ಸಲುವಾಗಿ ಗಂಡುನಾಯಿಗಳು ಒತ್ತಡಕ್ಕೊಳಗಾಗುತ್ತಿರಬಹುದು ಎಂಬುದು ಇವರ ಅಭಿಪ್ರಾಯ. ಗಂಡುನಾಯಿಗಳು ಒತ್ತಡಕ್ಕೊಳಗಾದಾಗ ಹಾರ್ಮೋನಿನಲ್ಲಿ ಬದಲಾವಣೆ ಆಗುತ್ತಿರುವುದನ್ನು ಗಮನಿಸಿದ್ದಾರೆ. ಬಂಜೆತನವಿದ್ದ ಗಂಡು ಹಾಗೂ ಹೆಣ್ಣುನಾಯಿಗಳನ್ನೂ ಪರೀಕ್ಷಿಸಿದ್ದರಿಂದ ಈ ಅಂಶ ಖಚಿತವಾಯಿತು ಎನ್ನುತ್ತಾರೆ, ಥಾಮಸ್ ಮತ್ತು ತಂಡದವರು.

ಆದರೆ ತಮಗೆ ಬೇಕಾದ ಗುಣಗಳು ಪ್ರಧಾನವಾಗಿ ಇರಬೇಕೆಂದು ಜೈವಿಕ ತಂತ್ರಜ್ಞಾನ ಹಾಗೂ ತಳಿವಿಜ್ಞಾನದ ಸಹಾಯದಿಂದ ಹೊಸಹೊಸ ತಳಿಯ ನಾಯಿಗಳನ್ನು ಸೃಷ್ಟಿಸಿರುವುದು ಗೊತ್ತೇ ಇದೆ. ಹೀಗೆ ಮನುಷ್ಯ ತನ್ನ ಅನುಕೂಲಕ್ಕೆ ಪಳಗಿಸಿ ಅಥವಾ ಸೃಷ್ಟಿಸಿಕೊಂಡ ತಳಿಯ ನಾಯಿಗಳು ಊಳಿಡುವ ಸಾಮರ್ಥ್ಯವಿದ್ದರೂ ಸಣ್ಣದಾಗಿ ಕುಯ್ ಕುಯ್ ಎನ್ನುತ್ತಲೋ ಅಥವಾ ಸಿಂಹಗಳಿಗಿಂತಲೂ ಭಯಂಕರವಾಗಿಯೋ ಬೊಗಳುತ್ತವೆ. ತನ್ನ ಸೋದರ ಸಂಬಂಧಿಗಳಾದ ನರಿಗಳು ಕೂಗಿದರೂ ಪಾಪ ಪ್ರತಿಕ್ರಿಯಿಸಲಾರವು ಕೆಲವು ನಾಯಿಗಳು. ಒಂದೇ ಕುಟುಂಬದ ಪ್ರಾಣಿಗಳಾದರೂ ಸಾಮಾಜಿಕ ವಾತಾವರಣ ಅವುಗಳನ್ನು ಹೇಗೆ ಬದಲಾಯಿಸಬಿಡಬಹುದು ಎನ್ನುವುದಕ್ಕೆ ಇದು ಸಾಕ್ಷಿ.ಅವುಗಳಿಗೆ ತನ್ನ ಗಡಿಯ ಗೊಡವೆಯೂ ಇರುವುದಿಲ್ಲ. ಇವಕ್ಕೆ ತನ್ನ ಯಾವ ಸಂಬಂಧಿ ತನ್ನನ್ನು ಕರೆಯುತ್ತಿದೆ ಎನ್ನುವುದು ಅರಿವಾಗುವುದೂ ಇಲ್ಲ. ಹಾಗಾದರೆ ನರಿಗಳು ಊಳಿಟ್ಟರೆ ಶುಭಸೂಚನೆ ಮತ್ತು ನಾಯಿಗಳು ಊಳಿಟ್ಟರೆ ಅಶುಭ ಎನ್ನುವುದು ಎಷ್ಟು ಸತ್ಯವೋ ತಿಳಿಯದು.

ಮೆಣಸಿನಕಾಯಿ ಏಕೆ ವಕ್ರ?



ಕೊಳ್ಳೇಗಾಲ ಶರ್ಮ

ನೆಟ್ಟಗೆ ನೀಳವಾಗಿರುವ ಒಣಮೆಣಸಿನಕಾಯಿ ನೋಡಿದ್ದೀರಾ? ಇಲ್ಲ ತಾನೇ? ಇದೇಕೆ ಹೀಗೆ ಎಂಬ ಪ್ರಶ್ನೆ ಬಂದಿದ್ದರೆ, ಅದು ಲೋಕದ ರೀತಿ. ಅದು ಹಾಗೆಯೇ ಇರುವುದು ಎಂದು ನಾವೆಲ್ಲ ನಂಬುತ್ತೇವೆ. ಆದರೆ ವಿಜ್ಞಾನಿಗಳಿಗೆ ಹಾಗಲ್ಲ. ಮೆಣಸಿನ ಅಂಕು–ಡೊಂಕಿನಲ್ಲಿಯೂ ಒಂದು ವಿನ್ಯಾಸ ಇದೆ. ಅದರ ವಿಚಿತ್ರ ಆಕಾರಕ್ಕೆ ಕೆಲವು ಸಾಮಾನ್ಯ ನಿಯಮಗಳು ಕಾರಣವಿರಬಹುದು ಎಂದೇ ನಂಬುತ್ತಾರೆ. ಮೆಣಸಿನಕಾಯಿಯ ಮುರುಟು ಆಕಾರವಷ್ಟೆ ಅಲ್ಲ, ಅದರಂತೆಯೇ ಇರುವ ಇತರೆ ಆಕಾರಗಳಿಗೂ ಒಂದೇ ಸಾಮಾನ್ಯ ಕಾರಣವಿರಬಹುದಂತೆ. ಹಾಗೆಂದು ಚೀನಾದ ಶಾಂಘಾಯಿಯಲ್ಲಿರುವ ಫ್ಯೂಡಾಯಿ ವಿಶ್ವವಿದ್ಯಾನಿಲಯದ ವಾಯುತಂತ್ರ ಹಾಗೂ ವಾಯುಚಲನೆಯ ವಿಜ್ಞಾನಿ ಟಿಂಗ್ ವಾಂಗ್ ಮತ್ತು ಸಂಗಡಿಗರು ಪತ್ತೆ ಮಾಡಿದ್ದಾರೆ ಎಂದು 'ಫಿಸಿಕಲ್ ರಿವ್ಯೂ ಲೆಟರ್ಸ್' ಪತ್ರಿಕೆ ಮೊನ್ನೆ ವರದಿ ಮಾಡಿದೆ.

ಮೆಣಸಿನಕಾಯಿಯ ಗಣಿತವೇ? ಇದೇನು ಆಶ್ಚರ್ಯ ಎನ್ನಬೇಡಿ. ಈ ಲೋಕವೇ ಬೆರಗುಗೊಳಿಸುವಂಥದ್ದು. ಅದರಲ್ಲಿಯೂ ಜೀವಿಗಳಲ್ಲಿನ ವೈವಿಧ್ಯ ವಿಶೇಷವಾದದ್ದು. ಒಂದೇ ಬಗೆಯ ಜೀವಿಯಲ್ಲಿಯೂ ನೂರೆಂಟು ವೈವಿಧ್ಯ ಇರುತ್ತದೆ. ಗಾತ್ರ, ಆಕಾರ, ಬಣ್ಣ ಇವೆಲ್ಲವುಗಳಲ್ಲಿಯೂ ಯಾವುದೆರಡು ಜೀವಿಯೂ, ವ್ಯಕ್ತಿಯೂ ಸಮಾನರಾಗಿದ್ದು ಕಂಡಿಲ್ಲ. ಇನ್ನು ಒಣಮೆಣಸಿನ ಕಾಯಿಯ ಕಥೆ ಕೇಳಬೇಕೇ? ಪ್ರತಿಯೊಂದು ಕಾಯಿಯ ಉದ್ದವೂ ಬೇರೆ, ಬೇರೆ. ಅವು ಬಾಗಿರುವ ರೀತಿಯೂ ಬೇರೆಯೇ. ಇನ್ನು ಅವುಗಳ ಮೇಲಿರುವ ಉಬ್ಬುತಗ್ಗುಗಳು. ಅವುಗಳೂ ಒಂದೇ ತೆರನಾಗಿರವು.

ಭೌತವಿಜ್ಞಾನಿಗಳು ಪ್ರಪಂಚದ ಎಲ್ಲ ವಿದ್ಯಮಾನಗಳಿಗೂ ಯಾವುದಾದರೂ ಸಾಮಾನ್ಯ ನಿಯಮವಿರುತ್ತದೆ ಎಂದು ನಂಬುತ್ತಾರೆ. ಸೂರ್ಯಮಂಡಲದ ಗ್ರಹಗಳ ಅಡ್ಡಾದಿಡ್ಡಿ ಎನ್ನಿಸುವ ಚಲನೆಯಲ್ಲಿಯೂ ಒಂದು ಸಾಮಾನ್ಯ ನಿಯಮವನ್ನು ಪತ್ತೆ ಮಾಡಿದ್ದರು. ಅದುವೇ ಇಂದು ದೂರ, ದೂರದ ಗ್ರಹಗಳಿಗೆ ಶೋಧನೌಕೆಗಳನ್ನು ಕಳಿಸಲು ನೆರವಾಗಿದೆ. ಹೀಗೆಯೇ ಜೀವಜಗತ್ತಿನ ವಿದ್ಯಮಾನಗಳಲ್ಲಿಯೂ ಒಂದು ಭೌತನಿಯಮ ಇರಬೇಕು ಎನ್ನುವುದು ಇವರ ತರ್ಕ. ಮೆಣಸಿನಕಾಯಿಯ ಮುರುಟುವಿಕೆಗೂ ಇಂತಹುದೇ ನಿಯಮವಿರಬೇಕು ಎಂಬ ತರ್ಕದಿಂದ ಟಿಂಗ್ ವಾಂಗ್ ತಂಡ ಈ ಅಧ್ಯಯನವನ್ನು ಕೈಗೊಂಡಿತು.

ಮೆಣಸಿನಕಾಯಿ ಪುಟ್ಟದಾಗಿದ್ದಾಗ, ಅಂದರೆ ನಾವು ಚೋಟುಮೆಣಸಿನಕಾಯಿ ಎನ್ನುವ ಸ್ಥಿತಿಯಲ್ಲಿ, ಆಕಾರ ನೆಟ್ಟಗೆ, ಒಂದು ಶಂಖುವಿನಾಕಾರದಲ್ಲಿ ಇರುತ್ತದಷ್ಟೆ. ಆದರೆ ಅದು ಉದ್ದುದ್ದವಾಗಿ ಬೆಳೆಯುತ್ತಾ ಹೋದಂತೆಲ್ಲ, ತುದಿ ಬಾಗಿ ವಕ್ರವಾಗುತ್ತದೆ. ಗಿಡದಿಂದ ಕಿತ್ತು ಒಣಗಿಸುತ್ತಿದ್ದಂತೆ, ಮೈಯೆಲ್ಲಾ ಸುಕ್ಕು, ಸುಕ್ಕಾಗುತ್ತದೆ. ಗುಳಿ ಬೀಳುತ್ತದೆ. ಹೀಗೆ ಮೆಣಸಿನಕಾಯಿ ಮುರುಟುವುದು ಏಕೆ? ಯಾವ ಬಲ ಅವನ್ನು ಮುರುಟಿಸುತ್ತವೆ? ಒಣಗಿದಾಗ ನೀರು ಕಡಿಮೆಯಾಗುತ್ತದೆಯೇನೋ ನಿಜ. ಆದರೆ ಹಾಗಿದ್ದೂ ಅದು ಹಾಗೆಯೇ, ಹಪ್ಪಳ ಒಣಗಿದಂತೆ ಸುಕ್ಕಾಗದೆ, ನಯವಾಗಿಯೇ ಇರಬಹುದಿತ್ತಲ್ಲ?

ಈ ಎಲ್ಲ ಪ್ರಶ್ನೆಗಳ ಬೆನ್ನು ಹತ್ತಿದ ಟಿಂಗ್ ವಾಂಗ್ ತಂಡ



ಮೆಣಸಿನಕಾಯಿ ಮುರುಟಿ, ಸುಕ್ಕಾಗುವುದಕ್ಕೆ ಅದರ ವಕ್ರ ಬೆಳವಣಿಗೆಯೇ ಕಾರಣವಿರಬಹುದು ಎಂದು ತರ್ಕಿಸಿ ಲೆಕ್ಕಾಚಾರ ಮಾಡಿದ್ದಾರೆ. ಮೆಣಸಿನಕಾಯಿಯನ್ನು ಒಂದು ಟೋರಾಯಿಡ್ ಆಕಾರ ಎಂದು ಪರಿಗಣಿಸಿ ಲೆಕ್ಕಾಚಾರ ಮಾಡಿದ್ದಾರೆ. 'ಟೋರಾಯಿಡ್' ಎಂದರೆ ಕೋಡುಬಳೆಯಂತಹ ಆಕಾರ. ಆದರೆ ಮೃದುವಾದ, ಇನ್ನೂ ಹುರಿಯದ ಕೋಡುಬಳೆ ಹಿಟ್ಟು ಎನ್ನಬಹುದು. ಮೈಯೆಲ್ಲ ನಯವಾಗಿರುತ್ತದೆ. ಈ ಕೋಡುಬಳೆ ಹಿಟ್ಟಿನ ಒಂದು ತುಂಡು ದೊಡ್ಡದಾಗುತ್ತ ಬಂದಂತೆ ಅದು ಒಣಗಿದರೆ ಮೈಯಲ್ಲಿ ಸುಕ್ಕು ಹೇಗೆ ಆಗುತ್ತದೆ ಎಂದು ಲೆಕ್ಕ ಹಾಕಬಹುದು. ಗಣಿತಜ್ಞರು ಇದಕ್ಕಾಗಿ ಕೆಲವು ಸೂತ್ರಗಳನ್ನು ಬಳಸುತ್ತಾರೆ. ಅದರಲ್ಲಿ, ಕೋಡುಬಳೆಯ ದಪ್ಪ, ಅದರ ವ್ಯಾಸ, ಹಿಟ್ಟಿನ ಮೃದುತ್ವ ಇವೆಲ್ಲವೂ ಮುಖ್ಯವಾಗುತ್ತವೆ.

ಬಳೆಯ ದಪ್ಪ ಎಂದರೆ ಇನ್ನೇನಲ್ಲ, ಅದರ ವಕ್ರತೆಯ ಅಳತೆ ಎನ್ನಬಹುದು. ದಪ್ಪವಾಗುತ್ತ ಹೋದಂತೆಲ್ಲ ಮೈಯ ವಕ್ರತೆ ಹೆಚ್ಚಾಗುತ್ತದೆ; ಸಣ್ಣವಾದಂತೆ ವಕ್ರತೆ ಕಡಿಮೆಯಾಗುತ್ತದೆ. ಮೇಲ್ಮೈ ಕೂಡ ಚಿಕ್ಕದಾಗುತ್ತದೆ. ಹಿಟ್ಟು ಎಷ್ಟು ಬೇಗ ಒಣಗುತ್ತದೆ ಎನ್ನುವುದನ್ನು ಇದು ಪ್ರಭಾವಿಸುತ್ತದಷ್ಟೆ.

ಹೀಗೆ ಟೋರಾಯಿಡ್ಡಿನ ಮೈಯ ಆಕಾರವನ್ನು ಪ್ರಭಾವಿಸುವ ಅಂಶಗಳನ್ನು ಮನದಲ್ಲಿಟ್ಟುಕೊಂಡು, ಅದು ಒಣಗಿದ ಹಾಗೆ ಆಕಾರ ಹೇಗೆ ಬದಲಾಗಬಹುದು ಎಂದು ಗಣಕ ಯಂತ್ರದ ಮೂಲಕ ಲೆಕ್ಕಿಸಿದ್ದಾರೆ. ಇಡೀ ಮೈಯನ್ನು ಪುಟ್ಟ, ಪುಟ್ಟ ಅಂಶಗಳನ್ನಾಗಿ ಪರಿಗಣಿಸಿ, ಅವುಗಳು ಒಂದೊಂದರದ್ದೂ ವಕ್ರತೆ, ಉದ್ದ, ದಪ್ಪ, ಇತರೆ ಒತ್ತಡಗಳನ್ನೆಲ್ಲ ಲೆಕ್ಕ ಹಾಕಿದ್ದಾರೆ. ಅವೆಲ್ಲವುಗಳಲ್ಲಿ ಆಗುವ ಬದಲಾವಣೆಯ ಒಟ್ಟಾರೆ ಫಲಗಳು ಇಡೀ ಟೋರಾಯಿಡ್ಡಿನ ಆಕಾರವನ್ನು ಹೇಗೆ ಬದಲಿಸುತ್ತವೆ ಎಂದು ಗಮನಿಸಿದ್ದಾರೆ. ಕಂಪ್ಯೂಟರಿಗೆ ಅಂತಹ ಟೋರಾಯಿಡ್ಡುಗಳ ಚಿತ್ರವನ್ನು ರೂಪಿಸಲು ಆದೇಶ ನೀಡಿದ್ದಾರೆ. ಟೋರಾಯಿಡ್ಡುಗಳು ಒಣಗುತ್ತಿದ್ದ ಹಾಗೆ ಅವುಗಳ ಮೈ ಕೂಡ ಸುಕ್ಕಾಗತೊಡಗಿತಂತೆ. ಆದರೆ ಆ ಸುಕ್ಕು ಹೇಗೆ ಆಗುತ್ತದೆ? ಎಷ್ಟು ಗುಳಿಗಳು ಬೀಳುತ್ತವೆ? ಯಾವಾಗ ದೊಡ್ಡ ಗುಳಿಗಳು ಬೀಳುತ್ತವೆ? ಯಾವಾಗ ಸಣ್ಣವು? ಇವನ್ನೆಲ್ಲ ಲೆಕ್ಕ ಹಾಕಿದಾಗ, ಒಂದು ವಿಷಯ ಗಮನಕ್ಕೆ ಬಂದಿತು. ಇದು ಆ ಟೋರಾಯಿಡ್ಡಿನ ಉದ್ದವನ್ನಾಗಲಿ, ದಪ್ಪವನ್ನಾಗಲಿ ಅವಲಂಬಿಸಿರುವುದಿಲ್ಲವಂತೆ. ಏನಿದ್ದರೂ, ಆ ಟೋರಾಯಿಡ್ಡು ಎಷ್ಟು ಬಾಗಿದೆ, ಎಷ್ಟು ಮೃದುವಾಗಿದೆ ಎನ್ನುವುದಷ್ಟೆ ಅದರ ಮೇಲಿನ ಸುಕ್ಕುಗಳಿಗೆ ಕಾರಣವಂತೆ.

ಈ ನಿಯಮಗಳು ಕೇವಲ ಮೆಣಸಿನಕಾಯಿಯೊಂದಕ್ಕಷ್ಟೆ ಅಲ್ಲ. ಬೆಳ್ಳುಳ್ಳಿಯ ಸಿಪ್ಪೆಯ ಸುಕ್ಕುಗಳಿಗೂ, ಪುಟ್ಟದೊಂದು ಹುಳುವಿನ ಮೈ ಮೇಲಿನ ಸುಕ್ಕುಗಳಿಗೂ ಇಂತಹುದೇ ನಿಯಮಗಳು ಒಪ್ಪುತ್ತವೆ ಎಂದು ಟಿಂಗ್ ವಾಂಗ್ ತಂಡ ತಿಳಿಸಿದೆ. ಹೀಗೆ ಟೋರಾಯಿಡ್ಡಿನಂತಹ ಉದ್ದನೆಯ, ವಕ್ರದೇಹ ಇರುವ ಜೀವಿಗಳಲ್ಲಿ ಸುಕ್ಕುಗಳೇಕಾಗುತ್ತವೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ನೆರವಾಗುತ್ತದೆ ಎನ್ನುತ್ತಾರೆ, ಟಿಂಗ್ ವಾಂಗ್.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಎಸ್ಸೆಸ್ಸೆಲ್ಸಿ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

19) ವಿಟೋ ಅಧಿಕಾರ ಎಂದರೇನು?

ಉತ್ತರ: ಭದ್ರತಾ ಮಂಡಳಿಯ ಕಾಯಂ ಸದಸ್ಯರಿಗೆ ನಿಷೇಧಾತ್ಮಕವಾಗಿ ಮತ ಚಲಾಯಿಸುವ ಅಧಿಕಾರವಿದೆ ಅದನ್ನು ವಿಟೋ ಅಧಿಕಾರ ಎನ್ನುವರು.

2) ವಿಶ್ವ ಸಂಸ್ಥೆಯ ಎರಡು ಉದ್ದೇಶಗಳನ್ನು ನಮೂದಿಸಿ.

ಉತ್ತರ:- ವಿಶ್ವ ಸಂಸ್ಥೆಯ ಎರಡು ಉದ್ದೇಶಗಳು:

(1) ಅಂತರರಾಷ್ಟ್ರೀಯ ಸುಭದ್ರತೆಯನ್ನು ಕಾಪಾಡುವುದು.

(2) ಮಾನವ ಹಕ್ಕುಗಳ ಸಂರಕ್ಷಣೆ.

20) ಭಾರತದಲ್ಲಿ 2011ರ ಜನಗಣತಿಯ ಪ್ರಕಾರ ಎಷ್ಟು ಜನರಿದ್ದಾರೆ?

ಉತ್ತರ:- ಭಾರತವು 2011ರ ಜನಗಣತಿಯ ಪ್ರಕಾರ 121 ಕೋಟಿ ಜನಸಂಖ್ಯೆಯನ್ನು ಒಳಗೊಂಡಿದೆ. ಇದು ಪ್ರಪಂಚದ ಒಟ್ಟು ಜನಸಂಖ್ಯೆಯ ಶೇ 17.5 ರಷ್ಟಿದೆ.

21) ಅನಿಬೆಸೆಂಟ್ ಅವರು 1916ರ ಆರಂಭಿಸಿದ ಚಳವಳಿ ಯಾವುದು?

ಉತ್ತರ:- ಅನಿಬೆಸೆಂಟ್ ಅವರು 1916ರಲ್ಲಿ ಮದರಾಸು ಪ್ರಾಂತ್ಯದಲ್ಲಿ ಹೋಮ್ ರೂಲ್‌ಲೀಗ್‌ನ್ನು ಪ್ರಾರಂಭಿಸಿದರು.

22) ಯಾವ ರಾಜ್ಯದಲ್ಲಿ ಅತಿ ಹೆಚ್ಚು ಅರಣ್ಯ ಕ್ಷೇತ್ರವಿದೆ?

ಉತ್ತರ:- ಮಧ್ಯಪ್ರದೇಶ

23) ಇವರು ಯಾರು? ಯಾಕೆ ಪ್ರಸಿದ್ಧರು?



ಉತ್ತರ:- ಸ್ವಾಮಿ ವಿವೇಕಾನಂದ, ಇವರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಭಾರತದ ಧರ್ಮ ಸಂಸ್ಕೃತಿಯನ್ನು ಎತ್ತಿ ಹಿಡಿದಿದ್ದರು. ರಾಮಕೃಷ್ಣಾಶ್ರಮವನ್ನು ಸ್ಥಾಪಿಸಿದರು.

24) ಭಾಕ್ರಾನಂಗಲ್ ಯೋಜನೆ ಯಾವೆಲ್ಲಾ ರಾಜ್ಯಗಳ ಸಂಯುಕ್ತ ಯೋಜನೆಯಾಗಿದೆ?

ಉತ್ತರ:- ಪಂಜಾಬ್, ಹರಿಯಾಣ ಮತ್ತು ರಾಜಸ್ಥಾನ

25) ದಾಮೋದರ ನದಿ ಕಣಿವೆ ಯೋಜನೆಯನ್ನು ಯಾವೆಲ್ಲಾ ರಾಜ್ಯಗಳು ಸೇರಿ ಮಾಡಿವೆ?.

ಉತ್ತರ:- ಇದು ಬಿಹಾರ ಮತ್ತು ಪಶ್ಚಿಮ ಬಂಗಾಳ ರಾಜ್ಯ ಸರ್ಕಾರಗಳ ಸಂಯೋಜಿತ ಯೋಜನೆಯಾಗಿದೆ.

26) ಅರಣ್ಯನಾಶಕ್ಕೆ ಮುಖ್ಯ ಕಾರಣಗಳು ಯಾವುವು?

ಉತ್ತರ:- ವ್ಯವಸಾಯದ ವಿಸ್ತರಣೆ, ಹೈನುಗಾರಿಕೆ, ರಸ್ತೆಗಳು, ರೈಲು ಮಾರ್ಗಗಳು, ನೀರಾವರಿ ಯೋಜನೆಗಳ ನಿರ್ಮಾಣ, ಕಾಡ್ಗಿಚ್ಚು, ಗಣಿಗಾರಿಕೆ ಮುಂತಾದವುಗಳು ಅರಣ್ಯ ನಾಶಕ್ಕೆ ಮುಖ್ಯ ಕಾರಣಗಳಾಗಿವೆ.

27) ಯಾವ ಸಂಸ್ಥೆಯು ಆಲಿಘರ್ ಮುಸ್ಲಿಂ ವಿಶ್ವವಿದ್ಯಾಲಯವಾಗಿ ಬೆಳೆಯಿತು?

ಉತ್ತರ:- ಆಂಗ್ಲೋ-ಓರಿಯಂಟಲ್ ಕಾಲೇಜು ಎಂದು ಆರಂಭವಾದ ಕಾಲೇಜು ಮುಂದೆ ಆಲಿಘರ್ ಮುಸ್ಲಿಂ ವಿಶ್ವವಿದ್ಯಾಲಯವಾಗಿ ಬೆಳೆಯಿತು.

28) ಧಾರವಾಡದ ಕಲೆಕ್ಟರ್ ಮತ್ತು ಪೊಲಿಟಿಕಲ್ ಏಜೆಂಟನಾಗಿದ್ದ ಥ್ಯಾಕರೆ ಏನು ಮಾಡಿದ?

ಉತ್ತರ:- ಧಾರವಾಡದ ಕಲೆಕ್ಟರ್ ಮತ್ತು ಪೊಲಿಟಿಕಲ್ ಏಜೆಂಟನಾಗಿದ್ದ ಥ್ಯಾಕರೆ ಆತ ಬಾಂಬೆಯ ಗವರ್ನರನಿಗೆ ಕಿತ್ತೂರಿನ ದತ್ತಕದ ಬಗ್ಗೆ ವರದಿಯನ್ನು ಸಲ್ಲಿಸಿ, ದತ್ತು ಮಕ್ಕಳಿಗೆ ಹಕ್ಕನ್ನು ನೀಡುವುದನ್ನು ನಿರಾಕರಿಸಿ ಕಿತ್ತೂರಿನ ಆಡಳಿತವನ್ನು ವಶಪಡಿಸಿಕೊಳ್ಳಲು ಯತ್ನಿಸಿದನು.

29) ನಾಲ್ವಡಿ ಕೃಷ್ಣರಾಜ ಒಡೆಯರು ಆಶ್ರಯದಲ್ಲಿದ್ದ ವಿದ್ವಾಂಸರು ಯಾರು?

ಉತ್ತರ: ಶ್ಯಾಮಾಶಾಸ್ತ್ರಿ, ಎಂ. ಹಿರಿಯಣ್ಣ, ವೀಣೆ ಶೇಷಣ್ಣ, ಸಾಂಬಯ್ಯ, ಬಿಡಾರಂ ಕೃಷ್ಣಪ್ಪ, ಮುತ್ತಯ್ಯ ಭಾಗವತರ್, ವಾಸುದೇವಾಚಾರ್ಯ, ಟಿ. ಚೌಡಯ್ಯ, ಮುಂತಾದವರು

5) ಬ್ರಹ್ಮಸಮಾಜದ ಪ್ರಮುಖ ಅಂಶಗಳು ಯಾವುವು?

ಉತ್ತರ:- ಬ್ರಹ್ಮಸಮಾಜದ ಪ್ರಮುಖ ಅಂಶಗಳೆಂದರೆ

1. ಏಕದೇವತಾರಾಧನೆಯನ್ನು ಪ್ರತಿಪಾದಿಸಿದರು.
2. ಅರ್ಥಹೀನ ಆಚರಣೆಗಳನ್ನು ವಿರೋಧಿಸಿದರು.
3. ಪ್ರತಿಯೊಬ್ಬ ವ್ಯಕ್ತಿಯು ಘನತೆಯಿಂದ ಬಾಳಬೇಕು ಮತ್ತು ಯಾವ ನಿಯಮ ಮತ್ತು ಆಚರಣೆಗಳು ಇದಕ್ಕೆ ಕೇಡುಂಟು ಮಾಡಬಾರದೆನ್ನುವುದು ಬ್ರಹ್ಮಸಮಾಜದ ನಿಲುವಾಗಿತ್ತು.
4. ಬಹುಪತ್ನಿತ್ವ ಪದ್ಧತಿಯನ್ನು ವಿರೋಧಿಸುವ ಮೂಲಕ ಸ್ತ್ರೀಯರಿಗೆ ಸಮಾನತೆ ದೊರಕಬೇಕೆಂದು ಬ್ರಹ್ಮಸಮಾಜವು ಆಶಿಸಿತು. ವಿಶೇಷವಾಗಿ ವಿಧವೆಯರ ದುಃಸ್ಥಿತಿಯನ್ನು ದೂರ ಮಾಡುವ ಸಲುವಾಗಿ ಅವರಿಗೆ ಆಸ್ತಿಯಲ್ಲಿ ಪಾಲು ಇರಬೇಕೆಂದು ಪ್ರತಿಪಾದಿಸಿತು. ಬ್ರಹ್ಮಸಮಾಜವು ಬಾಲ್ಯವಿವಾಹವನ್ನು ವಿರೋಧಿಸಿತು.

30) ಯಾವ ವರ್ಷ ಬ್ರಿಟಿಷರು ಸ್ವಾಮಿ ಅಪರಂಪಾರನ್ನು ಸೆರೆಹಿಡಿದರು ಮತ್ತು ಎಲ್ಲಿಗೆ ಕಳುಹಿಸಿದರು?.

ಉತ್ತರ:- ಬಂಡಾಯದ ಮುಖಂಡನಾದ ಸ್ವಾಮಿ ಅಪರಂಪಾರನ್ನು 1835ರಲ್ಲಿ ಬ್ರಿಟಿಷರು ಸೆರೆಹಿಡಿದು ಬೆಂಗಳೂರಿಗೆ ರವಾನಿಸಿದರು.

31) ದಯಾನಂದ ಸರಸ್ವತಿಯವರು ಎಲ್ಲಿ ಆರ್ಯಸಮಾಜದ ಕೇಂದ್ರ ಕಚೇರಿಯನ್ನು ತೆರೆದರು?.

ಉತ್ತರ:- 1877ರಲ್ಲಿ ಆರ್ಯಸಮಾಜದ ಕೇಂದ್ರ ಕಚೇರಿಯನ್ನು ಲಾಹೋರಿನಲ್ಲಿ ತೆರೆದರು.

32) ಅನಿಬೆಸೆಂಟ್ ಅವರು ಆರಂಭಿಸಿದ ಪತ್ರಿಕೆಗಳು ಯಾವುದು?

ಉತ್ತರ:- 'ನ್ಯೂ ಇಂಡಿಯಾ' ಮತ್ತು 'ಕಾಮನ್ ವ್ಹೀಲ್' ಎಂಬ ಪತ್ರಿಕೆಗಳನ್ನು ಪ್ರಾರಂಭಿಸಿದರು.

33) ಭಾರತದಲ್ಲಿ ಎಷ್ಟು ಜೀವಿ ಸಂರಕ್ಷಣಾ (Biosphere Reserves) ವಲಯಗಳಿವೆ? ಪ್ರಮುಖವಾದವುಗಳನ್ನು ಹೆಸರಿಸಿ.

ಉತ್ತರ:- ಭಾರತವು ಸಸ್ಯ ಸಮೃದ್ಧತೆಯ ಜೊತೆಗೆ ಪ್ರಾಣಿ ಸಂಪತ್ತಿನ ವೈವಿಧ್ಯತೆಯನ್ನು ಒಳಗೊಂಡಿದೆ. ಈ ಜೈವಿಕ ವ್ಯವಸ್ಥೆಗಳನ್ನು ಕಾಪಾಡಲು ದೇಶದಲ್ಲಿ 18 ಜೈವಿಕ ವಲಯಗಳನ್ನು ಸಂರಕ್ಷಿಸಲಾಗುತ್ತಿದೆ. ಅವುಗಳೆಂದರೆ ನೀಲಗಿರಿ, ನಂದಾದೇವಿ, ನೋಕ್ರೆಕ್, ಗ್ರೇಟ್‌ನಿಕೊಬಾರ್, ಮನ್ನಾರ್ ಅಖಾತ, ಮನಾಸ್ ಸುಂದರಬನ, ಸಿಮಿಲಿಪಾಲ್, ಕಾಂಚನಗಂಗಾ, ಅಮರಕಂಟಕ, ಶೀತ ಮರುಭೂಮಿ (ಹಿಮಾಚಲ ಪ್ರದೇಶ) ಪನ್ನಾ ಮತ್ತು ಶೇಷಾಚಲಂ ನೀಲಗಿರಿ ಸಂರಕ್ಷಣಾ ವಲಯ.

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಭೌತವಿಜ್ಞಾನ

ಪಿಯುಸಿ

53) ಯಾವುದನ್ನು ಉತ್ಸರ್ಜನ ರೇಖಾ ರೋಹಿತವೆಂದು ಕರೆಯುತ್ತಾರೆ?

ಉತ್ತರ:- ಕಡಿಮೆ ಒತ್ತಡದಲ್ಲಿ ಪರಮಾಣುವಿನ ಅನಿಲ ಅಥವಾ ಆವಿಯ ಮೂಲಕ ವಿದ್ಯುತ್‌ನ್ನು ಸಾಮಾನ್ಯವಾಗಿ ಹರಿಸಿದಾಗ ಅದು ಉತ್ತೇಜನಗೊಳ್ಳುತ್ತದೆ ಮತ್ತು ಅದು ಹೊರಸೂಸುವ ವಿಕಿರಣವು ಕೆಲವೇ ಕೆಲವು ವಿಶೇಷವಾದ, ನಿರ್ದಿಷ್ಟವಾದ ತರಂಗಾಂತರಗಳ ರೋಹಿತವನ್ನು ಹೊಂದಿರುತ್ತದೆ. ಈ ತರಹದ ರೋಹಿತವನ್ನು ಉತ್ಸರ್ಜನ ರೇಖಾ ರೋಹಿತವೆಂದು ಕರೆಯುತ್ತಾರೆ.

54) ಯಾವುದನ್ನು ಅನಿಲ ವಸ್ತುವಿನ ಅಪಶೋಷಣ ರೋಹಿತವೆಂದು ಕರೆಯುತ್ತಾರೆ.?

ಉತ್ತರ:- ಯಾವಾಗ ಬಿಳಿಯ ಬೆಳಕು, ಯಾವುದಾದರೂ ಒಂದು ಅನಿಲದ ಮೂಲಕ ಹಾದು ಹೋಗುವುದೋ ಆಗ, ನಾವು ರವಾನಿಸಲ್ಪಟ್ಟ ಬೆಳಕನ್ನು, ರೋಹಿತಮಾಪಕ ಉಪಯೋಗಿಸಿ ವಿಶ್ಲೇಷಿಸಿದರೆ ನಮಗೆ ಕೆಲವು ಕಪ್ಪು ಗೆರೆಗಳು ಕಂಡು ಬರುತ್ತವೆ. ಈ ಕಪ್ಪು ಗೆರೆಗಳು ನಿಖರವಾಗಿ ಅನಿಲದ ರೇಖಾ ಉತ್ಸರ್ಜನ ರೋಹಿತದಲ್ಲಿ ಕಂಡು ಬಂದಿದ್ದ ತರಂಗಾಂತರಗಳನ್ನೇ ಪ್ರತಿನಿಧಿಸುತ್ತವೆ. ಇದನ್ನು ಅನಿಲ ವಸ್ತುವಿನ ಅಪಶೋಷಣ ರೋಹಿತವೆಂದು ಕರೆಯುತ್ತಾರೆ.

55) ಯಾವುದನ್ನು ಬಾಮರ್ ಶ್ರೇಣಿ ಎಂದು ಕರೆಯುತ್ತಾರೆ?.

ಉತ್ತರ:- ಪ್ರಥಮ ನೋಟದಲ್ಲಿ, ರೋಹಿತವನ್ನು ವೀಕ್ಷಿಸಿದಾಗ ರೋಹಿತದ ಗೆರೆಗಳಲ್ಲಿ ಯಾವುದೇ ತರಹದ ಕ್ರಮಬದ್ಧತೆ ಅಥವಾ ಶ್ರೇಣಿ ಕಂಡುಬರುವುದಿಲ್ಲ. ಆದರೆ ಹೈಡ್ರೋಜನ್ ರೋಹಿತದ ನಿರ್ದಿಷ್ಟವಾದ ಗಣಗಳಲ್ಲಿನ ಗೆರೆಗಳ ನಡುವಿನ ಸ್ಥಳವು ಕ್ರಮಬದ್ಧವಾಗಿ ಕಡಿಮೆಯಾಗುತ್ತಿರುತ್ತದೆ. ಇಂತಹ ಪ್ರತಿಯೊಂದು ಗುಂಪಿಗೂ ರೋಹಿತ ಶ್ರೇಣಿ ಎಂದು ಕರೆಯುತ್ತಾರೆ. 1885ರಲ್ಲಿ ಇಂತಹ ಮೊದಲನೆಯ ಶ್ರೇಣಿಯನ್ನು ಸ್ವಿಡಿಷ್ ಶಾಲೆಯ ಅಧ್ಯಾಪಕರಾದ ಜಾನ್ ಜೇಕಬ್ ಬಾಮರ್‌ರವರು ಹೈಡ್ರೋಜನ್ ರೋಹಿತವನ್ನು ಗೋಚರ ವಲಯದಲ್ಲಿ ವೀಕ್ಷಿಸಿದರು. ಈ ಶ್ರೇಣಿಯನ್ನು ಬಾಮರ್ ಶ್ರೇಣಿ ಎಂದು ಕರೆಯುತ್ತಾರೆ


55) ಬೋರ್ ಎರಡನೆಯ ಕ್ವಾಂಟೀಕರಣ ಸ್ವಯಂಸಿದ್ಧಕ್ಕೆ ಡಿ ಬ್ರಾಯ್ ವಿವರಣೆಯ ಕುರಿತು ಬರೆಯಿರಿ.

ಉತ್ತರ:- ಪರಮಾಣುವಿನ ಬೋರ್ ಮಾದರಿಯ ಎಲ್ಲಾ ಸ್ವಯಂಸಿದ್ಧಗಳಲ್ಲಿ ಪ್ರಾಯಶಃ ಅತೀ ಗೊಂದಲಮಯವಾಗಿರುವುದು ಎರಡನೆಯ ಸ್ವಯಂಸಿದ್ಧ. ನ್ಯೂಕ್ಲಿಯಸ್ಸಿನ ಸುತ್ತ ಪರಿಭ್ರಮಿಸುತ್ತಿರುವ ಇಲೆಕ್ಟ್ರಾನಿನ ಕೋನೀಯ ಸಂವೇಗವು ಕ್ವಾಂಟೀಕರಣ ಹೊಂದಿದೆ ಎಂಬುದು ಅದರ ಹೇಳಿಕೆಯಾಗಿದೆ. (ಅಂದರೆ $L_n = nh/2\pi$; $n = 1, 2, 3 \ldots$ ಕೋನೀಯ ಸಂವೇಗವು ಕೇವಲ $h/2\pi$ ನ ಪೂರ್ಣಾಂಕಗಳ ಅಪವರ್ತನಗಳನ್ನು ಮಾತ್ರ ಏಕೆ ಹೊಂದಿರುತ್ತದೆ? ಬೋರ್ ತಮ್ಮ ಮಾದರಿಯನ್ನು ಪ್ರಸ್ತುತಪಡಿಸಿದ ದಶಕದ ನಂತರ ಫ್ರೆಂಚ್ ಭೌತವಿಜ್ಞಾನಿ ಲೂಯಿಸ್ ಡಿ ಬ್ರಾಯ್, 1923ರಲ್ಲಿ ಈ ಸಮಸ್ಯೆಗೆ ಪರಿಹಾರ ನೀಡಿದರು. ಡಿ ಬ್ರಾಯ್‌ರವರ ಊಹೆಯಂತೆ, ವಸ್ತುವಿನ ಕಣಗಳಾದ ಇಲೆಕ್ಟ್ರಾನ್‌ಗಳಿಗೆ ತರಂಗ ಸ್ವಭಾವವಿದೆ. 1927ರಲ್ಲಿ ಸಿ. ಜೆ. ಡೇವಿಸನ್ ಮತ್ತು ಎಲ್. ಎಚ್. ಜರ್ಮರ್ ಎಲೆಕ್ಟ್ರಾನಿಕ್‌ನ ತರಂಗ ಸ್ವಭಾವದ ಸತ್ಯಾಸತ್ಯತೆಯನ್ನು ಪ್ರಾಯೋಗಿಕವಾಗಿ ಪರಿಶೀಲಿಸಿದರು.

ಬೋರ್ ಹೇಳಿರುವ ವೃತ್ತಾಕಾರದ ಕಕ್ಷೆಯಲ್ಲಿರುವ ಇಲೆಕ್ಟ್ರಾನ್‌ಗಳನ್ನು ಕಣತರಂಗಗಳಂತೆ ನೋಡಬೇಕೆಂದು ಡಿಬ್ರಾಯ್ ವಾದಿಸಿದರು. ಕಣತರಂಗಗಳು, ದಾರದಲ್ಲಿ ಚಲಿಸುವ ತರಂಗಗಳಿಗೆ ಸಾದೃಶ್ಯವಾಗಿ, ಅನುರಣನೆಯ ಸಂದರ್ಭದಲ್ಲಿ ಕಣಗಳೂ ಸಹ ಸ್ಥಾಯೀ ತರಂಗಗಳಂತೆ ವರ್ತಿಸುತ್ತವೆ. ದಾರವನ್ನು ಎಳೆದಾಗ ಅಪಾರ ಸಂಖ್ಯೆಯ ತರಂಗಾಂತರಗಳು ಉತ್ಪನ್ನವಾಗುತ್ತವೆ. ಆದರೆ ಅವುಗಳಲ್ಲಿ ತುದಿಬಿಂದುವಿಗೆ ಪಾತ ಬಿಂದುಗಳಿರುವ ತರಂಗಾಂತರಗಳು ಮಾತ್ರ ಸ್ಥಾಯೀ ತರಂಗಾಂತರಗಳಾಗಿ ರೂಪಗೊಳ್ಳುತ್ತವೆ. ಇದರರ್ಥ ದಾರದೊಂದಿಗೆ ತರಂಗಗಳು ಚಲಿಸಿ ಹಿಂತಿರುಗುವ ದೂರವು ಒಂದು ತರಂಗಾಂತರದಷ್ಟಿದ್ದಾಗ, ಎರಡು ತರಂಗಾಂತರದಷ್ಟಿದ್ದಾಗ ಅಥವಾ ಯಾವುದೇ ಪೂರ್ಣಾಂಕ ಸಂಖ್ಯೆಯ ಅಪವರ್ತನಗಳಷ್ಟು ತರಂಗಾಂತರವಿದ್ದಾಗ ಸ್ಥಾಯೀ ತರಂಗಗಳು ರೂಪಗೊಳ್ಳುತ್ತವೆ. ಉಳಿದ ತರಂಗಾಂತರಗಳು ತಮ್ಮಷ್ಟಕ್ಕೆ ತಾವೇ ಪ್ರತಿಫಲಿಸಿ, ಬಂದವುಗಳ ಜೊತೆ ಕೂಡಿ, ಅವುಗಳ ಪಾರ ಶೂನ್ಯವಾಗುತ್ತದೆ. n^{th} ಕಕ್ಷೆಯಲ್ಲಿ ವೃತ್ತಾಕಾರವಾಗಿ ಚಲಿಸುತ್ತಿರುವ ಇಲೆಕ್ಟ್ರಾನಿನ್ ತ್ರಿಜ್ಯ r_n ಆದಾಗ ಅದರ ಒಟ್ಟು ಉದ್ದವು ಕಕ್ಷೆಯ ಪರಿಧಿ $2\pi r_n$ ಸಮವಾಗುತ್ತದೆ.

ಹೀಗಾಗಿ, $2\pi r_n = n\lambda$, $n = 1, 2, 3 \ldots$ (12.24)

ಉದಾಹರಣೆಗೆ, $n = 4$ ಇರುವ ವೃತ್ತಾಕಾರದ ಕಕ್ಷೆಯಲ್ಲಿನ ಸ್ಥಾಯೀ ಕಣದ ತರಂಗದ(ಕೆಳಗಿನ ಚಿತ್ರದಲ್ಲಿ ತೋರಿಸಿದೆ.)ಅಂದರೆ $2\pi r_n = 4\lambda$.. ಅಂದರೆ $2\pi r_n = 4\lambda$. ಇಲ್ಲಿ λ, n^{th} ಕಕ್ಷೆಯಲ್ಲಿ ಸುತ್ತುತ್ತಿರುವ ಇಲೆಕ್ಟ್ರಾನಿನ ತರಂಗಾಂತರವನ್ನು ಪ್ರತಿನಿಧಿಸುತ್ತದೆ.



$\lambda = h/p$. ಇಲ್ಲಿ p ಇಲೆಕ್ಟ್ರಾನಿನ ಸಂವೇಗದ ಪ್ರಮಾಣವನ್ನು ಸೂಚಿಸುತ್ತದೆ. ಒಂದು ವೇಳೆ ಇಲೆಕ್ಟ್ರಾನಿನ ಜವವು ಬೆಳಕಿನ ಜವಕ್ಕಿಂತ ಬಹಳ ಕಡಿಮೆ ಇದ್ದಲ್ಲಿ ಸಂವೇಗವು mvn ಆಗುತ್ತದೆ. ಹೀಗಾಗಿ $\lambda = h/mvn$. . ಸಮೀಕರಣ ನಮಗೆ ದೊರಕುವುದೇನೆಂದರೆ, ಗುಂಪು$2\pi r_n = n\, h/mv_n$ or $m v_n r_n = nh/2\pi$ ಇದುವೇ ಬೋರ್ ಪ್ರತಿಪಾದಿಸಿದ ಇಲೆಕ್ಟ್ರಾನಿನ ಕೋನೀಯ ಸಂವೇಗದ ಕ್ವಾಂಟಮ್ ನಿರ್ಬಂಧನೆಯಾಗಿದೆ. ಹೈಡ್ರೋಜನ್ ಪರಮಾಣುವಿನ ವಿವಿಕ್ತ ಕಕ್ಷಾ ಮತ್ತು ಶಕ್ತಿ ಮಟ್ಟಗಳ ವಿಶ್ಲೇಷಣೆಗೆ ಇದು ಅಡಿಪಾಯವಾಗಿದೆ. ಆದ್ದರಿಂದ ಡಿ ಬ್ರಾಯ್ ಆಧಾರಕಲ್ಪನೆಯು, ಬೋರ್ ಎರಡನೆಯ ಸ್ವಯಂಸಿದ್ಧವಾದ ಸುತ್ತುತ್ತಿರುವ ಇಲೆಕ್ಟ್ರಾನಿನ ಕೋನೀಯ ಸಂವೇಗದ ವಿವಿಕ್ತತೆಯನ್ನು ವಿವರಿಸಿತು. ಕ್ವಾಂಟೀಕರಣಗೊಂಡ ಇಲೆಕ್ಟ್ರಾನ್ ಪರಿಭ್ರಮಿಸುತ್ತಿರುವದಲ್ಲದೆ ಇಲೆಕ್ಟ್ರಾನುಗಳ ತರಂಗ ಸ್ವಭಾವಗಳಿಂದಾಗಿ ಶಕ್ತಿ ಸ್ಥಿತಿಗಳಿದ್ದು ಕೇವಲ ಅನುರಣನ ಸ್ಥಾಯೀ ತರಂಗಗಳು ಮಾತ್ರ ಬಹುಕಾಲದವರೆಗೆ ಉಳಿಯುತ್ತವೆ. ಬೋರ್ ಸಾಂಪ್ರದಾಯಿಕ ಪ್ರಕ್ಷೇಪ ಪಥದ ಚಿತ್ರಣ ಮಾದರಿಯು (ಗ್ರಹಗಳಂತೆ ಇಲೆಕ್ಟ್ರಾನ್ ನ್ಯೂಕ್ಲಿಯಸ್‌ನ್ನು ಸುತ್ತುತ್ತಿದೆ) ಹೈಡ್ರೋಜನ್ ಪರಮಾಣುವಿನ ಒಟ್ಟಾರೆ ಲಕ್ಷಣಗಳನ್ನು ಹಾಗೂ ಹೊರಸೂಸಲ್ಪಟ್ಟ ಅಥವಾ ಆಯ್ದ* ಅಪಶೋಷಿತ ವಿಕಿರಣಗಳ ತರಂಗಾಂತರಗಳ ಆವೃತ್ತಿಯನ್ನು ಸರಿಯಾಗಿಯೇ ಊಹಿಸಿತು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಒಂದು ಕ್ಷಣದ ಸಿಟ್ಟಿನಿಂದ ಪಾರಾದರೆ, ನಾಲ್ಕು ದಿನಗಳ ದುಃಖದಿಂದ ಪಾರಾದಂತೆ.

-ಸ್ವಾಮಿ ವಿವೇಕಾನಂದ

ಸಿದ್ದೀಕ್ ಕಪ್ಪನ್ ಪ್ರಕರಣ ಪ್ರಜಾತಂತ್ರಕ್ಕೊಂದು ಪ್ರಶ್ನೆ

845 ದಿನಗಳನ್ನು ಜೈಲಿನಲ್ಲಿ ಕಳೆದ ಪತ್ರಕರ್ತ ಸಿದ್ದೀಕ್ ಕಪ್ಪನ್ ಅವರು ಈಗ ಬಿಡುಗಡೆ ಆಗಿದ್ದಾರೆ. ಪ್ರಜೆಗಳ ಹಕ್ಕುಗಳನ್ನು ಪ್ರಭುತ್ವವು ಹೃದಯಹೀನವಾಗಿ ನಿರ್ಲಕ್ಷಿಸುವುದರ ವಿರುದ್ಧ ಸಿಕ್ಕ ಜಯಕ್ಕೆ ಒಂದು ನಿದರ್ಶನವನ್ನಾಗಿ ಅವರ ಬಿಡುಗಡೆಯನ್ನು ಕಾಣಬಹುದು. ಸಂವಿಧಾನವು ಅಂತೂ ತನ್ನ ಪಾರಮ್ಯವನ್ನು ಸಾಧಿಸಿದೆ, ಪ್ರಜೆಗಳ ಸ್ವಾತಂತ್ರ್ಯಕ್ಕೆ ಹೆಚ್ಚಿನ ಬೆಲೆ ಕೊಡುವ ಕಾನೂನು ಕೊನೆಗೂ ಜಯ ಗಳಿಸಿದೆ ಎಂಬುದು ನಿಜವಿರಬಹುದು. ಹೀಗಿದ್ದರೂ, ಕಪ್ಪನ್ ಅವರ ಪ್ರಕರಣವು ಹಲವು ಅಹಿತಕರ ಪ್ರಶ್ನೆಗಳನ್ನು ಎತ್ತುತ್ತದೆ. ಯಾವ ತಪ್ಪನ್ನೂ ಎಸಗದೆ ಇದ್ದ ತಮ್ಮನ್ನು ಶಿಕ್ಷೆಗೆ ಗುರಿಪಡಿಸುವ ಹಟ ತೊಟ್ಟಿದ್ದ ಪ್ರಭುತ್ವದ ವಿರುದ್ಧ ನಡೆಸಿದ ಹೋರಾಟದ ಕಾರಣಕ್ಕಾಗಿ ಕಪ್ಪನ್ ಅವರು ನೆನಪಿನ ಪುಟಗಳಲ್ಲಿ ಉಳಿದುಕೊಳ್ಳಲಿದ್ದಾರೆ. ಕಾನೂನಿನ ಪ್ರಕಾರ ಯಾವ ಅಪರಾಧವನ್ನೂ ಅವರು ಎಸಗಿರಲಿಲ್ಲ. ಆದರೆ, ಪೂರ್ವಗ್ರಹದಿಂದಾಗಿ ಹಾಗೂ ಕೆಡುಕನ್ನು ಉಂಟುಮಾಡುವ ಉದ್ದೇಶದಿಂದ ಪ್ರಭುತ್ವವು ಅವರ ವಿರುದ್ಧ ಕ್ರಮಕ್ಕೆ ಮುಂದಾಗಿತ್ತು. ಇಲ್ಲಿ ಉಲ್ಲಂಘನೆ ಆಗಿದ್ದು ಪ್ರಜೆಯೊಬ್ಬನ ಕಾನೂನುಬದ್ಧ ಹಕ್ಕುಗಳು ಅಥವಾ ಪತ್ರಕರ್ತನೊಬ್ಬನ ಹಕ್ಕುಗಳು ಮಾತ್ರವೇ ಅಲ್ಲ. ಮನುಷ್ಯನೊಬ್ಬನಿಗೆ ಸಿಗಲೇಬೇಕಿರುವ ಮೂಲಭೂತ ಮಾನವ ಹಕ್ಕುಗಳನ್ನು ಇಲ್ಲಿ ಉಲ್ಲಂಘಿಸಲಾಯಿತು.



ಮನುಷ್ಯನೊಬ್ಬನಿಗೆ ಸಿಗಲೇಬೇಕಿರುವ ಮೂಲಭೂತ ಮಾನವ ಹಕ್ಕುಗಳ ಉಲ್ಲಂಘನೆ ಈ ಪ್ರಕರಣದಲ್ಲಿ ಆಗಿದೆ

ಯಾವ ಕಾರಣವೂ ಇಲ್ಲದೆ ಕಪ್ಪನ್ ಅವರಿಗೆ ನಿರಂತರವಾಗಿ ತೊಂದರೆ ಕೊಡಲಾಯಿತು. ಹೀಗಾಗಿಯೇ, ಕಪ್ಪನ್ ಅವರು ಎದುರಿಸಿದ ಸಂಕಷ್ಟಗಳನ್ನು ಮತ್ತೆ ಮತ್ತೆ ಉಲ್ಲೇಖಿಸಬೇಕಾಗುತ್ತದೆ. ಉತ್ತರಪ್ರದೇಶ ರಾಜ್ಯದ ಹಾಥರಸ್‌ನಲ್ಲಿ ನಡೆದ ದಲಿತ ಬಾಲಕಿಯೊಬ್ಬಳ ಮೇಲಿನ ಅತ್ಯಾಚಾರ ಹಾಗೂ ಆಕೆಯ ಕೊಲೆ ಪ್ರಕರಣವನ್ನು ವರದಿ ಮಾಡಲು ಕಪ್ಪನ್ ಅವರು ಹೋಗುತ್ತಿದ್ದರು. ಆ ಪ್ರಕರಣವು ಉತ್ತರಪ್ರದೇಶದ ಪೊಲೀಸರ ಮೇಲೊಂದು ಕಪ್ಪು ಚುಕ್ಕೆ ಇದ್ದಂತೆ. ಆ ಪ್ರಕರಣದಲ್ಲಿ ಪೊಲೀಸರು ಆರೋಪಿಗಳ ಜೊತೆ ಶಾಮೀಲಾಗಿರುವ ಸಾಧ್ಯತೆಯೂ ಇದೆ ಎಂಬ ಮಾತುಗಳು ಇದ್ದವು. ಪ್ರಕರಣದ ವರದಿಗಾರಿಕೆಗೆ ತೆರಳುತ್ತಿದ್ದ ಕಪ್ಪನ್ ಅವರ ವಿರುದ್ಧ ಅಕ್ರಮ ಚಟುವಟಿಕೆಗಳ (ನಿಯಂತ್ರಣ) ಕಾಯ್ದೆ ಹಾಗೂ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ಅಡಿಯಲ್ಲಿನ ಅತ್ಯಂತ ಕರಾಳವಾದ ಕೆಲವು ಸೆಕ್ಷನ್‌ಗಳನ್ನು ಬಳಸಿ ಪ್ರಕರಣ ದಾಖಲಿಸಲಾಯಿತು. ಕಪ್ಪನ್ ಅವರು ಸಲ್ಲಿಸಿದ ಜಾಮೀನು ಅರ್ಜಿಗಳು ಹಲವು ಕೋರ್ಟ್‌ಗಳ ಮೆಟ್ಟಿಲು ಹತ್ತಿದವು. ಮಥುರಾ ನ್ಯಾಯಾಲಯ, ಲಖನೌ ಸೆಷನ್ಸ್ ನ್ಯಾಯಾಲಯ, ಅಲಹಾಬಾದ್ ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್ ಬಾಗಿಲು ತಟ್ಟಿದವು. ಸುಪ್ರೀಂ ಕೋರ್ಟ್, ಕಪ್ಪನ್ ಅವರಿಗೆ ಹಿಂದಿನ ವರ್ಷದ ಸೆಪ್ಟೆಂಬರ್ ತಿಂಗಳಲ್ಲಿ ಜಾಮೀನು ನೀಡಿತು. ಆದರೆ, ಅವರಿಗೆ ಅಲಹಾಬಾದ್ ಹೈಕೋರ್ಟ್‌ನಿಂದ ಜಾಮೀನು ಪಡೆಯಲು ತಿಂಗಳುಗಳೇ ಬೇಕಾದವು. ಕಪ್ಪನ್ ಅವರಿಗೆ ಪತ್ರಿಕಾ ವೃತ್ತಿಯಲ್ಲಿನ ಸ್ನೇಹಿತರು ಹಾಗೂ ಸಹೋದ್ಯೋಗಿಗಳು ಬೆಂಬಲ ನೀಡಿದರು. ಕಪ್ಪನ್ ಅವರನ್ನು ಪ್ರಕರಣಗಳಲ್ಲಿ ಸಿಲುಕಿಸಲಾಗಿದೆ ಎಂಬುದು ಅವರಿಗೆ ಗೊತ್ತಿತ್ತು. ಕಪ್ಪನ್ ಅವರಿಗೆ ಕಾನೂನಿನ ನೆರವು ಕೂಡ ಚೆನ್ನಾಗಿಯೇ ಸಿಕ್ಕಿತ್ತು. ಹೀಗಿದ್ದರೂ, ಅವರು ತಮ್ಮ ಜೀವನದ ಎರಡಕ್ಕಿಂತ ಹೆಚ್ಚು ವರ್ಷಗಳನ್ನು ಜೈಲಿನಲ್ಲಿ ವ್ಯರ್ಥವಾಗಿ ಕಳೆಯಬೇಕಾಯಿತು.

‘ಜಾಮೀನು ನೀಡುವುದು ಸಹಜವಾಗಿರಬೇಕೇ ವಿನಾ ಜೈಲಿನಲ್ಲಿ ಕೂಡಿಹಾಕುವುದಲ್ಲ’ ಎಂಬುದು ನಾವು ಪಾಲಿಸಬೇಕಿರುವ ನಿಯಮ ಎಂಬ ನಂಬಿಕೆ ಇದೆ. ಹೀಗಿರುವಾಗ, ಈ ಮಟ್ಟದ ಬೆಂಬಲವಿರುವ ಕಪ್ಪನ್ ಅವರೇ ತಮ್ಮ ಸ್ವಾತಂತ್ರ್ಯಕ್ಕಾಗಿ ಇಷ್ಟೊಂದು ಹೋರಾಟ ನಡೆಸಬೇಕಾಯಿತು ಎಂದಾದರೆ, ಯಾವ ಬೆಂಬಲವೂ ಇಲ್ಲದವರ ಕಥೆ ಏನು? ಯಾವ ಬೆಂಬಲವೂ ಇಲ್ಲದವರ ಸಂಖ್ಯೆ ಸಾವಿರಾರು. ತಮ್ಮ ಹಕ್ಕುಗಳು ಏನು ಎಂಬುದೇ ಗೊತ್ತಿಲ್ಲದ ಸಾವಿರಾರು ಮಂದಿ ಜೈಲಿನಲ್ಲಿದ್ದಾರೆ. ಅವರಿಗೆ ತಮ್ಮ ಹಕ್ಕುಗಳನ್ನು ಹೇಳಿಕೊಳ್ಳುವುದು ಹೇಗೆಂಬುದು ಗೊತ್ತಿಲ್ಲ. ಅವರು ತಮ್ಮ ಜೀವನದ ಹಲವು ವರ್ಷಗಳನ್ನು ಜೈಲಿನಲ್ಲಿ ವ್ಯರ್ಥವಾಗಿ ಕಳೆಯುತ್ತಾರೆ. ಹಣಕಾಸಿನ ಬೆಂಬಲ ಇಲ್ಲದ ಹಾಗೂ ಅಗತ್ಯ ಮಾರ್ಗದರ್ಶನ ಇಲ್ಲದ ಪ್ರತೀ ವ್ಯಕ್ತಿಯೂ ಜೈಲಿನಲ್ಲಿ ಕಿರುಕುಳಕ್ಕೆ ಒಳಗಾಗಬಹುದು. ಕಪ್ಪನ್ ಅವರಿಗೂ ಇದೇ ರೀತಿ ಆಗಿದೆ. ಈ ಎಲ್ಲ ಕಾರಣಗಳಿಂದಾಗಿ ಪತ್ರಕರ್ತ ಕಪ್ಪನ್ ಪ್ರಕರಣವು ಪ್ರಜಾತಂತ್ರ ವ್ಯವಸ್ಥೆಯ ಪಾಲಿಗೆ ಒಂದು ಪ್ರಶ್ನೆಯಾಗಿ ಇರಲಿದೆ.

ಇರುಳಿಗರ ಅಪೂರ್ವ ಕೌಶಲದ ರಕ್ಷಣೆಗೆ ಆದ್ಯತೆ ನೀಡಬೇಕಾಗಿದೆ

‘ಪದ್ಮ’ ವಿಜೇತರಿಗೆ ಬೇಕು ಆರ್ಥಿಕ ಭದ್ರತೆ



ವಿಶ್ಲೇಷಣೆ

ಡಾ. ಎಚ್‌ಆರ್. ಕೃಷ್ಣಮೂರ್ತಿ

2023ರ ಸಾಲಿಗೆ ಭಾರತ ಸರ್ಕಾರ ಪ್ರಕಟಿಸಿರುವ 106 ಪ್ರತಿಷ್ಠಿತ ‘ಪದ್ಮ ಪ್ರಶಸ್ತಿ’ಗಳಲ್ಲಿ, ಪ್ರಚಾರದ ಹೊನಲು ಬೆಳಕಿನಿಂದ ದೂರವಾಗಿ, ಸದ್ದಿಲ್ಲದೇ ಸಮಾಜಸೇವೆಯಲ್ಲಿ ತೊಡಗಿರುವ ಹಲವಾರು ಹೆಸರುಗಳಿವೆ. ಅವುಗಳಲ್ಲಿ ಎರಡು, ತಮಿಳುನಾಡಿನ ಚಂಗಲ್‌ಪಟ್ಟುವಿನ ಇರುಳ ಬುಡಕಟ್ಟು ಸಮುದಾಯದ ವಡಿವೇಲು ಗೋಪಾಲ್ ಮತ್ತು ಮಾಸಿ ಸಡೈಯನ್.

‘ವಿಷಸರ್ಪಗಳ ಕಡಿತಕ್ಕೆ ಒಳಗಾದವರ ಪ್ರಾಣ ವುಳಿಸುವ ಪ್ರತಿವಿಷಸಾರದ (ಆ್ಯಂಟಿವೆನಮ್ ಸೀರಮ್) ಉತ್ಪಾದನೆಗೆ ಬೇಕಾದ ಹಾವುಗಳ ವಿಷವನ್ನು ಸಂಗ್ರಹಿಸು ವಲ್ಲಿ, ಪರಂಪರಾನುಗತವಾದ ಸಾಂಪ್ರದಾಯಿಕ ಜ್ಞಾನ ಮತ್ತು ಕೌಶಲಗಳನ್ನು ಸಮರ್ಥವಾಗಿ ಬಳಸುತ್ತಿರುವ ಈ ವ್ಯಕ್ತಿಗಳು ದೇಶದ ಆರೋಗ್ಯ ರಕ್ಷಣಾ ವ್ಯವಸ್ಥೆಗೆ ತಮ್ಮದೇ ಆದ ವಿಶಿಷ್ಟ ಕೊಡುಗೆ ನೀಡಿದ್ದಾರೆ’ ಎಂದು ಸರ್ಕಾರದ ಪ್ರಕಟಣೆ ತಿಳಿಸಿದೆ.


ನಮ್ಮ ದೇಶದಲ್ಲಿ ಪ್ರತಿವರ್ಷ ಹಾವುಗಳ ಕಡಿತದಿಂದ ಸಾಯುವವರ ಸಂಖ್ಯೆ ಸರಾಸರಿ 58,000. ಜಾಗತಿಕವಾಗಿ ಸಂಭವಿಸುವ ಸಾವಿನ ಅರ್ಧದಷ್ಟು. ವಿಷಸರ್ಪಗಳ ಕಡಿತದಿಂದಾಗುವ ಅಂಗಹೀನತೆ, ಅಂಗಚ್ಛೇದನಗಳು ಸಾಮಾನ್ಯವಾಗಿ ವರದಿಯಾಗುವುದಿಲ್ಲ, ದಾಖಲೆಗಳಲ್ಲಿ ಸೇರುವುದೂ ಇಲ್ಲ. ವಾರ್ಷಿಕವಾಗಿ ಸಂಭವಿಸುವ ಸಾವುಗಳಲ್ಲಿ ಶೇ 90 ಭಾಗಕ್ಕೆ ಕಾರಣವಾಗುವುದು, ‘ಬಿಗ್ ಫೋರ್’ ಎಂದೇ ಹೆಸರಾಗಿರುವ ನಾಗರಹಾವು, ಕಟ್ಟುಹಾವು (ಕಾಮನ್ ಕ್ರೈಟ್), ಕೊಳಕು ಮಂಡಲ (ರಸಲ್ಸ್ ವೈಪರ್) ಮತ್ತು ಗರಗಸ ಮಂಡಲ (ಸಾಸ್ಕೇಲ್ಡ್ ವೈಪರ್). ಸಾವುಗಳನ್ನು ಕಡಿಮೆ ಮಾಡುವುದರಲ್ಲಿರುವ ಅತಿದೊಡ್ಡ ಸವಾಲೆಂದರೆ ಪ್ರತಿವಿಷಸಾರದ ಉತ್ಪಾದನೆ ಯಲ್ಲಿರುವ ಕೊರತೆ.

ತಮಿಳುನಾಡಿನ ಚೆನ್ನೈ, ಕಾಂಚೀಪುರಂ ಮತ್ತು ತಿರುವಲ್ಲೂರು ಜಿಲ್ಲೆಗಳಲ್ಲಿರುವ ಇರುಳ ಬುಡಕಟ್ಟು ಸಮುದಾಯದ ಜನರ ಮುಖ್ಯ ಕುಲಕಸುಬೆಂದರೆ ಹಾವುಗಳನ್ನು ಹಿಡಿಯುವುದು. 60- 70ರ ದಶಕದಲ್ಲಿ ಈ ಸಮುದಾಯದ ಸುಮಾರು 5,000 ಮಂದಿ ಹಾವುಗಳನ್ನು ಹಿಡಿದು, ಅವುಗಳ ಚರ್ಮವನ್ನು ಚರ್ಮೋದ್ಯಮಕ್ಕೆ ಒದಗಿಸುತ್ತಿದ್ದರು. 1972ರಲ್ಲಿ ವನ್ಯಜೀವಿ ಸಂರಕ್ಷಣಾ ಅಧಿನಿಯಮದ ಕಾನೂನುಗಳು ಜಾರಿಯಾದಾಗ, ಹಾವುಗಳನ್ನು ಹಿಡಿಯುವುದು ಅಪರಾಧವಾಯಿತು. ಜೀವನೋಪಾಯವನ್ನು ಕಳೆದುಕೊಂಡ ಇರುಳಿಗರ ಬದುಕು ದುರ್ಭರವಾಯಿತು. ಅವರ ನೆರವಿಗೆ ಬಂದ ಭಾರತದ ಪ್ರಸಿದ್ಧ ಉರಗ ವಿಜ್ಞಾನಿ ರೋಮುಲಸ್ ವಿಟೇಕರ್ ಅವರ ಸತತ ಪ್ರಯತ್ನ ಮತ್ತು ಮಾರ್ಗದರ್ಶನ ದಿಂದ 1978ರಲ್ಲಿ ‘ಇರುಳ ಸ್ನೇಕ್ ಕ್ಯಾಚರ್ಸ್ ಇಂಡಸ್ಟ್ರಿಯಲ್ ಕೊಆಪರೇಟಿವ್ ಸೊಸೈಟಿ’ ಅಸ್ತಿತ್ವಕ್ಕೆ ಬಂದಿತು.

ಚೆನ್ನೈನಿಂದ 60 ಕಿ.ಮೀ. ದೂರದಲ್ಲಿರುವ ‘ಮದ್ರಾಸ್ ಕ್ರೊಕೊಡೈಲ್ ಪಾರ್ಕ್’ನಲ್ಲಿ ಈ ಸಂಸ್ಥೆಯ ಕೇಂದ್ರವಿದೆ. 366 ಇರುಳಿಗರು ಈ ಸಂಘದ ಸದಸ್ಯತ್ವ ಪಡೆದಿದ್ದಾರೆ. ಅರಣ್ಯದ ಹೊರಭಾಗದಲ್ಲಿ ಕೃಷಿಭೂಮಿ, ಪಾಳುಭೂಮಿ, ಕೈಗಾರಿಕೆ ಮತ್ತು ವಸತಿ ಪ್ರದೇಶಗಳಲ್ಲಿ ಹಿಡಿದ ನಾಲ್ಕು ಪ್ರಭೇದದ ಹಾವುಗಳನ್ನು ಇರುಳಿಗರು ಈ ಕೇಂದ್ರಕ್ಕೆ ತರುತ್ತಾರೆ. ಪ್ರತಿಯೊಂದು ನಾಗರಹಾವು ಮತ್ತು ಕೊಳಕು ಮಂಡಲಕ್ಕೆ ₹ 2,300, ಕಟ್ಟುಹಾವಿಗೆ ₹ 850 ಮತ್ತು ಗರಗಸಮಂಡಲಕ್ಕೆ ₹ 300 ದೊರೆಯುತ್ತದೆ. ಈ ವಿಷಸರ್ಪಗಳಿಂದ ಒಂದು ತಿಂಗಳ ಅವಧಿಯಲ್ಲಿ ನಾಲ್ಕುಬಾರಿ ವಿಷವನ್ನು ಪಡೆಯಲಾಗುತ್ತದೆ. ಅತ್ಯಂತ ಅಪಾಯಕಾರಿಯಾದ ಈ ಕೆಲಸವನ್ನು ವಿಶಿಷ್ಟ ನೈಪುಣ್ಯವಿರುವ, ನುರಿತ ಇರುಳಿಗರು ಸಮರ್ಥವಾಗಿ ನಿರ್ವಹಿಸುತ್ತಾರೆ. ಒಂದು ತಿಂಗಳ ನಂತರ, ಮತ್ತೆ ಹಿಡಿಯದಂತೆ ಗುರುತುಹಾಕಿದ ಈ ಸರ್ಪಗಳನ್ನು ಅವುಗಳ ಆವಾಸದಲ್ಲಿ ಬಿಡಲಾಗುತ್ತದೆ. ಈ ಕೇಂದ್ರದಲ್ಲಿ ಹಾವುಗಳಿಂದ ಪಡೆದ ವಿಷವೇ ‘ಆ್ಯಂಟಿ ವೆನಮ್’ ಉತ್ಪಾದನೆಗೆ ಅಗತ್ಯವಾದ ಮೂಲವಸ್ತು. ನಮ್ಮ ದೇಶದ ಒಟ್ಟು ಬೇಡಿಕೆಯ ಶೇ 80 ಭಾಗದಷ್ಟು ವಿಷಸರ್ಪಗಳ ವಿಷವನ್ನು ಇರುಳ ಸಹಕಾರ ಸಂಘ ಒದಗಿಸುತ್ತದೆ. ಆದರೆ ವರ್ಷಗಳು ಕಳೆದಂತೆ, ಉತ್ಪಾದನೆ ಯಾಗುತ್ತಿರುವ ವಿಷದ ಪ್ರಮಾಣ ಕಡಿಮೆಯಾಗಿ, ಇರುಳಿಗರ ಬದುಕು ಅತಂತ್ರವಾಗುತ್ತಿದೆ.

ಪ್ರತಿವರ್ಷವೂ ಹಾವುಗಳನ್ನು ಹಿಡಿಯಲು ಇರುಳಿಗರು ಅರಣ್ಯ ಇಲಾಖೆಯಿಂದ ಪರವಾನಗಿ ಪಡೆಯಬೇಕು. ಏಪ್ರಿಲ್- ಆಗಸ್ಟ್ ಸರ್ಪಗಳ ಸಂತಾನೋತ್ಪಾದನೆಯ ಸಮಯವಾದ್ದರಿಂದ ಆ ಅವಧಿ ಯಲ್ಲಿ ಹಾವುಗಳನ್ನು ಹಿಡಿಯುವಂತಿಲ್ಲ. ಆಗಸ್ಟ್‌ನಲ್ಲಿ ಇರುಳಿಗರು ಹಾವು ಹಿಡಿಯಲು ಅರ್ಜಿ ಸಲ್ಲಿಸುತ್ತಾರೆ. ಆ ಋತುವಿನಲ್ಲಿ ಹಿಡಿಯಬಹುದಾದ ಹಾವುಗಳ ಸಂಖ್ಯೆಯನ್ನು ಇಲಾಖೆಯು ನಿರ್ಧರಿಸಿ, ಡಿ. 15ರ ಸುಮಾರಿಗೆ ಪರವಾನಗಿ ನೀಡುತ್ತದೆ. ಮಾರ್ಚ್ ಅಂತ್ಯದ ವೇಳೆಗೆ ಹಾವು ಹಿಡಿಯುವ ಕೆಲಸ ಮುಗಿದಿರಬೇಕು. ಆದರೆ ಅನೇಕ ಸಂದರ್ಭಗಳಲ್ಲಿ ಈ ವೇಳಾಪಟ್ಟಿಯಲ್ಲಿ ಹೆಚ್ಚುಕಡಿಮೆಯಾಗಿ, ಮಾರ್ಚ್ ಕಡೆಯ ವಾರದಲ್ಲಿ ಪರವಾನಗಿ ದೊರೆತಿರುವುದೂ ಉಂಟು. ಆಗ ಸಂಘ ಉತ್ಪಾದಿಸುವ ವಿಷದ ಪ್ರಮಾಣ ಕಡಿಮೆಯಾಗಿ, ಇರುಳಿಗರ ಆದಾಯವೂ ತೀವ್ರವಾಗಿ ಇಳಿಯುತ್ತದೆ.

ಇರುಳ ಸಹಕಾರ ಸಂಘ ಉತ್ಪಾದಿಸುತ್ತಿರುವ ವಿಷ ಅತ್ಯಮೂಲ್ಯ ಜೈವಿಕ ಸಂಪನ್ಮೂಲ. 2002ರ ಜೈವಿಕ ವೈವಿಧ್ಯ ಅಧಿನಿಯಮದಂತೆ ಈ ಸಂಪನ್ಮೂಲವನ್ನು ಲಾಭದಾಯಕ ವಾಣಿಜ್ಯೋದ್ದೇಶಕ್ಕಾಗಿ ಬಳಸಿಕೊಳ್ಳುವ



ಔಷಧ ತಯಾರಿಕಾ ಕಂಪನಿಗಳು, ಆ ಲಾಭಾಂಶದ ನಿರ್ದಿಷ್ಟ ಭಾಗವನ್ನು ಜೈವಿಕ ಸಂಪನ್ಮೂಲದ ಸೃಷ್ಟಿಕರ್ತರು ಅಥವಾ ಸಂರಕ್ಷಕರೊಂದಿಗೆ ಹಂಚಿಕೊಳ್ಳಬೇಕು. ಹಾವಿನ ವಿಷವನ್ನು ಅಧಿಕೃತವಾಗಿ ಸಂಗ್ರಹಿಸಲು ಪರವಾನಗಿ ಇರುವ ದೇಶದ ಏಕಮಾತ್ರ ಸಂಸ್ಥೆಯೆಂದರೆ ಇರುಳ ಸಹಕಾರ ಸಂಘ. ಹೀಗೆ ಸಂಗ್ರಹಿಸಿದ ವಿಷವನ್ನು ಅದು ದೇಶದ ಎಂಟು ಔಷಧ ತಯಾರಿಕಾ ಕಂಪನಿಗಳಿಗೆ ಮಾರುತ್ತದೆ. ಆದರೆ ಇವುಗಳಲ್ಲಿ ಪುಣೆಯಲ್ಲಿರುವ ಒಂದು ಕಂಪನಿ ಮಾತ್ರ, ತಮಿಳುನಾಡು ಜೈವಿಕ ವೈವಿಧ್ಯ ಮಂಡಳಿಯ ಜೊತೆಗೆ ಮೂರು ವರ್ಷಗಳ ಅವಧಿಗೆ 2020ರಲ್ಲಿ ಒಪ್ಪಂದ ಮಾಡಿಕೊಂಡಿತ್ತು. ಅದರಂತೆ ಇರುಳ ಸಹಕಾರ ಸಂಘದಿಂದ ಪಡೆದ ವಿಷದ ಒಟ್ಟು ಬೆಲೆಯ ಶೇ 5 ಭಾಗವನ್ನು ಪುಣೆ ಕಂಪನಿಯು ಮಂಡಳಿಗೆ ಒಂದು ವರ್ಷ ಮಾತ್ರ ನೀಡಿ ಆನಂತರ ನಿಲ್ಲಿಸಿದೆ.


ಈ ರೀತಿ ಬಂದ ಹಣವನ್ನು ಮಂಡಳಿಯು ಇರುಳ ಸಹಕಾರ ಸಂಘಕ್ಕೆ ವರ್ಗಾಯಿಸಿದೆ. ಆದರೆ ಉಳಿದ ಏಳು ಕಂಪನಿಗಳು ಲಾಭಾಂಶದ ಹಂಚಿಕೆಗೆ ಸಂಬಂಧಪಟ್ಟಂತೆ ಯಾವ ಒಪ್ಪಂದವನ್ನೂ ಮಾಡಿಕೊಂಡಿಲ್ಲ. ಈ ಕಂಪನಿಗಳು ಉತ್ಪಾದಿಸುವ ಆ್ಯಂಟಿ ವೆನಮ್ ಪ್ರಮಾಣ, ಮಾರಾಟದ ಬೆಲೆ, ದೊರೆಯುವ ಲಾಭದಂತಹವುಗಳ ಬಗ್ಗೆ ಮಂಡಳಿಯಲ್ಲಿ ಯಾವ ಮಾಹಿತಿಯೂ ಲಭ್ಯವಿಲ್ಲ. ಆ ಕಂಪನಿಗಳ ವ್ಯಾಪಾರ, ವಹಿವಾಟುಗಳನ್ನು ಗಮನಿಸಿ, ಲಾಭಾಂಶ ಹಂಚಿಕೆಯ ಒಪ್ಪಂದಕ್ಕಾಗಿ ಒತ್ತಾಯಿಸಲು ಬೇಕಾದ ಸಮಯ, ಮಾನವ ಸಂಪನ್ಮೂಲ, ಆರ್ಥಿಕ ಸೌಲಭ್ಯಗಳು ಮಂಡಳಿಗಿಲ್ಲ. ಹೀಗಾಗಿ ಇರುಳಿಗರು ಮತ್ತು ಇರುಳ ಸಹಕಾರ ಸಂಘಕ್ಕೆ, ಜೈವಿಕ ವೈವಿಧ್ಯ ಅಧಿನಿಯಮ ದಡಿಯಲ್ಲಿ ನ್ಯಾಯಬದ್ಧವಾಗಿ ದೊರೆಯಬೇಕಾದ ಪಾಲು ಇನ್ನೂ ಕನಸಿನ ಗಂಟಾಗಿಯೇ ಉಳಿದಿದೆ.

ವಡಿವೇಲು ಗೋಪಾಲ್ ಮತ್ತು ಮಾಸಿ ಸಡೈಯನ್ ಪ್ರಪಂಚದ ವಿವಿಧ ಭಾಗಗಳಲ್ಲಿ ತಮ್ಮ ಅಪರೂಪದ ಕೌಶಲವನ್ನು ಪ್ರದರ್ಶಿಸಿದ್ದಾರೆ. ಅಮೆರಿಕದ ಫ್ಲಾರಿಡಾ ವೈಲ್ಡ್‌ಲೈಫ್ ಕಮಿಷನ್ ಮತ್ತು ಫ್ಲಾರಿಡಾ ವಿಶ್ವ ವಿದ್ಯಾಲಯದ ಸಹಯೋಗದಲ್ಲಿ ಎವರ್‌ಗ್ಲೇಡ್ಸ್ ರಾಷ್ಟ್ರೀಯ ಉದ್ಯಾನದಲ್ಲಿ 27 ಹೆಬ್ಬಾವುಗಳನ್ನು ಹಿಡಿದಿದ್ದಾರೆ. ಇದೀಗ ಪದ್ಮ ಪ್ರಶಸ್ತಿ ಲಭಿಸಿದೆ. ಅದು ಅವರ ಸಮುದಾಯಕ್ಕೆ, ಇರುಳಿಗರ ಅನನ್ಯ ಕೌಶಲಕ್ಕೆ ಸಂದ ಗೌರವವೆಂಬ ಹೆಮ್ಮೆ ಅವರಿಗಿದೆ. ಆದರೆ ಈ ಯಾವ ಸಾಧನೆಯಿಂದಲೂ ಅವರ ಬಡತನ ದೂರವಾಗಿಲ್ಲ.

‘ಕೆಲವೊಮ್ಮೆ ತಿಂಗಳಿಗೆ 4,000 ರೂಪಾಯಿ ಮಾತ್ರ ದುಡಿಯಲು ಸಾಧ್ಯ. ಅದರಿಂದ ಬದುಕುವುದಾದರೂ ಹೇಗೆ? ಈ ಕಾರಣದಿಂದಲೇ ನನ್ನ ಮೂವರೂ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವುದು ಸಾಧ್ಯವಾಗಲಿಲ್ಲ. ಅವರು ಇಂದು ದಿನಗೂಲಿ ಮಾಡುತ್ತಾರೆ. ನಮ್ಮ ಬಡತನದಲ್ಲಿ ನಮಗೆ ಬೇಕಿರುವುದು ನಿಶ್ಚಿತ ಆದಾಯ. ಬದುಕಿಗೊಂದು ಭದ್ರತೆ’ ಎನ್ನುವುದು, ಇಂದು ಇಡೀ ಇರುಳಿಗ ಸಮುದಾಯದ ಕಣ್ಮಣಿಯಾಗಿರುವ ಮಾಸಿ ಸಡೈಯನ್ ಅಳಲು. ಹಾವು ಹಿಡಿಯುವ ವೃತ್ತಿ ನಮ್ಮ ತಲೆಮಾರಿಗೇ ಕೊನೆಗೊಳ್ಳಲಿ ಎಂಬುದು ಬಹುತೇಕ ಇರುಳಿಗರ ಅಭಿಪ್ರಾಯ.

ನಮ್ಮ ದೇಶದ ಆ್ಯಂಟಿ ವೆನಮ್ ಉದ್ಯಮ, ಇರುಳ ಸಹಕಾರ ಸಂಘ ಒದಗಿಸುವ ಸರ್ಪವಿಷದ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿರುವ ಇಂದಿನ ಪರಿಸ್ಥಿತಿಯಲ್ಲಿ, ಇರುಳಿಗರು ಮತ್ತು ಅವರ ಅಪೂರ್ವ ಕೌಶಲದ ರಕ್ಷಣೆಗೆ ಅತಿ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ.

ಚುರುಮುರಿ



‘ಹೈ’ಕ್ಲಾಸ್ ತರಾಟೆ!

• ನಾರಾಯಣ ರಾಯಚೂರ್

‘ಚೆನ್ನಾಗಿ ಛಡಿ ಏಟು ಕೊಟ್ಟಿದಾರೆ’ ವಾಕಿಂಗ್ ಸ್ಟಿಕ್ ಎತ್ತಿ ಎತ್ತಿ ಸಾರಿದರು ವಾಕಿಂಗ್ ವಾಮರಾವ್. ‘ಯಾರು, ಯಾರಿಗೆ, ಯಾವಾಗ, ಎಲ್ಲಿ?’ ಸಂದರ್ಭದೊಡನೆ ಸ್ಪಷ್ಟೀಕರಿಸಿ ಅನ್ನೋ ಹಾಗೆ ಕೇಳಿದೆ ನಾನು.

‘ಈ ಮೇಷ್ಟ್ರಿಗೆ ವ್ಯಾಕರಣದ ಪಾಠದ ಥರಾನೇ ಎಲ್ಲಾ ಬಿಡಿಸಿ ಹೇಳಬೇಕು’.

‘ಎಷ್ಟೇ ಅಂದ್ರೂ ಮಕ್ಕಳ ಜೊತೆ ಏಗಿ ಏಗಿ ಸುಸ್ತಾಗಿಲ್ಲವೇ?! ಸ್ವಲ್ಪ ವಿವರಿಸಿ ಪರ್ವಾಗಿಲ್ಲ’ ಮೇಷ್ಟ್ರ ವಾದ.

‘ಇನ್ನೂರು ಪದಗಳಿಗೆ ಮೀರದಂತೆ ವಿವರಿಸಿ ಅನ್ನೇಡಿ ಮತ್ತೆ! ಮೊನ್ನೆ ಪೇಪರ್ ನೋಡಲಿಲ್ಲವೇ? ಮಕ್ಕಳಿಗೆ ಸಮವಸ್ತ್ರ ವಿತರಣೆಗೆ ದುಡ್ಡು ಬಿಡುಗಡೆ ವಿಳಂಬ ಆಗಿದ್ದಕ್ಕೆ ಶಿಕ್ಷಣ ಇಲಾಖೆ ಅಧಿಕಾರಿಗಳನ್ನ ಹೈಕೋರ್ಟ್ ತರಾಟೆಗೆ ತಗೊಂಡು ಚಾಟಿ ಬೀಸಿದೆ’.

‘ಸರಿಯಾಗಿ ಮಾಡಿದೆ. ನಮ್ಮ ಕಾರ್ಯಾಂಗ ನಿದ್ದೆ ಮಾಡೋದ್ರಲ್ಲಿ ನಿಸ್ಸೀಮ. ಕಾಲಕಾಲಕ್ಕೆ ಬಿಸಿ ತಗಲಸ್ತಾಯಿದ್ದರೇನೇ ಒಂದಷ್ಟು ಕೆಲಸ ಆಗೋದು’ ನಿವೃತ್ತ ಅಧಿಕಾರಿ ನೀಲಕಂಠೇಶ ಅನುಭವದ ದನಿಗೂಡಿಸಿದರು.

‘ಶಾಸಕಾಂಗವನ್ನೂ ಬಿಟ್ಟಿಲ್ಲ, ಉತ್ಸವಗಳಿಗೆ ಹಣ ಇದೆ, ಸಮವಸ್ತ್ರಕ್ಕೆ ಹಣವಿಲ್ಲವೋ ಅಂತ ಕೇಳಿದಾರೆ ನ್ಯಾಯಮೂರ್ತಿಗಳು’.

‘ಐನೂರು ಮಕ್ಕಳಿರೋ ಶಾಲೆಗೆ ಒಂದು ಸರಿಯಾದ ಶೌಚಾಲಯಾನೂ ಇಲ್ಲ, ಮರದ ಪೊದೆ ತರಹ ಇರೋ ತಡಿಕೆಯನ್ನು ಹಾವು-ಹುಳುಗಳ ಭಯದಿಂದ ಮಕ್ಕಳು ಬಳಕೆ ಮಾಡದಿದ್ದುದನ್ನು ಕಣ್ಣಾರೆ ಕಂಡು ಖುದ್ದು ಸರಿಪಡಿಸಿದ್ದನ್ನ ನ್ಯಾಯಮೂರ್ತಿಗಳು ವ್ಯಥೆಪಟ್ಕೊಂಡು, ಬೇಸರದಿಂದ ಹೇಳಿದಾರೆ!’

‘ರಸ್ತೆಗುಂಡಿ, ಪಾದಚಾರಿ ಮಾರ್ಗದಲ್ಲಿ ತಲೆಎತ್ತಿರೂ ಟ್ರಾನ್ಸ್‌ಫಾರ್ಮರ್‌ಗಳ ಸ್ಥಳಾಂತರದಂತಹ ವಿಷಯಗಳ ಬಗ್ಗೆನೂ ಕೋರ್ಟ್ ಮೇಲಿಂದ ಮೇಲೆ ಎಚ್ಚರಿಕೆ ಕೊಡ್ತಾನೇ ಇದೆ, ಎಫೆಕ್ಟ್ ಮಾತ್ರ ನಿಧಾನಾನೇ!’ ಹಿರಿಯ ಹಿರಿಯಣ್ಣ ಸೇರಿಸಿದರು. ಅಷ್ಟರಲ್ಲಿ ನಾಯಿಯೊಂದು ಬಂದು ನುಸುಳಿಕೊಂಡು ಓಡಿತು.

‘ನಾಯಿಬಾಲ ಡೊಂಕೇ! 75 ವರ್ಷದಿಂದ ಪ್ರಯತ್ನ ಸಾಗಿದೆ... ಹ್ಞೂಂ... ಸರಿಹೋದೀತು ಇಂದಲ್ಲ ನಾಳೆ...’ ಮೇಷ್ಟ್ರ ಆಶಾವಾದ!

ದಿನದ ಟ್ವೀಟ್

ಸ್ಥಳಾಂತರಿಸಬಾರದೇಕೆ?



ಕರ್ನಾಟಕದಲ್ಲಿ ಬಹಳಷ್ಟು ಕಡೆ ಅಂಗನವಾಡಿ ಕೇಂದ್ರಗಳು ಪ್ರಾಥಮಿಕ ಶಾಲೆಗೆ ಹೊಂದಿಕೊಂಡಿರದ ಬಾಡಿಗೆ ಕಟ್ಟಡಗಳಲ್ಲಿ ಇವೆ. ಇದೇ ವೇಳೆ, ಹತ್ತಿರದ ಶಾಲೆಗಳಲ್ಲಿ ಎಷ್ಟೋ ಕೊಠಡಿಗಳು ಬಳಸುವವರಿಲ್ಲದೆ ಖಾಲಿ ಉಳಿದಿವೆ. ಹಣ ಉಳಿಸಲು ಹಾಗೂ ಕಲಿಕಾ ಕೇಂದ್ರಗಳನ್ನು ಇನ್ನಷ್ಟು ಚೆನ್ನಾಗಿ ಒಗ್ಗೂಡಿಸಲು ಇಂತಹ ಅಂಗನವಾಡಿ ಕೇಂದ್ರಗಳನ್ನು ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಕೊಠಡಿಗಳಿಗೆ ಸ್ಥಳಾಂತರಿಸಬೇಕು.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

ಕಿಡಿನುಡಿ



ಕೇಂದ್ರ ಹಣಕಾಸು ಸಚಿವಾಲಯದ ಪ್ರಕಾರ, ಭಾರತದ ಬ್ಯಾಂಕುಗಳು ಒಟ್ಟು ₹ 6,30,373 ಕೋಟಿ ಅನುತ್ಪಾದಕ ಸ್ವತ್ತಿನಿಂದಾಗಿ (ಎನ್‌ಪಿಎ) ಶೋಚನೀಯ ಸ್ಥಿತಿಯಲ್ಲಿವೆ. ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳು ಇದರ ತೀವ್ರ ದುಷ್ಪರಿಣಾಮ ಎದುರಿಸುತ್ತಿವೆ! ಎಸ್‌ಬಿಐ, ಪಿಎನ್‌ಬಿ, ಯುಬಿಐ, ಕೆನರಾ ಮತ್ತು ಬ್ಯಾಂಕ್ ಆಫ್ ಬರೋಡಾ ಇದರಲ್ಲಿ ಸೇರಿವೆ. ಖಾಸಗಿ ವಲಯದ ಬ್ಯಾಂಕುಗಳು ಕೂಡ ಎನ್‌ಪಿಎ ಸಮಸ್ಯೆಯನ್ನು ಎದುರಿಸುತ್ತಿವೆ. ಐಡಿಬಿಐ, ಐಸಿಐಸಿಐ, ಯೆಸ್ ಬ್ಯಾಂಕ್, ಎಕ್ಸಿಸ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ಗಳು ಕೂಡ ಇದರಲ್ಲಿವೆ. ಇದು ಎತ್ತ ಸಾಗುತ್ತಿದೆ?

ಜಾನ್ ಬ್ರಿಟ್ಟಾಸ್, ರಾಜ್ಯಸಭಾ ಸದಸ್ಯ

25 ವರ್ಷಗಳ ಹಿಂದೆ

ಭಾನುವಾರ, 8-2-1998

• **ಕಾಂಗ್ರೆಸ್‌ನಿಂದ ಬೂಟಾ ಸಿಂಗ್ ಉಚ್ಚಾಟನೆ**

ಜೈಪುರ, ಫೆ. 7 (ಯುಎನ್‌ಐ)– ಕೇಂದ್ರದ ಮಾಜಿ ಸಚಿವ ಹಾಗೂ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಬೂಟಾ ಸಿಂಗ್ ಅವರನ್ನು ಮುಂದಿನ ಆರು ವರ್ಷಗಳ ಕಾಲ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟನೆ ಮಾಡಲಾಗಿದೆ.

ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಆರೋಪದ ಮೇಲೆ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಕಾಂಗ್ರೆಸ್ ಪಕ್ಷದ ವಕ್ತಾರರು ಇಂದು ಇಲ್ಲಿ ತಿಳಿಸಿದರು.

ಪಾಲಿ ವಿಧಾನಸಭಾ ಕ್ಷೇತ್ರದ ಹಾಲಿ ಶಾಸಕ ಮಾಧು ಸಿಂಗ್ ದೀವನ್ ಅವರನ್ನೂ ಪಕ್ಷದಿಂದ ಹೊರಹಾಕಲಾಗಿದೆ.

• **ನಾಗಾಲ್ಯಾಂಡ್: ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ**

ಕೊಹಿಮಾ, ಫೆ. 7 (ಪಿಟಿಐ)– ನಾಗಾಲ್ಯಾಂಡ್ ವಿಧಾನಸಭೆಗೆ 43 ಮಂದಿ ಕಾಂಗ್ರೆಸ್ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದು, ಮೂರನೇ ಎರಡರಷ್ಟು ಬಹುಮತ ಪಡೆಯುವುದರೊಂದಿಗೆ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದಂತಾಗಿದೆ.

ಉಳಿದ 17 ಸ್ಥಾನಗಳಿಗೆ ಈ ತಿಂಗಳ 22ರಂದು ಚುನಾವಣೆ ನಡೆಯಲಿದ್ದು, 20 ಮಂದಿ ಕಣದಲ್ಲಿದ್ದಾರೆ. ನಾಮಪತ್ರ ವಾಪಸು ಪಡೆಯಲು ಕೊನೆಯ ದಿನವಾದ ಇಂದು 9 ಪಕ್ಷೇತರರು ನಾಮಪತ್ರಗಳನ್ನು ಹಿಂತೆಗೆದುಕೊಂಡರು.

50 ವರ್ಷಗಳ ಹಿಂದೆ

ಗುರುವಾರ, 8-2-1973

• **ಹಿಂಸೆ ತ್ಯಜಿಸಿ ಸಂಧಾನ ಪಥಕ್ಕೆ ಬರಲು ಆಂಧ್ರ ನಾಯಕರಿಗೆ ಇಂದಿರಾ ಕರೆ**

ನವದೆಹಲಿ, ಫೆ. 7– ಆಂಧ್ರ ನಾಯಕರಿಗೆ ‘ಬಂದು ಮಾತನಾಡಿ’ ಎಂದು ಪ್ರಧಾನಿ ಇಂದಿರಾ ಗಾಂಧಿ ಅವರು ಮನವಿ ಮಾಡಿಕೊಂಡು, ಜನರಿಗೆ ಸಂಬಂಧಪಟ್ಟ ಸಮಸ್ಯೆಯೊಂದಕ್ಕೆ ಪರಿಹಾರ ಕಂಡುಹಿಡಿಯಲು ಹಿಂಸಾಚಾರ ಒಂದು ಮಾರ್ಗವಲ್ಲ ಎಂದು ತಿಳಿಸಿದ್ದಾರೆ.

ನಾಯಕರು ಹಿಂಸಾಚಾರ ಬಯಸುತ್ತಿರುವುದಾಗಿ ತಾವು ಹೇಳುತ್ತಿಲ್ಲವಾದರೂ ಪರಿಸ್ಥಿತಿಯನ್ನು ಬೇರೆಯವರು ದುರುಪಯೋಗ ಮಾಡಿಕೊಳ್ಳುತ್ತಾರೆಂದು ಅವರು ನುಡಿದರು.

• **ಬಿಇಎಲ್‌ಗೆ ಸಂತೃಪ್ತಿ, ನೌಕಾದಳಕ್ಕೆ ಹೆಮ್ಮೆ**

ಬೆಂಗಳೂರು, ಫೆ. 7– ಇಂದು ಭಾರತ್ ಎಲೆಕ್ಟ್ರಾನಿಕ್ಸ್ ಸಂಸ್ಥೆಗೆ (ಬಿಇಎಲ್) ಸಂತೃಪ್ತಿಯ ದಿನ, ಭಾರತ ನೌಕಾದಳಕ್ಕೆ ಹೆಮ್ಮೆಯ ದಿನ.

ನೌಕಾದಳದ ‘ಐಎನ್‌ಎಸ್ ಹಿಮಗಿರಿ’ ಯುದ್ಧ ನೌಕೆಯು ಭಾರತದಲ್ಲಿ ತಯಾರಾದ ಕೋವಿ ನಿಯಂತ್ರಣ ಸಾಧನವನ್ನು ಪಡೆಯಿತು. ಬಿಇಎಲ್ ಅದನ್ನು ತಯಾರಿಸಿದೆ.

ಸಂಗತ

ಮಹಿಳೆ ಮನೆಯೊಡತಿಯೇ?

ಮನೆ ಮಾಲೀಕತ್ವ ಮಹಿಳೆಯರದ್ದೇ... ದಾಖಲೆಗಳಲ್ಲಿ ಮಾತ್ರ!

• ಡಾ. ಕೆ.ಎಸ್.ಚೈತ್ರಾ

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷಾ ವರದಿ–5ರ ಪ್ರಕಾರ, ಮನೆ ಮತ್ತು ಜಮೀನಿನ ಮಾಲೀಕತ್ವ ಹೊಂದಿರುವ ಮಹಿಳೆಯರ ಪ್ರಮಾಣ ಕರ್ನಾಟಕದಲ್ಲಿ ಅತ್ಯಂತ ಹೆಚ್ಚು, ಸುಮಾರು ಶೇಕಡ 65ರಷ್ಟು! 15- 49 ವರ್ಷದ ಮಹಿಳೆಯರು ತಮ್ಮದೇ ಹೆಸರಿನಲ್ಲಿ ಮತ್ತು ಕುಟುಂಬದ ಇತರ ಸದಸ್ಯರೊಂದಿಗೆ ಜಂಟಿ ಮಾಲೀಕತ್ವ ಹೊಂದಿದ್ದಾರೆ. ಅದರಲ್ಲಿಯೂ ಗ್ರಾಮೀಣ ಪ್ರದೇಶದ ಮಹಿಳೆಯರ ಪ್ರಮಾಣ ಹೆಚ್ಚು. ಈ ವರದಿ ಓದಿ ಖುಷಿಯಾಗಿ ಎಲ್ಲರೊಡನೆ ಹಂಚಿಕೊಂಡೆ. ಕೂಡಲೇ ಮನೆಸಹಾಯಕಿ ‘ಹಂಗೇ ಮನೆ ಸಾಲ ಕಟ್ತಾ ಕಟ್ತಾ ಸಾಯೋರು ಎಷ್ಟ್ ಜನಾ ಅಂತ ರಿಪೋರ್ಟ್ ಇದ್ಯಾ ವಸಿ ನೋಡಕ್ಕಾ’ ಅಂದಳು ನಗುತ್ತಲೇ!

ದೇಶದ ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ಕರ್ನಾಟಕದಲ್ಲಿ ಈ ಪ್ರಮಾಣ ಹೆಚ್ಚು ಮಾತ್ರವಲ್ಲ ಹಿಂದಿಗಿಂತ ಏರಿಕೆಯಾಗಿದೆ ಎನ್ನುವುದು ಹೆಮ್ಮೆಯ ವಿಷಯವೇ. ತಲೆಯ ಮೇಲೊಂದು ಸೂರು ಬದುಕಿನ ಅವಶ್ಯಕತೆಯಾದರೆ, ಸ್ವಂತ ಮನೆ ಎನ್ನುವುದು ಇಂದಿಗೂ ಭಾರತೀಯ ಕೆಳ ಮತ್ತು ಮಧ್ಯಮ ವರ್ಗದವರ ಬಹುದೊಡ್ಡ ಕನಸು. ದಿನನಿತ್ಯದ ಖರ್ಚು ವೆಚ್ಚ ತೂಗಿಸುತ್ತಾ ಹೇಗೋ ದುಡ್ಡು ಉಳಿತಾಯ ಮಾಡಿ ಸ್ವಂತ ಮನೆ ಮಾಡುವುದು ಬದುಕಿನ ಬಹು ದೊಡ್ಡ ಗುರಿಯೂ ಹೌದು. ಹೀಗಿರುವಾಗ ಅಂಥ ದೊಡ್ಡ ಕನಸು, ಗುರಿಯ ಮಾಲೀಕತ್ವ ಮಹಿಳೆಯ ಹೆಸರಿನಲ್ಲಿ ಇದ್ದಾಗ ಆಕೆಯಲ್ಲಿ ಆತ್ಮವಿಶ್ವಾಸ ಮೂಡುತ್ತದೆ. ಮನೆಯೊಡತಿಗೆ ಸಹಜವಾಗಿಯೇ ಹೆಚ್ಚು ಮನ್ನಣೆ ಸಿಗುತ್ತದೆ. ಹಾಗೆಯೇ ಆಕೆಯ ಹೆಸರಿನಲ್ಲಿ ಮನೆ ಇದೆ ಎಂದರೆ ಆಕೆ ಶೈಕ್ಷಣಿಕವಾಗಿ ಮುನ್ನಡೆಯುತ್ತಿದ್ದಾಳೆ, ಆರ್ಥಿಕವಾಗಿ ಸ್ವತಂತ್ರಳಾಗಿದ್ದಾಳೆ, ಆಕೆಯನ್ನೂ ಕುಟುಂಬದ ಪ್ರಮುಖ ಸದಸ್ಯೆ ಎಂದು ಪರಿಗಣಿಸಲಾಗುತ್ತಿದೆ, ಅಡುಗೆ ಮನೆಯ ಜತೆ ಬ್ಯಾಂಕ್, ಆಫೀಸು ಹೀಗೆ ಹೊರಪ್ರಪಂಚದ ವ್ಯವಹಾರಗಳ ಅರಿವು ಆಕೆಗಿರುತ್ತದೆ ಎಂದರ್ಥ.

ಇದಲ್ಲದೇ ಮನೆಯ ಮಾಲೀಕತ್ವ ಆಕೆಗಿದ್ದಾಗ ತನ್ನ ಮತ್ತು ಮಕ್ಕಳ ಆರೋಗ್ಯ, ಶಿಕ್ಷಣ ಹೀಗೆ ಸ್ವತಂತ್ರವಾಗಿ ನಿರ್ಣಯ ಕೈಗೊಳ್ಳುವ ಸಾಮರ್ಥ್ಯದ ಜತೆ ಹಕ್ಕೂ ತಾನಾಗಿ ಸಿಗುತ್ತದೆ. ಒಟ್ಟಿನಲ್ಲಿ ಅಬಲೆಯಿಂದ ಸಬಲಳಾಗುವತ್ತ ಪ್ರಮುಖ ಹೆಜ್ಜೆ ಇದು ಎಂದು ಪರಿಗಣಿಸಲಾಗುತ್ತದೆ. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಮಹಿಳೆಯರ ಹೆಸರಿನಲ್ಲಿ ಮನೆ ಖರೀದಿಸಲು ಕಾರಣ, ಬ್ಯಾಂಕ್‌ನಿಂದ ಕಡಿಮೆ ಬಡ್ಡಿ ದರದಲ್ಲಿ ಸಿಗುವ ಸಾಲ ಸೌಲಭ್ಯ, ತೆರಿಗೆ ವಿನಾಯಿತಿ, ಸ್ಟ್ಯಾಂಪ್ ಡ್ಯೂಟಿಯಲ್ಲಿ ಇಳಿಕೆ, ಬಾಡಿಗೆಗೆ ಕೊಟ್ಟರೂ ಬರುವ ಆದಾಯದಲ್ಲಿ ತೆರಿಗೆ ವಿನಾಯಿತಿ... ಹೀಗೆ ಅನೇಕ ಅನುಕೂಲಗಳು. ಸರ್ಕಾರವು ಮಹಿಳಾ ಸಬಲೀಕರಣವನ್ನು ಪ್ರೋತ್ಸಾಹಿಸಲೆಂದೇ ನೀಡಿರುವ ಸೌಲಭ್ಯಗಳು ಇವು. ಅವುಗಳನ್ನು ಖಂಡಿತಾ ಉಪಯೋಗಿಸಬೇಕು, ಆದರೆ ಸಬಲೀಕರಣ ಸಾಧ್ಯವಾಗುತ್ತಿದೆಯೇ...? ಯೋಚಿಸಬೇಕು!

ಮನೆ ಮಾಲೀಕತ್ವ ವರದಿಯಾಗಿರುವ ಹಾಗೆ ಮಹಿಳೆಯರದ್ದೇ... ದಾಖಲೆಗಳಲ್ಲಿ ಮಾತ್ರ. ಹಣಕಾಸಿನ ಜವಾಬ್ದಾರಿ, ಪ್ರಮುಖ ನಿರ್ಣಯಗಳು ಇವೆಲ್ಲಾ ಪುರುಷರದ್ದೇ. ಗಂಡ ಅಥವಾ ಅಪ್ಪ ಹೇಳಿದಲ್ಲಿ ಸಹಿ ಅಥವಾ ಹೆಬ್ಬೆಟ್ಟು ಒತ್ತಿದರೆ ಮಹಿಳೆಯ ಕೆಲಸ ಮುಗಿಯಿತು. ಗ್ರಾಮೀಣ ಪ್ರದೇಶಗಳ ಕೂಡುಕುಟುಂಬಗಳಲ್ಲಿ ಯಜಮಾನರು- ದೊಡ್ಡವರು ಹೇಳಿದ್ದನ್ನು ಮರುಪ್ರಶ್ನಿಸದೆ ಮಾಡುವುದಷ್ಟೇ ಆಕೆಯ ಕರ್ತವ್ಯ. ಏನು, ಎತ್ತ, ಏಕೆ ಇವುಗಳ ಅರಿವೇ ಹೆಚ್ಚಿನ ಮಹಿಳೆಯರಿಗೆ ಇಲ್ಲದಿದ್ದಾಗ ಹಕ್ಕು ಚಲಾವಣೆ, ನಿರ್ಣಯ ತೆಗೆದುಕೊಳ್ಳುವ ಅಧಿಕಾರ ನಿರೀಕ್ಷಿಸುವುದು ಹೇಗೆ?

ನಗರ ಪ್ರದೇಶಗಳಲ್ಲಿ ಪರಿಸ್ಥಿತಿ ಸ್ವಲ್ಪ ಭಿನ್ನವಾಗಿದೆ. ಕೆಳ-ಮಧ್ಯಮ ವರ್ಗದ ಸಣ್ಣಪುಟ್ಟ ಕೆಲಸಗಳನ್ನು ಮಾಡುವ ಮಹಿಳೆಯರು ಹಣ ಗಳಿಸುತ್ತಿದ್ದಾರೆ, ಕುಟುಂಬವನ್ನು ಸಾಕುತ್ತಿದ್ದಾರೆ. ಚಿಕ್ಕದಾದರೂ ಸ್ವಂತ ಮನೆ ಎಂಬ ಕನಸು ಕೈಗೂಡಿದೆ. ಆದರೆ ಸಾಲದ ಹೊರೆಯೂ ತಲೆಗೇರಿದೆ. ಗಂಡನನ್ನು ಸಂಬಾಳಿಸುತ್ತಾ, ಮಕ್ಕಳನ್ನು ಓದಿಸುತ್ತಾ, ಮನೆಗಾಗಿ ಮಾಡಿದ ಸಾಲವನ್ನು ತೀರಿಸುತ್ತಾ ಜತೆಗೇ ‘ಮನೆ ಇವಳ ಹೆಸರಲ್ಲಿದೆ ಎಂದು ಹಾರಾಡ್ತಾಳೆ, ಧಿಮಾಕು ತೋರಿಸ್ತಾಳೆ’ ಎಂದು ಹೊಡೆತ, ಬೈಗುಳ ತಿನ್ನುವ ಮಹಿಳೆಯರ ಸಂಖ್ಯೆಯೂ ಕಡಿಮೆಯೇನಲ್ಲ.



ಆದ್ದರಿಂದಲೇ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ 2019- 21ರ ಇನ್ನೊಂದು ವರದಿಯನ್ನೂ ಗಮನಿಸುವುದು ಮುಖ್ಯ. ಕರ್ನಾಟಕದ ವಿವಾಹಿತ ಮಹಿಳೆಯರಲ್ಲಿ ಕೌಟುಂಬಿಕ ದೌರ್ಜನ್ಯದ ಪ್ರಮಾಣ ಶೇಕಡ 44ರಷ್ಟಿದ್ದು ಇದು ದೇಶದಲ್ಲಿ ಅತಿ ಹೆಚ್ಚು. ಅಲ್ಲದೆ, ಅದರ ಹಿಂದಿನ ವರದಿಗೆ ಹೋಲಿಸಿದರೆ ತೀವ್ರ ಹೆಚ್ಚಳ ಕಂಡಿದೆ. ಶಿಕ್ಷಣ ಇಲ್ಲದಿರುವುದು, ಆರ್ಥಿಕವಾಗಿ ಪುರುಷರ ಮೇಲೆ ಅವಲಂಬನೆ ಇದಕ್ಕೆ ಮುಖ್ಯ ಕಾರಣಗಳು.

ಕೌಟುಂಬಿಕ ಹಿಂಸೆ ವಿರುದ್ಧ ಕಠಿಣವಾದ ಕಾನೂನುಗಳಿವೆ, ಶಿಕ್ಷೆಯೂ ಆಗುತ್ತದೆ. ಆದರೆ ದೂರು ನೀಡುವವರು ಯಾರು? ಅರಿವಿಲ್ಲ ಎನ್ನುವುದು ಒಂದು ಅಂಶ. ಅರಿವಿದ್ದರೂ ಗಂಡನ ಮತ್ತು ಮನೆಯವರ ಮರ್ಯಾದೆ ಕಾಪಾಡುವ ಹೊಣೆಯನ್ನು ಸಮಾಜ ಹೊರಿಸಿದೆ ಮತ್ತು ಮಹಿಳೆ ಸ್ವತಃ ಹೊತ್ತುಕೊಂಡಿದ್ದಾಳೆ. ಒಟ್ಟಿನಲ್ಲಿ ತಮ್ಮ ಮಾಲೀಕತ್ವದ ಮನೆಗಳಲ್ಲಿಯೂ ಮಹಿಳೆಯರು ಮೌನವಾಗಿ ಎಲ್ಲವನ್ನೂ ಸಹಿಸಿ ಬದುಕುತ್ತಿದ್ದಾರೆ. ವರದಿಗಳು ಸುದ್ದಿಯಲ್ಲಿವೆ ಅಷ್ಟೇ.

ಮಹಿಳೆ ಮನದೊಡತಿಯಾಗಿ ಗೌರವ, ಪ್ರೀತಿ, ಸಮಾನ ಅವಕಾಶ ಪಡೆದಾಗ ಮಾತ್ರ ನಿಜಾರ್ಥದಲ್ಲಿ ಮನೆಯೊಡತಿ ಆಗಲು ಸಾಧ್ಯ!

ವಾಚಕರ ವಾಣಿ

ಲಂಚದ ದಂಧೆಗಿಲ್ಲ ಎಗ್ಗು

ಪೋಕ್ಸೊ ಪ್ರಕರಣವೊಂದರಲ್ಲಿ ಆರೋಪಿಗೆ ನೆರವಾಗುವ ವಾಗ್ದಾನ ನೀಡಿದ್ದರೆನ್ನಲಾದ ದಾವಣಗೆರೆಯ ಪೋಕ್ಸೊ ನ್ಯಾಯಾಲಯದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್, ಅದಕ್ಕಾಗಿ ಲಂಚ ಪಡೆಯುವಾಗ ಸಿಕ್ಕಿಬಿದ್ದಿರುವುದು ಕುತೂಹಲಕಾರಿಯಾಗಿದೆ. ಚೆಕ್ ಅಥವಾ ಬ್ಯಾಂಕ್ ಮೂಲಕ ಲಂಚದ ಹಣದ ವ್ಯವಹಾರ ನಡೆದ ಉನ್ನತ ರಾಜಕೀಯ ವಲಯದ ಕೆಲವು ಪ್ರಕರಣಗಳನ್ನು ಹಿಂದೆ ನೋಡಿದ್ದೇವೆ. ಅವು ಅಲ್ಲಲ್ಲೇ ನಿಂತುಹೋದವು. ಅಂಥ ವ್ಯವಹಾರ ಈಗ ಅಧಿಕಾರಿ ವಲಯಕ್ಕೂ ವಿಸ್ತರಿಸಿದಂತೆ ಕಂಡುಬರುತ್ತಿದೆ. ಸರ್ಕಾರದ ಒಂದು ಇಲಾಖೆಯಲ್ಲಿ ಮೇಲ್ದರ್ಜೆ ಅಧಿಕಾರಿಯಾದಿಯಾಗಿ ಕೆಲವರು ಫೋನ್ ಪೇ ಮೂಲಕ ಹಣ ಪಡೆಯುತ್ತಿದ್ದು, ಈಗ ಎಲ್ಲವೂ ರಾಜಾರೋಷವಾಗಿ ನಡೆಯುತ್ತಿವೆ ಎಂದು ನನ್ನ ಆಪ್ತರೊಬ್ಬರು ತಿಳಿಸಿದರು.

ಹೆಣ್ಣುಮಕ್ಕಳಿಗೆ ಹೆಚ್ಚಿನ ಸಂರಕ್ಷಣೆ ಒದಗಿಸಲು ಜಾರಿಗೆ ತಂದ ಪೋಕ್ಸೊ ಕಾಯ್ದೆ ಪ್ರಕರಣದ ಆರೋಪಿಗೆ ಸಹಾಯ ಮಾಡಲು ಹೋಗಿ ಮಹಿಳಾ ಪಬ್ಲಿಕ್ ಪ್ರಾಸಿಕ್ಯೂಟರ್ ಖುದ್ದು ಆರೋಪಿಯಾಗಿ ನಿಂತಿರುವುದಕ್ಕೆ ಏನನ್ನುವುದು? ಸ್ತ್ರೀ ಯಾವುದರಲ್ಲೂ ಪುರುಷರಿಗಿಂತ ಹಿಂದೆ ಇಲ್ಲ ಅನ್ನುವುದೇ? ಲಂಚದ ಮುಂಗಡ ಹಣ ಪಡೆದು ಉಳಿದ ಹಣದ ಖಾತರಿಗಾಗಿ ಸಹಿ ಮಾಡಿದ ಖಾಲಿ ಚೆಕ್ ಪಡೆದಿದ್ದ ಅವರು, ಹಣ ಬಾರದಿದ್ದರೆ ಅದನ್ನು ನಗದೀಕರಿಸಲು ಮುಂದಾಗುತ್ತಿದ್ದರೇ ಅಥವಾ ಆಗಲೂ ಹಣ ಬಾರದಿದ್ದಲ್ಲಿ ಚೆಕ್ ಬೌನ್ಸ್ ಪ್ರಕರಣ ದಾಖಲಿಸುತ್ತಿದ್ದರೇ ಎಂಬ ಜಿಜ್ಞಾಸೆ ಉಂಟಾಗುತ್ತದೆ. ಒಂದು ವೇಳೆ ಹಾಗೆ ಮಾಡಿದ್ದರೆ ಅಥವಾ ಈಗಲೂ ಅವರು ಆರೋಪಿಯಾಗಿ ನ್ಯಾಯಾಲಯದಲ್ಲಿ ನಿಂತಾಗ ನಡೆಯಬಹುದಾದ ವಾದ, ಪ್ರತಿವಾದದ ಸ್ವರೂಪ ಹೇಗಿರಬಹುದು ಎಂಬುದು ಬಹಳ ಆಸಕ್ತಿಕರವಾಗಿ ಕಂಡುಬರುತ್ತದೆ.

ವೆಂಕಟೇಶ ಮಾಚಕನೂರ, ಧಾರವಾಡ

‘ದಂತಭಾಗ್ಯ’ ಯೋಜನೆ ತಿಳಿದಿದೆಯೇ?

ವಯಸ್ಸಾದ ಬಡವರಿಗಾಗಿ ಹಲ್ಲಿನ ಸೆಟ್ ಕೊಡುವ ಯೋಜನೆಯೊಂದು ಕರ್ನಾಟಕ ಸರ್ಕಾರದಲ್ಲಿದೆ. ಈ ‘ದಂತಭಾಗ್ಯ’ ಯೋಜನೆ ಜಾರಿಯಾಗಿ ಸುಮಾರು ವರ್ಷಗಳೇ ಕಳೆದುಹೋಗಿವೆ. ಆದರೂ ಈ ಸೌಲಭ್ಯ ಜಿಲ್ಲಾ ಆಸ್ಪತ್ರೆಗಳಲ್ಲಿಯೇ ಸರಿಯಾಗಿ ದೊರೆಯದಿರುವುದು ಶೋಚನೀಯ ಸಂಗತಿ.

ವಿಜಯಪುರ ಆಸ್ಪತ್ರೆಯಲ್ಲಿ ದಂತಭಾಗ್ಯ ಯೋಜನೆ ಪಡೆಯಲು ಹೋದಾಗ ತಿಳಿದ ಸಂಗತಿ ಇದು. ಈಗಾಗಲೇ ನೂರು ಜನ ತಮ್ಮ ಹೆಸರನ್ನು ಅಲ್ಲಿ ನೋಂದಾಯಿಸಿದ್ದಾರಂತೆ. ಹೊಸಬರಿಗೆ ಆ ಸೇವೆ ದೊರೆಯಲು ಆರು ತಿಂಗಳು ಕಾಯಬೇಕಂತೆ. ಹಲ್ಲಿನ ಸೆಟ್ ಸರಿಯಾಗಿ ಕೂಡುವುದೋ ಇಲ್ಲವೋ ಹೇಳಲಾಗದು. ಹಣ ಕೊಟ್ಟು ಖಾಸಗಿ ಆಸ್ಪತ್ರೆಯಲ್ಲಿ ಮಾಡಿಸಿಕೊಳ್ಳುವುದು ಒಳ್ಳೆಯದು ಎಂಬ ಪುಕ್ಕಟೆ ಸಲಹೆ ಬೇರೆ. ಇದೆಂಥ ದಂತಭಾಗ್ಯ? ಸರ್ಕಾರ ಬರೀ ಪ್ರಚಾರಕ್ಕಾಗಿ ಇಂಥ ಯೋಜನೆಗಳನ್ನು ಪ್ರಕಟಿಸುವುದನ್ನು ನಿಲ್ಲಿಸಲಿ.

ಸುಭಾಸ ಯಾದವಾಡ, ವಿಜಯಪುರ

ಹತ್ತಿ ಕೂಳೆ ಸುಡುವ ಮುನ್ನ...

ಕಿತ್ತೂರು ಕರ್ನಾಟಕದ ಬಹುತೇಕ ಭಾಗದಲ್ಲಿ ಇದೀಗ ಹತ್ತಿ ಬೆಳೆಯುವ ಅವಧಿ ಮುಗಿದಿದ್ದು, ಇನ್ನೇನು ಹೊಲವನ್ನು ಸ್ವಚ್ಛಗೊಳಿಸುವ ಕೆಲಸ ನಡೆಯುತ್ತದೆ. ಪಂಜಾಬ್, ಹರಿಯಾಣದಲ್ಲಿ ಭತ್ತದ ಕೂಳೆ ಸುಡುವಂತೆ ನಮ್ಮಲ್ಲಿಯೂ ಹತ್ತಿಯ ಕಟ್ಟಿಗೆಯನ್ನು ಒಂದೆಡೆ ಕೂಡಿಸಿ ಹೆಚ್ಚಿನ ಪ್ರಮಾಣದಲ್ಲಿ ಸುಡಲಾಗುತ್ತದೆ. ಇದಕ್ಕೆ ಜನರು ಪ್ಲಾಸ್ಟಿಕ್ ಹಾಳೆ, ಬಾಟಲಿ, ಪೇಪರ್ ಬಳಸುತ್ತಾರೆ. ಇದರಿಂದ ಆಳೆತ್ತರದ ಹೊಗೆ ಗಾಳಿಯನ್ನು ಸೇರುತ್ತದೆ. ಪಂಚಾಯಿತಿಗಳಿಂದ ಈ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸುವ ಕೆಲಸವಾಗಬೇಕು. ಕಟ್ಟಿಗೆಯನ್ನು ಸುಡುವ ಬದಲು ಪರ್ಯಾಯ ಮಾರ್ಗವನ್ನು ರೈತರು ಕಂಡುಕೊಳ್ಳಬೇಕು.

ಬಸನಗೌಡ ಪಾಟೀಲ, ಯರಗುಪ್ಪಿ

ಶ್ರೀಗಳು ಆಗಲಿ ಇನ್ನಷ್ಟು ಪ್ರಜಾಪ್ರಭುತ್ವವಾದಿ

‘ಬ್ರಾಹ್ಮಣರೇಕೆ ಸಿ.ಎಂ. ಆಗಬಾರದು?’ ಎಂದು ಕೇಳಿರುವ ಪೇಜಾವರ ಶ್ರೀಗಳು, ಒಬ್ಬ ವ್ಯಕ್ತಿ ಮಾಡಿದ ತಪ್ಪಿಗೆ ಒಂದು ಇಡೀ ಸಮುದಾಯವನ್ನು ದೂಷಿಸುವುದು ಸರಿಯಲ್ಲ ಎಂದಿದ್ದಾರೆ (ಪ್ರ.ವಾ., ಫೆ. 7). ಸ್ವಾಮೀಜಿ ಹೇಳಿಕೆಗಳು ಪ್ರಜಾಪ್ರಭುತ್ವದ ಪರಿಧಿಯಲ್ಲೇ ಇವೆ. ಹಾಗೆ ನೋಡಿದರೆ ಈ ದೇಶವನ್ನು ಬಹಳ ಹಿಂದಿನಿಂದಲೂ ಬ್ರಾಹ್ಮಣರೇ ಆಳಿದ್ದಾರೆ (ರಾಜನ ಮಂತ್ರಿಯಾಗಿ), ಈಗಲೂ ಆಳುತ್ತಿದ್ದಾರೆ. ಬ್ರಾಹ್ಮಣರು ಮುಖ್ಯಮಂತ್ರಿ ಆಗುವುದರಲ್ಲಿ ಯಾರಿಗೂ ಯಾವುದೇ ಆಕ್ಷೇಪವಿಲ್ಲ. ಈ ಮೂಲಕ ಬ್ರಾಹ್ಮಣ ಸಮಾಜಕ್ಕೆ ಬೆಂಬಲ ನೀಡಿರುವ ಶ್ರೀಗಳು, ತಾವು ಅಪ್ಪಟ ಪ್ರಜಾಪ್ರಭುತ್ವವಾದಿ ಎಂಬುದನ್ನು ತೋರಿಸಿದ್ದಾರೆ.

ಇದೇ ಮಾದರಿಯಲ್ಲಿ ದಲಿತರೇಕೆ ಪೂಜಾರಿಗಳಾಗಬಾರದು ಎಂಬ ಪ್ರಶ್ನೆಯನ್ನು ಸಮಾಜದ ಮುಂದಿಟ್ಟು, ಅವರಿಗೆ ಅಂಥದೊಂದು ಅವಕಾಶ ದೊರಕಿಸಿಕೊಡಲು ಪ್ರಯತ್ನ ಮಾಡಲಿ. ಜೊತೆಗೆ, ಎಂದೋ ಯಾರೋ ಒಬ್ಬ ಮುಸ್ಲಿಂ ವ್ಯಕ್ತಿ ಮಾಡಿದ ತಪ್ಪಿಗೆ, ಈಗ ಇಡೀ ಸಮುದಾಯವನ್ನು ದೂಷಿಸುವುದು ಸರಿಯಲ್ಲ ಎಂಬ ಸಂದೇಶವನ್ನೂ ನೀಡಿ ಹಿಂದೂ, ಮುಸ್ಲಿಂ ಸಮುದಾಯದ ನಡುವೆ ನಿಂತು ಎಲ್ಲರನ್ನೂ ಒಟ್ಟೊಟ್ಟಿಗೆ ಮುನ್ನಡೆಸುವ ಪ್ರಯತ್ನ ಮಾಡಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು


ಅನ್ಯಾಯದ ವಿರುದ್ಧ ದನಿ ಎತ್ತಿದ ಮಾದರಿ ನಡೆ

ಮಡಿಕೇರಿಯ ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಕಚೇರಿಯಲ್ಲಿ ಮಹಿಳೆಯೊಬ್ಬರು ಪಡೆದಿದ್ದ ಸಾಲದ ಸಹಾಯಧನ ಮಂಜೂರಿಗಾಗಿ ಮೂವರು ಸಿಬ್ಬಂದಿ ಲಂಚಕ್ಕೆ ಬೇಡಿಕೆ ಇಟ್ಟು ಲೋಕಾಯುಕ್ತ ಬಲೆಗೆ ಬಿದ್ದಿರುವುದನ್ನು ತಿಳಿದು ಒಂದೆಡೆ ಖುಷಿಯಾದರೆ, ಇನ್ನೊಂದೆಡೆ ಬೇಸರವಾಯಿತು. ಭ್ರಷ್ಟಾಚಾರ ನಿಗ್ರಹಿಸಲು ಎಷ್ಟೆಲ್ಲ ಕಾನೂನುಗಳನ್ನೂ ತಂದರೂ ಈ ಪಿಡುಗು ನಿಲ್ಲದಿರುವುದು ನೋವಿನ ಸಂಗತಿ. ಹಾಗೆಯೇ ಆ ಮಹಿಳೆ ತಮಗಾಗುತ್ತಿದ್ದ ಅನ್ಯಾಯದ ವಿರುದ್ಧ ದನಿ ಎತ್ತಿದ್ದು ಖುಷಿ ತಂದಿತು. ತಮ್ಮ ಅಗತ್ಯಗಳಿಗೆ ಹಣ ಇಲ್ಲದ ಜನಸಾಮಾನ್ಯರು ಸಾಲ ಪಡೆಯುತ್ತಾರೆ. ಹೀಗಿರುವಾಗ, ಅದಕ್ಕೂ ಲಂಚ ಕೇಳಿದರೆ ಅವರು ಎಲ್ಲಿಂದ ತರಬೇಕು?

ಪೂಜಾ ಎಸ್., ಕಲಬುರಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,764
ಇಂದಿನ ಅಂತ್ಯ	17,721
▼	43
ದಿನದ ಕನಿಷ್ಠ	17,811

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹63
ಮೈಸೂರು	
100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1630 (1640)
ಸೋಯಾ (ರಿಫೈನ್ಡ್)	₹1160 (1145)
ಸೂರ್ಯಕಾಂತಿ (ರಿಫೈನ್ಡ್)	₹1160 (1155)
ಪಾಮೋಲಿನ್	₹945 (935)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹139
ಆರ್‌ಎಸ್‌ಎಸ್-5	₹134
ಗುಡ್ ಲಾಟ್	₹129

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1,200-1,400
ಮಧ್ಯಮ	₹1,000-1,200
ಸಣ್ಣ	₹600-1,000

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹495-666
ದ್ವಿತಳಿ (ಬಿ.ವಿ)	₹422-806

ಮುಂಬೈ ಧಾರಣೆ

ಶೇಂಗಾ

7–2–2023

ಜಾವಾ 70/80(ಹೊಸ)	12250-12300
ಜಾವಾ 80/90(ಹೊಸ)	11250-11300
ದಪ್ಪ ಮಧ್ಯಪ್ರದೇಶ(ಹೊಸ)	10650-10750
ದಪ್ಪ ಗುಜರಾತ್(ಹೊಸ)	11700-11800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1640 (1650)
ಒಂದು ವಾರದ ಡೆಲಿವರಿ	1635 (1645)
ಸೋಯಾ ಕಚ್ಚಾ	1070 (1050)
ಪಾಮ್ ವಾರದ ಡೆಲಿವರಿ	943 (933)
ಸೂರ್ಯಕಾಂತಿ ಎಣ್ಣೆ ಕಚ್ಚಾ	1070 (1060)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
57000(57150)
ಬೆಳ್ಳಿ ಕೆ.ಜಿ 67050(67550)

ಆವರಣದಲ್ಲಿ ಮಂಗಳವಾರದ ಧಾರಣೆ

ಕೊಬ್ಬರಿ ಧಾರಣೆ

ಅರಸೀಕೆರೆ	₹10625-10775
ಹುಳಿಯಾರು (ಉಂಡೆ)	₹10400-10850
ತುರುವೇಕೆರೆ	₹10500-10800

ಸುಧಾ, ಮಯೂರ ಓದಿರಿ

ವೊಡಾಫೋನ್ ಐಡಿಯಾ: ಕೇಂದ್ರದ ಪಾಲು ಶೇ 33

ನವದೆಹಲಿ (ಪಿಟಿಐ): ಸಾಲದ ಸುಳಿಯಲ್ಲಿ ಸಿಲುಕಿರುವ ದೂರಸಂಪರ್ಕ ಸೇವಾ ಕಂಪನಿ ವೊಡಾಫೋನ್ ಐಡಿಯಾದ ಆಡಳಿತ ಮಂಡಳಿಯು ₹ 16,133 ಕೋಟಿ ಮೌಲ್ಯದ ಈಕ್ವಿಟಿ ಷೇರುಗಳನ್ನು ಕೇಂದ್ರ ಸರ್ಕಾರಕ್ಕೆ ವರ್ಗಾಯಿಸಲು ಒಪ್ಪಿಗೆ ನೀಡಿದೆ. ಇಷ್ಟು ಮೌಲ್ಯದ ಷೇರುಗಳನ್ನು ವರ್ಗಾವಣೆ ಮಾಡಿದ ನಂತರದಲ್ಲಿ ಕಂಪನಿಯಲ್ಲಿ ಕೇಂದ್ರ ಸರ್ಕಾರದ ಪಾಲು ಶೇಕಡ 33.44 ಆಗಲಿದೆ.

ಹೊಂದಾಣಿಕೆ ಮಾಡಿದ ಒಟ್ಟು ವರಮಾನ ಪಾವತಿಯನ್ನು ಮುಂದಕ್ಕೆ ಹಾಕಿದ್ದರಿಂದ ಪಾವತಿ ಮಾಡಬೇಕಿರುವ ಬಾಕಿ ಬಡ್ಡಿ ಹಾಗೂ ತರಂಗಾಂತರ ಹರಾಜು ಪಾವತಿಗಳ ಬಾಕಿ ಮೊತ್ತವನ್ನು ಕೇಂದ್ರ ಸರ್ಕಾರಕ್ಕೆ ಈಕ್ವಿಟಿ ಷೇರುಗಳ ರೂಪದಲ್ಲಿ ನಿಡಲಾಗುತ್ತಿದೆ ಎಂದು ಕಂಪನಿಯು ಷೇರುಪೇಟೆಗೆ ಮಂಗಳವಾರ ತಿಳಿಸಿದೆ.

ಕಂಪನಿಯನ್ನು ಮುನ್ನಡೆಸುವ ಹಾಗೂ ಅಗತ್ಯ ಬಂಡವಾಳವನ್ನು ತರುವ ಖಚಿತ ಭರವಸೆಯು ಆದಿತ್ಯ ಬಿರ್ಲಾ ಸಮೂಹದ ಕಡೆಯಿಂದ ದೊರೆತ ನಂತರದಲ್ಲಿ ಕೇಂದ್ರ ಸರ್ಕಾರವು ತನಗೆ ಬರಬೇಕಿರುವ ಬಾಕಿ ಮೊತ್ತವನ್ನು ಈಕ್ವಿಟಿ ಷೇರುಗಳ ರೂಪದಲ್ಲಿ ಪಾವತಿ ಮಾಡುವುದಕ್ಕೆ ಒಪ್ಪಿಗೆ ನೀಡಿತ್ತು.

ಅದಾನಿ ಸಮೂಹಕ್ಕೆ ಸಾಲ: ಬ್ಯಾಂಕ್‌ಗಳಿಗೆ ಅಪಾಯವಿಲ್ಲ

ನವದೆಹಲಿ (ಪಿಟಿಐ): ದೇಶದ ಬ್ಯಾಂಕ್‌ಗಳು ಅದಾನಿ ಸಮೂಹಕ್ಕೆ ನೀಡಿರುವ ಸಾಲದ ಪ್ರಮಾಣವು ಅವುಗಳ ಸಾಲ ನೀಡುವ ಸಾಮರ್ಥ್ಯದ ಮೇಲೆ ಪರಿಣಾಮ ಬೀರುವಷ್ಟು ದೊಡ್ಡದಾಗಿ ಇಲ್ಲ ಎಂದು ಜಾಗತಿಕ ಮಟ್ಟದ ರೇಟಿಂಗ್ ಏಜೆನ್ಸಿಗಳಾದ ಫಿಚ್ ಮತ್ತು ಮೂಡಿಸ್ ಹೇಳಿವೆ.

‘ಅದಾನಿ ಸಮೂಹಕ್ಕೆ ನೀಡಿರುವ ಸಾಲವು ಬ್ಯಾಂಕ್‌ಗಳ ಸಾಲ ನೀಡುವ ಸಾಮರ್ಥ್ಯಕ್ಕೆ ಗಣನೀಯವಾಗಿ ಅಪಾಯ ತರುವ ಮಟ್ಟದಲ್ಲಿ ಇಲ್ಲ’ ಎಂದು ಫಿಚ್ ಹೇಳಿದೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಅದಾನಿ ಸಮೂಹಕ್ಕೆ ನೀಡಿರುವ ಸಾಲದ ಪ್ರಮಾಣವು ಖಾಸಗಿ ಬ್ಯಾಂಕ್‌ಗಳು ನೀಡಿರುವ ಸಾಲಕ್ಕಿಂತ ಹೆಚ್ಚಿದೆ. ಆದರೆ, ಸರ್ಕಾರಿ ಬ್ಯಾಂಕ್‌ಗಳು ನೀಡಿರುವ ಸಾಲವು ಅವುಗಳ ಒಟ್ಟು ಸಾಲದ ಶೇ 1ಕ್ಕಿಂತ ಕಡಿಮೆ ಎಂದು ಮೂಡಿಸ್ ಹೇಳಿದೆ.

‘ಕಾರ್ಪೊರೇಟ್ ಸಂಸ್ಥೆಗಳು ಈಚಿನ ಕೆಲವು ವರ್ಷಗಳಲ್ಲಿ ತಮ್ಮ ಸಾಲದ ಹೊರೆಯನ್ನು ತಗ್ಗಿಸಿಕೊಂಡಿವೆ. ಬ್ಯಾಂಕ್‌ಗಳು ಕಾರ್ಪೊರೇಟ್ ವಲಯಕ್ಕೆ ನೀಡಿರುವ ಸಾಲದ ಮೊತ್ತದಲ್ಲಿ ಹೆಚ್ಚಿನ ಬೆಳವಣಿಗೆ ಆಗಿಲ್ಲದಿರುವುದು ಇದನ್ನು ಸ್ಪಷ್ಟಪಡಿಸುತ್ತಿದೆ’ ಎಂದು ಮೂಡಿಸ್ ಹೇಳಿದೆ.

ಅಗತ್ಯ ಎದುರಾದರೆ ಬ್ಯಾಂಕ್‌ಗಳಿಗೆ ಸರ್ಕಾರದ ಕಡೆಯಿಂದ ವಿಶೇಷ ಬೆಂಬಲ ಸಿಗುತ್ತದೆ ಎಂಬ ನಿರೀಕ್ಷೆ ಕೂಡ ಬ್ಯಾಂಕ್‌ಗಳ ರೇಟಿಂಗ್ಸ್ ತೀರ್ಮಾನಿಸುವಾಗ ಪರಿಗಣನೆಗೆ ಬರುತ್ತದೆ ಎಂದು ಫಿಚ್ ಹೇಳಿದೆ.

ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು, ಅದಾನಿ ಸಮೂಹದ ವಿರುದ್ಧ ಆರೋಪಗಳಿರುವ ವರದಿ ಪ್ರಕಟಿಸಿದ ನಂತರದಲ್ಲಿ ಸಮೂಹದ ಕಂಪನಿಗಳ ಷೇರುಮೌಲ್ಯ ಕುಸಿದಿದೆ. ವರದಿಯನ್ನು ಸಮೂಹವು ಅಲ್ಲಗಳೆದಿದೆ.

ಫಿಚ್ ಸಂಸ್ಥೆಯು ಎಚ್ಚರಿಕೆಯ ಒಂದು ಮಾತನ್ನು ಕೂಡ ಹೇಳಿದೆ. ಅದಾನಿ ಸಮೂಹಕ್ಕೆ ಸಂಬಂಧಿಸಿದಂತೆ ಈಗ ಆಗುತ್ತಿರುವ ಬೆಳವಣಿಗೆಯು ಮಧ್ಯಮಾವಧಿಯಲ್ಲಿ ಭಾರತದ ಆರ್ಥಿಕ ಬೆಳವಣಿಗೆಯ ಮೇಲೆ ಕೆಟ್ಟ ಪರಿಣಾಮ ಉಂಟುಮಾಡಬಹುದು ಎಂದು ಫಿಚ್ ಅಂದಾಜು ಮಾಡಿದೆ.

‘ಅದಾನಿ ಸಮೂಹಕ್ಕೆ ಸಂಬಂಧಿಸಿದ ಬೆಳವಣಿಗೆಗಳ ಕೆಟ್ಟ ಪರಿಣಾಮವಾಗಿ ಭಾರತದ ಇತರ ಕಾರ್ಪೊರೇಟ್ ಕಂಪನಿಗಳಿಗೆ ಬಂಡವಾಳ ತರುವುದು ದುಬಾರಿಯ ಬಾಬತ್ತಾಗಬಹುದು. ಆದರೆ ಇಂತಹ ಅಪಾಯ ಎದುರಾಗುವ ಸಾಧ್ಯತೆ ಕಡಿಮೆ’ ಎಂದು ಫಿಚ್ ಹೇಳಿದೆ.

ದೇಶದ ಮೂಲಸೌಕರ್ಯ ನಿರ್ಮಾಣ ವಲಯದಲ್ಲಿ ಅದಾನಿ ಸಮೂಹವು ಮಹತ್ವದ ಪಾತ್ರ ನಿಭಾಯಿಸುತ್ತ ಬಂದಿದೆ ಎಂದು ಫಿಚ್ ಹೇಳಿದೆ. ‘ಸರ್ಕಾರ ಹೊಂದಿರುವ ಮೂಲಸೌಕರ್ಯ ನಿರ್ಮಾಣ ಯೋಜನೆಗಳಿಗೆ ಕೊಡುಗೆ ನೀಡುವ ಸಮೂಹದ ಯೋಜನೆಗಳಿಗೆ ತೊಂದರೆ ಆದಲ್ಲಿ, ದೇಶದ ಸುಸ್ಥಿರ ಆರ್ಥಿಕ ಬೆಳವಣಿಗೆ ದರವು ತಗ್ಗಬಹುದು. ಆದರೆ ದೇಶದ ಬೆಳವಣಿಗೆಯ ಮೇಲಿನ ಪರಿಣಾಮವು ಸಣ್ಣದಾಗಿರುತ್ತದೆ ಎಂಬುದು ನಮ್ಮ ನಂಬಿಕೆ’ ಎಂದು ಫಿಚ್ ವಿವರಿಸಿದೆ.

ಚೆನ್ನೈನಲ್ಲಿ ಎಸ್‌ಎಂಇ ಶೃಂಗ

ಬೆಂಗಳೂರು: ಎಸ್‌ಎಂಇ ಚೇಂಬರ್ ಆಫ್ ಇಂಡಿಯಾ ಮತ್ತು ಭಾರತೀಯ ಎಸ್‌ಎಂಇ ಸಂಘಟನೆಗಳ ಒಕ್ಕೂಟವು ಒಟ್ಟಾಗಿ ರಾಷ್ಟ್ರ ಮಟ್ಟದ ‘ಭಾರತದ ತಯಾರಕರು ಮತ್ತು ಎಸ್‌ಎಂಇ ಶೃಂಗ’ವನ್ನು ಫೆಬ್ರುವರಿ 17ರಂದು ಆಯೋಜಿಸುತ್ತಿವೆ. ಇದು ಚೆನ್ನೈನ ಹೋಟೆಲ್ ವೆಸ್ಟಿನ್‌ನಲ್ಲಿ ನಡೆಯಲಿದೆ.

ಪ್ರವರ್ಧಮಾನಕ್ಕೆ ಬರುತ್ತಿರುವ ವಾಣಿಜ್ಯ ಅವಕಾಶಗಳು, ರಫ್ತು ಹಾಗೂ ಹೂಡಿಕೆ ಅವಕಾಶಗಳು ಎಂಬು ವಿಷಯವನ್ನು ಕೇಂದ್ರವಾಗಿ ಇರಿಸಿಕೊಂಡು ಈ ಶೃಂಗ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ತಮಿಳುನಾಡು ವಾಣಿಜ್ಯ ವೇದಿಕೆ, ಎಸ್‌ಬಿಐ ಮತ್ತು ಯೆಸ್ ಬ್ಯಾಂಕ್, ಎಸ್‌ಎಂಇ ಹೂಡಿಕೆ ಉತ್ತೇಜನ ಮಂಡಳಿ ಹಾಗೂ ಇತರ ಕೆಲವು ಸಂಸ್ಥೆಗಳು ಈ ಶೃಂಗಕ್ಕೆ ಬೆಂಬಲ ನೀಡಿವೆ ಎಂದು ಎಸ್‌ಎಂಇ ಚೇಂಬರ್ ಆಫ್ ಇಂಡಿಯಾ ಅಧ್ಯಕ್ಷ ಚಂದ್ರಕಾಂತ ಸಾಲುಂಕೆ ಹೇಳಿದ್ದಾರೆ.

ಶೃಂಗದಲ್ಲಿ ಪಾಲ್ಗೊಳ್ಳಲು ಬಯಸುವವರು ಈ ಇ–ಮೇಲ್ ವಿಳಾಸಗಳ ಮೂಲಕ ಸಂಪರ್ಕಿಸಬಹುದು: director@smechamber.com ಅಥವಾ registration@smechamber.in.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ನಾಗರಾಜ್, ದೊಡ್ಡಬಳ್ಳಾಪುರ

ಪ್ರಶ್ನೆ: ನಾನು ಹಿರಿಯ ನಾಗರಿಕ, ವಯಸ್ಸು ಸುಮಾರು 69 ವರ್ಷ. ನನಗೆ ಮೂವರು ತಂಗಿಯರು ಹಾಗೂ ಇಬ್ಬರು ಅಣ್ಣಂದಿರಿದ್ದಾರೆ. ನನಗೆ ನನ್ನ ಮುತ್ತಾತನ, ಸುಮಾರು 80-85 ವರ್ಷ ಹಳೆಯ ಆಸ್ತಿ ಬಂದಿರುತ್ತದೆ. ಸರ್ಕಾರಿ ಬೆಲೆ ₹ 4.80 ಲಕ್ಷ ಇರುವ ಈ ಆಸ್ತಿಯನ್ನು ಮಾರುಕಟ್ಟೆ ಮೌಲ್ಯ ₹ 17.80 ಲಕ್ಷಕ್ಕೆ 2021ರ ಮಾರ್ಚ್ 28ರಂದು ಮಾರಿದ್ದೇನೆ. ಖರೀದಿಸಿದವರು ₹ 13 ಲಕ್ಷಕ್ಕೆ ಆರ್‌ಟಿಜಿಎಸ್ ಹಾಗೂ ಉಳಿದ ಮೊತ್ತ ₹ 4.80 ಲಕ್ಷವನ್ನು ಡಿ.ಡಿ ಮೂಲಕ ಪಾವತಿಸಿದ್ದಾರೆ. ಅದನ್ನು ನಾವು 6 ಜನ ಸಮವಾಗಿ ಹಂಚಿಕೊಂಡಿದ್ದೇವೆ. ಈಗ ಇರುವ ಪ್ರಶ್ನೆ, ಇದಕ್ಕೆ ಬಂಡವಾಳ ವೃದ್ಧಿ ತೆರಿಗೆ ಬರುತ್ತದೆಯೇ? ಬಂದರೆ ಎಷ್ಟು? ನನ್ನ ವಾರ್ಷಿಕ ಆದಾಯ ₹ 3 ಲಕ್ಷಕ್ಕಿಂತ ಕಡಿಮೆ. ನಾನು ಆದಾಯ ತೆರಿಗೆ ವಿವರ ಸಲ್ಲಿಸಬೇಕೇ?

ಉತ್ತರ: ಬಂಡವಾಳ ಆಸ್ತಿ ಮಾರಾಟದಿಂದ ಆಗುವ ಲಾಭ, ನಷ್ಟವು ಆಸ್ತಿ ಮಾರಾಟ ಅಥವಾ ವರ್ಗಾವಣೆ ಆದ ವರ್ಷದಲ್ಲಿ ತೆರಿಗೆಗೆ ಒಳಪಡುತ್ತದೆ. ಇಲ್ಲಿ, ಮಾರಾಟ ಮಾಡಿದ ವ್ಯಕ್ತಿ ಆಸ್ತಿಯ ಒಡೆತನ ಹೊಂದಿರಬೇಕು ಅಥವಾ ಆ ಆಸ್ತಿಯ ಸ್ವಾಮ್ಯತ್ವದಲ್ಲಿ ಪಾಲುದಾರನಾಗಿರಬೇಕು.

ನಿಮ್ಮ ಮಾಹಿತಿಯಂತೆ, ಮೊದಲ ಹಂತದಲ್ಲಿ ನೀವೊಬ್ಬರೇ ಆ ಆಸ್ತಿಗೆ ಮಾಲೀಕರಂತೆ ಗೋಚರಿಸುತ್ತದೆ ಹಾಗೂ ನಿಮ್ಮ ಮುತ್ತಾತನ ಆಸ್ತಿಯ ಮಾರಾಟದಿಂದ ಬಂದ ಮೊತ್ತವನ್ನು ನಿಮ್ಮೊಳಗೆ ಸಮಾನವಾಗಿ ಹಂಚಿಕೊಂಡಿದ್ದೀರಿ. ಈ ಹಂಚಿಕೆಯು ಸಹೋದರ-ಸಹೋದರಿಯರ ಆಂತರಿಕ ವಿಚಾರ. ಮೂಲತಃ ನೀವೊಬ್ಬರೇ ಆ ಆಸ್ತಿಯ ಒಡೆತನ ಹೊಂದಿದವರಾಗಿದ್ದರೆ, ನೀವು ಸಂಪೂರ್ಣ ತೆರಿಗೆಗೆ ಬಾಧ್ಯಸ್ಥರು. ಆದರೆ ಆಸ್ತಿಯಲ್ಲಿ ಅನೇಕ ಮಂದಿ ಹಕ್ಕು ಹೊಂದಿ ಅಂತಹ ಆಸ್ತಿ ಮಾರಾಟ ಮಾಡಿದಾಗ ಬರುವ ಲಾಭಕ್ಕೆ ತಮ್ಮ ಪಾಲಿಗನುಗುಣವಾಗಿ ತೆರಿಗೆ ಬರುತ್ತದೆ. ನಿಮ್ಮ ಆಸ್ತಿ ತುಂಬಾ ಹಿಂದಿನ ಕಾಲದ್ದಾದ ಕಾರಣ ಇದರ ಖರೀದಿ ಮೌಲ್ಯ ಊಹಿಸುವುದು ಕಷ್ಟ. ಇಂತಹ ಸಂದರ್ಭದಲ್ಲಿ 2001ರ ಏಪ್ರಿಲ್ 1ರ ದಿನಾಂಕದಂದು ಇದ್ದ ಆಸ್ತಿಯ ಬೆಲೆ ನಿರ್ಣಯಿಸಿ ಅದನ್ನು ಮಾರಾಟವಾದ ವರ್ಷದಲ್ಲಿ ಹಣದುಬ್ಬರ ಮೌಲ್ಯಾಂಕಕ್ಕೆ ತಾಳೆ ಮಾಡಿ ಪ್ರಸ್ತುತ ಅಂದಾಜು ಮೌಲ್ಯ ನಿರ್ಣಯಿಸಲಾಗುತ್ತದೆ. ಇದಕ್ಕಿಂತ ಹೆಚ್ಚಿನ ಮೊತ್ತ ಬಂದಿದ್ದರೆ ಲಾಭವೆಂದು ಪರಿಗಣಿಸಿ ಸೆಸ್ ಮೊತ್ತ ಸೇರಿಸಿ ಶೇ 20.80ರ ತೆರಿಗೆ ವಿಧಿಸಲಾಗುತ್ತದೆ.

ನಿಮ್ಮ ಈ ವ್ಯವಹಾರ ಆರ್ಥಿಕ ವರ್ಷ 2020-21ರಲ್ಲೇ ನಡೆದಿರುವ ಕಾರಣ ಆ ವರ್ಷವೇ ತೆರಿಗೆಗೊಳಪಡಬೇಕಾಗಿತ್ತು. ಆ ವರ್ಷದ ವಿವರ ಸಲ್ಲಿಸುವ ಕಾಲಾವಧಿ ಮುಗಿದಿದೆ. ನಿಮ್ಮ ಒಟ್ಟು ತೆರಿಗೆ ಆದಾಯ ₹ 3 ಲಕ್ಷ ಮೀರಿದಲ್ಲಿ ತೆರಿಗೆ ವಿವರ ಸಲ್ಲಿಸಬೇಕು. ಹೀಗಾಗಿ ನೀವು ಹೆಚ್ಚಿನ ಮಾಹಿತಿಯೊಂದಿಗೆ ಸ್ಥಳೀಯ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ.

ಪ್ರಕೃತಿ ಪ. ದೊಡ್ಡಮನಿ, ಹುಲಗಂಜಿಕೊಪ್ಪ, ಧಾರವಾಡ

ಪ್ರಶ್ನೆ: ನಮ್ಮ ತಂದೆ ಕಾಲೇಜು ಉಪನ್ಯಾಸಕರಾಗಿದ್ದು, ಅವರಿಗೆ ನಾವು ಮೂವರು ಹೆಣ್ಣುಮಕ್ಕಳು. ಔಷಧ, ಮನೆ ಖರ್ಚು ಹಾಗೂ ನಮ್ಮ ಓದಿನ ಸಲುವಾಗಿ ತಿಂಗಳಿಗೆ ಸುಮಾರು ₹ 45,000 ಖರ್ಚು ಇದೆ. ತಂದೆಯ ತಿಂಗಳ ಆದಾಯ ₹ 75,000 (ವರ್ಷಕ್ಕೆ ₹ 9 ಲಕ್ಷ). ನಾವು ಯಾವುದೇ ಉಳಿತಾಯ, ವಿಮೆ ಇತ್ಯಾದಿ ಮಾಡಿಲ್ಲ. ಈಗ ಸುಮಾರು ₹ 70,000 ಆದಾಯ ತೆರಿಗೆ ಕಟ್ಟಬೇಕೆಂದು ಆದೇಶವಾಗಿದೆ. ಆದಾಯ ತೆರಿಗೆ ಹೇಗೆ ತಗ್ಗಿಸಬೇಕು? ಉಳಿತಾಯ ಹೇಗೆ ಮಾಡಬೇಕು? ತಿಳಿಸಿ.

ಉತ್ತರ: ಪ್ರಸ್ತುತ ಆರ್ಥಿಕ ವರ್ಷಕ್ಕೆ (2022-23) ಸಂಬಂಧಿಸಿ ಯಾವ ತೆರಿಗೆ ಪದ್ಧತಿ ಅನುಸರಿಸಿ ತೆರಿಗೆ ಲೆಕ್ಕ ಹಾಕಲಾಗುತ್ತಿದೆ ಎಂಬುದನ್ನು ಗಮನಿಸಿ. ಒಂದು ವೇಳೆ ಹಳೆಯ ಪದ್ಧತಿ ಅನುಸರಿಸಿದರೆ ಯಾವುದೇ ಹೂಡಿಕೆ ಇರದ ಸಂದರ್ಭದಲ್ಲಿ ಹೆಚ್ಚಿನ ತೆರಿಗೆ ಬರುವ ಸಾಧ್ಯತೆಗಳಿವೆ. ಇಂತಹ ಪರಿಸ್ಥಿತಿಯಲ್ಲಿ ನೀವು ಹೊಸ ತೆರಿಗೆ ಪದ್ಧತಿಗೂ ಹೋಗಬಹುದು. ಇದರಲ್ಲಿ ತೆರಿಗೆ ದರ ಪ್ರತಿ ₹ 2.50 ಲಕ್ಷ ಆದಾಯಕ್ಕೆ ಶೇ 5ರಷ್ಟು ವ್ಯತ್ಯಾಸವಾಗುತ್ತದೆ. ತೆರಿಗೆ ಉಳಿತಾಯಕ್ಕೆ ಯಾವುದೇ ಹೂಡಿಕೆ ಮಾಡಲು ವೈಯಕ್ತಿಕ ಖರ್ಚು ವೆಚ್ಚಗಳ ಕಾರಣಕ್ಕೆ ಸಾಧ್ಯವಿಲ್ಲದಿದ್ದರೆ ಅಥವಾ ಆ ಬಗ್ಗೆ ಉತ್ಸುಕರಲ್ಲದ ತೆರಿಗೆದಾರರಿಗೆ ಹೊಸ ತೆರಿಗೆ ಪದ್ಧತಿ ಅನುಸರಿಸುವ ಅವಕಾಶವಿದೆ. ಇದರಂತೆ ನಿಮ್ಮ ಸನ್ನಿವೇಶದಲ್ಲಿ ನೇರವಾಗಿ ₹ 2.50 ಲಕ್ಷದಿಂದ ₹ 5 ಲಕ್ಷದತನಕ ಶೇ 5ರಷ್ಟು, ₹ 5 ಲಕ್ಷದಿಂದ ₹ 7.50 ಲಕ್ಷಕ್ಕೆ ಶೇ 10ರಷ್ಟು ಹಾಗೂ ₹ 7.50 ಲಕ್ಷದಿಂದ ₹ 10 ಲಕ್ಷದ ತನಕ ಶೇ 15ರಷ್ಟು ತೆರಿಗೆ ಇರುತ್ತದೆ ಮತ್ತು ಶೇ 4ರಷ್ಟು ಸೆಸ್ ಇದೆ. ಇದರಂತೆ ಹೆಚ್ಚೆಂದರೆ ₹ 62,400 ತೆರಿಗೆ ಇರುತ್ತದೆ.

ಹೂಡಿಕೆಯಲ್ಲಿ ಆಸಕ್ತಿ ಇದ್ದು ಇದರಲ್ಲಿ ತೊಡಗಿಸಿಕೊಳ್ಳುವುದೇ ಆಗಿದ್ದರೆ, ಸಾಂಪ್ರದಾಯಿಕ ಹೂಡಿಕೆ ಯೋಜನೆಗಳಲ್ಲಿ ಅವಕಾಶವಿದೆ. ವೇತನದಲ್ಲಿ ಪಿ.ಎಫ್ ಕಡಿತವಾಗುತ್ತಿದ್ದರೆ ಅದು ಹೂಡಿಕೆಯ ಒಂದು ಭಾಗವೇ. ನಿಮ್ಮ ಶಿಕ್ಷಣಕ್ಕಾಗಿ ಪಾವತಿಸುವ ಶುಲ್ಕವೂ ತೆರಿಗೆ ಉಳಿಸಲು ಪರಿಗಣಿತವಾಗುತ್ತದೆ. ಜೀವ ವಿಮೆ, ಪಿಪಿಎಫ್, ತೆರಿಗೆ ಉಳಿತಾಯದ ಐದು ವರ್ಷಗಳ ಎಫ್.ಡಿ, ತೆರಿಗೆ ಉಳಿತಾಯಕ್ಕೆ ಸಂಬಂಧಿತ ಮ್ಯೂಚುವಲ್ ಫಂಡ್ (ಇಎಲ್‌ಎಸ್‌ಎಸ್) ಇತ್ಯಾದಿಗಳಲ್ಲಿ ಮೊದಲು ತೊಡಗಿಸಿಕೊಳ್ಳಬಹುದು. ನಿವೃತ್ತಿಗಾಗಿ ಎನ್‌ಪಿಎಸ್ ಯೋಜನೆಯಲ್ಲಿ ಹೂಡಿಕೆ ಮಾಡಬಹುದು. ಮುಂದಿನ ಐದು ವರ್ಷ ಹಣ ಹೊಂದಿಸಿಕೊಂಡು ಪ್ರತಿ ವರ್ಷ ತೆರಿಗೆ ಉಳಿತಾಯದ ಎಫ್.ಡಿ.ಯಲ್ಲಿ ತೊಡಗಿಸಿದರೆ ಆರನೆಯ ವರ್ಷದ ನಂತರ, ಮೊದಲ ವರ್ಷದಲ್ಲಿರಿಸಿದ ಹಣ ಮರು ಹೂಡಿಕೆಗೆ ಸಿಗುತ್ತದೆ. ಇದರೊಡನೆ ಒಂದಷ್ಟು ಬಡ್ಡಿಯೂ ಬರುತ್ತದೆ. ಈ ಎಲ್ಲ ಹೂಡಿಕೆಗಳಿಗೆ ಆದಾಯ ತೆರಿಗೆಯ ಸೆಕ್ಷನ್ 80 ಸಿ ಅಡಿ ತೆರಿಗೆ ಲಾಭಗಳಿವೆ. ತೆರಿಗೆ ವಿನಾಯಿತಿ ದೃಷ್ಟಿಯಿಂದ ಒಟ್ಟಾರೆ ವಾರ್ಷಿಕ ₹ 1.50 ಲಕ್ಷ ಹೂಡಿಕೆಗೆ ಅವಕಾಶವಿದೆ. ಇಲ್ಲಿ ಹೇಳಿರುವ ಉಳಿತಾಯಗಳು ಹಳೆಯ ಪದ್ಧತಿ ಅನುಸರಿಸುವವರಿಗೆ ಮಾತ್ರವಾದರೂ, ಉಳಿತಾಯದ ದೃಷ್ಟಿಯಲ್ಲಿ ಹೂಡಿಕೆಗಳು ಭವಿಷ್ಯದಲ್ಲಿ ಆರ್ಥಿಕ ನೆರವು ನೀಡುವುದರಲ್ಲಿ ಸಂದೇಹವಿಲ್ಲ.

ನಿಮ್ಮ ತಂದೆಯವರು ವೃತ್ತಿಯಲ್ಲಿ ಪ್ರಾಧ್ಯಾಪಕರಾಗಿರುವುದರಿಂದ ತೆರಿಗೆಯ ವಿಚಾರವಾಗಿ ಅಗತ್ಯ ಮಾಹಿತಿ ಅಥವಾ ದಾಖಲೆಗಳನ್ನು ಅವರ ಕಾಲೇಜಿನ ಸಂಬಂಧಪಟ್ಟ ವಿಭಾಗಕ್ಕೆ ಕೊಟ್ಟು ತೆರಿಗೆಯ ಪ್ರಮಾಣವನ್ನು ಇನ್ನಷ್ಟು ತಗ್ಗಿಸಬಹುದು. ಹಳೆಯ ಹಾಗೂ ಹೊಸ ತೆರಿಗೆ ಪದ್ಧತಿಯಡಿ ಬರುವ ತೆರಿಗೆ ಅರಿತು ಅದರ ಅಗತ್ಯಕ್ಕೆ ತಕ್ಕಂತೆ ಮುಂದಿನ ಹೂಡಿಕೆ ನಿರ್ಧಾರ ಕೈಗೊಳ್ಳಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001
ಇ–ಮೇಲ್:**businessdesk@prajavani.co.in**

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	350-400
ನಡುಗೋಲು	480-500
ರಾಶಿ	550-600
ರಾಶಿ ಉತ್ತಮ	650-700
ಜರಡಿ	700 - 750
ಹೆರಕಿದ್ದು	1,150-1,200
ಹಸಿರು ಸಾಧಾರಣ	700-750
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,350-1,450
ಕಾಳು ಮೆಣಸು	- 480
ಅಡಿಕೆ	
ಬಂಟ್ವಾಳ	
ಕೋಕ	12,500-25,000
ಹೊಸತು	22,500-40,000
ಹಳತು	48,000-54,500
ಭದ್ರಾವತಿ	
ರಾಶಿ	38,199-46,319
ಚನ್ನಗಿರಿ	
ರಾಶಿ	45,199-46,899
ಕಾರ್ಕಳ	
ಹೊಸತು	30,000-40,000
ಹಳತು	40,000-54,500
ಕೊಪ್ಪ	
ಬೆಟ್ಟೆ	48,099-52,539

ಇಡಿ	34,166-46,599
ಗೊರಬಲು	25,199-36,210
ಸರಕು	40,510-80,129
ಕುಂದಾಪುರ	
ಹಳೆಚಾಲಿ	40,000-49,500
ಹೊಸಚಾಲಿ	35,000-40,000
ಶಿಕಾರಿಪುರ	
ಆಪಿ	40,967-45,811
ಶಿವಮೊಗ್ಗ	
ಬೆಟ್ಟೆ	46,569-52,509
ಗೊರಬಲು	19,701-35,509
ರಾಶಿ	37,599-46,469
ಸರಕು	44,858-81,850
ಸಿದ್ದಾಪುರ	
ಬಿಳಿಗೋಟು	27,899-33,499
ಚಾಲಿ	37,399-39,900
ಕೋಕ	26,699-32,000
ಹೊಸಚಾಲಿ	31,499-35,599
ಕೆಂಪುಗೋಟು	28,099-33,299
ರಾಶಿ	42,309-45,799
ತಟ್ಟಿಬೆಟ್ಟೆ	37,309-41,699
ಶಿರಸಿ	
ಬೆಟ್ಟೆ	28,029-42,801
ಬಿಳಿಗೋಟು	24,899-33,828
ಚಾಲಿ	34,000-41,039
ಕೆಂಪುಗೋಟು	24,296-35,400
ರಾಶಿ	39,669-45,669

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14,850	14900	14400	175.70 ಸೆಂಟ್ಸ್
ಎಸಿ	7,000	7150	6200	
ಆರ್‌ಪಿ	9,700	9600	8900	ಲಂಡನ್
ಆರ್‌ಸಿ	5,000	185	4500	2038 ಡಾಲರ್ಸ್

ನಿಯಮಗಳ ಅನುಸಾರವೇ ಎಲ್‌ಐಸಿಯಿಂದ ಹೂಡಿಕೆ: ಕೇಂದ್ರ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ತಾನು ಹೂಡಿಕೆಗಳನ್ನು ಮಾಡುವ ಸಂದರ್ಭದಲ್ಲಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುತ್ತಿರುವುದಾಗಿ ತಿಳಿಸಿದೆ ಎಂದು ಕೇಂದ್ರ ಸರ್ಕಾರವು ಸಂಸತ್ತಿಗೆ ವಿವರಿಸಿದೆ.

ಅದಾನಿ ಸಮೂಹದ ಕಂಪನಿಗಳಲ್ಲಿ ಎಲ್‌ಐಸಿ ಮಾಡಿರುವ ಹೂಡಿಕೆಯ ಬಗ್ಗೆ ಕಳವಳಗಳು ವ್ಯಕ್ತವಾಗಿರುವ ಸಂದರ್ಭದಲ್ಲಿ ಕೇಂದ್ರ ಈ ವಿವರಣೆ ನೀಡಿದೆ. ಅದಾನಿ ಸಮೂಹದ ಸಾಲಪತ್ರಗಳು ಹಾಗೂ ಷೇರುಗಳಲ್ಲಿ ಒಟ್ಟು ₹ 35,917 ಕೋಟಿ ಹೂಡಿಕೆ ಮಾಡಿರುವುದಾಗಿ ಎಲ್‌ಐಸಿ ಈಚೆಗೆ ತಿಳಿಸಿದೆ.

‘ಎಲ್‌ಐಸಿ ಮಾಡಿರುವ ಹೂಡಿಕೆಗಳಿಗೆ ಸಂಬಂಧಿಸಿದ ಬಹುತೇಕ ವಿವರಗಳು ಈಗಾಗಲೇ ಸಾರ್ವಜನಿಕವಾಗಿ ಲಭ್ಯವಿವೆ’ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಭಾಗವತ್ ಕರಾಡ್ ಅವರು ರಾಜ್ಯಸಭೆಗೆ ಮಂಗಳವಾರ ಮಾಹಿತಿ ನೀಡಿದ್ದಾರೆ.

ಅತ್ಯಂತ ಚಿಕ್ಕ ಕ್ಷುದ್ರಗ್ರಹ ಪತ್ತೆ

ವಾಷಿಂಗ್ಟನ್ (ಪಿಟಿಐ): ನಾಸಾದ ‘ಜೇಮ್ಸ್ ವೆಬ್’ ಬಾಹ್ಯಾಕಾಶ ದೂರದರ್ಶಕವನ್ನು ಬಳಸಿ ಯುರೋಪ್‌ನ ಖಗೋಳವಿಜ್ಞಾನಿಗಳು 100 ರಿಂದ 200 ಮೀಟರ್ ಉದ್ದವಿರುವ ಕ್ಷುದ್ರಗ್ರಹವೊಂದನ್ನು ಪತ್ತೆ ಹಚ್ಚಿದ್ದಾರೆ. ಈ ಕ್ಷುದ್ರಗ್ರಹದ ಗಾತ್ರವು, ರೋಮ್‌ನಲ್ಲಿರುವ ಕೊಲೊಸಿಯಂ ಬಯಲುರಂಗ ಮಂದಿರದಷ್ಟಿದೆ. ಜೇಮ್ಸ್ ವೆಬ್ ದೂರದರ್ಶಕ ಬಳಸಿ ಈವರೆಗೆ ಪತ್ತೆ ಹಚ್ಚಲಾಗಿರುವ ಆಕಾಶಕಾಯಗಳ ಪೈಕಿ ಇದು ಅತ್ಯಂತ ಚಿಕ್ಕದಾಗಿರಬಹುದು ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ಬಲೂನ್ ಅವಶೇಷಗಳನ್ನು ಚೀನಾಕ್ಕೆ ಹಿಂದಿರುಗಿಸುವುದಿಲ್ಲ: ಅಮೆರಿಕ

ವಾಷಿಂಗ್ಟನ್: ಅಟ್ಲಾಂಟಿಕ್ ಸಾಗರ ವ್ಯಾಪ್ತಿಯಲ್ಲಿ ಹಾರಾಟ ನಡೆಸುತ್ತಿದ್ದ ವೇಳೆ ತಾನು ಹೊಡೆದುರುಳಿಸಿರುವ ಕಣ್ಗಾವಲು ಬಲೂನ್‌ನ ಅವಶೇಷಗಳನ್ನು ಚೀನಾಕ್ಕೆ ಮರಳಿಸುವುದಿಲ್ಲ ಎಂದು ಅಮೆರಿಕ ಸ್ಪಷ್ಟಪಡಿಸಿದೆ.



ಜಾನ್ ಕಿರ್ಬಿ

‘ಬಲೂನ್‌ನ ಅವಶೇಷಗಳನ್ನು ಹಿಂದಿರುಗಿಸುವ ಉದ್ದೇಶ ಅಥವಾ ಯೋಜನೆ ಬಗ್ಗೆ ನನಗೆ ತಿಳಿದಿಲ್ಲ’ ಎಂದು ರಾಷ್ಟ್ರೀಯ ಭದ್ರತಾ ಮಂಡಳಿಯ ವಕ್ತಾರ ಜಾನ್ ಕಿರ್ಬಿ ಅವರು ಹೇಳಿದ್ದಾರೆ.

ಬೀಜಿಂಗ್ ವರದಿ: ಕಣ್ಗಾವಲು ಶಂಕೆಯಿಂದ ಅಮೆರಿಕ ತನ್ನ ಬಲೂನ್‌ಅನ್ನು ಹೊಡೆದುರುಳಿಸಿರುವ ಕುರಿತು ಮಂಗಳವಾರ ಪ್ರತಿಕ್ರಿಯಿಸಿರುವ ಚೀನಾ, ತನ್ನ ನ್ಯಾಯಬದ್ಧ ಹಕ್ಕುಗಳು ಹಾಗೂ ಹಿತಾಸಕ್ತಿಗಳ ರಕ್ಷಣೆಗೆ ಬದ್ಧ ಎಂದು ಹೇಳಿದೆ.

‘ಯೇತಿ ಏರ್‌ಲೈನ್ಸ್ ಅವಘಡ: ವಿದ್ಯುತ್ ಪೂರೈಕೆ ಇರಲಿಲ್ಲ’

ಕಠ್ಮಂಡು (ಪಿಟಿಐ): ಕಳೆದ ತಿಂಗಳು ನೇಪಾಳದ ಪೊಖರಾ ಬಳಿ ಪತನಗೊಂಡ ಯೇತಿ ಏರ್‌ಲೈನ್ಸ್‌ನ ವಿಮಾನವು ಇಳಿಯುತ್ತಿದ್ದ ಸಮಯದಲ್ಲಿ ಅದರ ಪ್ರೊಪೆಲ್ಲರ್‌ಗಳಿಗೆ ವಿದ್ಯುತ್ ಪೂರೈಕೆ ಇದ್ದಿರಲಿಲ್ಲ ಎಂದು ಸರ್ಕಾರ ನೇಮಕ ಮಾಡಿರುವ ತನಿಖಾ ತಂಡ ಹೇಳಿದೆ.

‘ವಿಮಾನ ಇಳಿಯುತ್ತಿದ್ದ ಸಂದರ್ಭದಲ್ಲಿ ಎರಡೂ ಎಂಜಿನ್‌ಗಳ ಪ್ರೊಪೆಲ್ಲರ್‌ಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿರಲಿಲ್ಲ ಎಂಬುದು ವಿಶ್ಲೇಷಣೆ ಹಾಗೂ ತನಿಖೆಯಿಂದ ತಿಳಿದುಬಂದಿದೆ’ ಎಂದು ತನಿಖಾ ತಂಡದ ಹೇಳಿಕೆಯನ್ನು ಉಲ್ಲೇಖಿಸಿ ‘ಮೈ ರಿಪಬ್ಲಿಕಾ’ ದೈನಿಕ ವರದಿ ಮಾಡಿದೆ.

ಯೇತಿ ಏರ್‌ಲೈನ್ಸ್‌ಗೆ ಸೇರಿದ ಎಟಿಆರ್–72 ವಿಮಾನವು ಜನವರಿ 15ರಂದು ನೇಪಾಳದ ರಾಜಧಾನಿ ಕಠ್ಮಂಡುವಿನಿಂದ ಹೊರಟಿತ್ತು. ಪೊಖರಾದ ನೂತನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನ ಇಳಿಯಬೇಕಿತ್ತು. ರನ್‌ವೇ ತಲುಪಲು ಕೇವಲ 12ರಿಂದ 15 ಸೆಕೆಂಡ್‌ಗಳಿರುವಾಗ ಅದು ಪತನವಾಗಿತ್ತು. ಈ ಘಟನೆಯಲ್ಲಿ ಐವರು ಭಾರತೀಯರು ಸೇರಿ 71 ಮಂದಿ ಮೃತಪಟ್ಟಿದ್ದರು.

ಸಂಕ್ಷಿಪ್ತ ಸುದ್ದಿ

ದ್ವೇಷ ಸಾಧಿಸುತ್ತಿರುವ ಪಾಕ್: ಭಾರತ ಟೀಕೆ

ವಿಶ್ವಸಂಸ್ಥೆ: ಕಾಶ್ಮೀರ ಸಮಸ್ಯೆಯನ್ನು ವಿಶ್ವಸಂಸ್ಥೆಯ ಸಾಮಾನ್ಯ ಅಧಿವೇಶನದಲ್ಲಿ (ಯುಎನ್‌ಜಿಎ) ಪ್ರಸ್ತಾಪಿಸಿದ್ದಕ್ಕೆ ಪಾಕಿಸ್ತಾನವನ್ನು ತರಾಟೆಗೆ ತೆಗೆದುಕೊಂಡಿರುವ ಭಾರತವು, ‘ಪಾಕಿಸ್ತಾನವು ನೆರೆಯ ದೇಶದ ಮೇಲೆ ಸಂಘಟಿತವಾಗಿ ದ್ವೇಷ ಸಾಧಿಸುತ್ತಿದೆ’ ಎಂದು ಆರೋಪಿಸಿದೆ.

‘ಪಾಕಿಸ್ತಾನವು ಪದೇ ಪದೇ ಭಾರತದ ಬಗ್ಗೆ ಸುಳ್ಳು ಹೇಳುತ್ತಿದೆ’ ಎಂದು ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಮಿಷನ್‌ನ ಕೌನ್ಸೆಲರ್ ರಾಜೇಶ್ ಪರಿಹಾರ್ ಹೇಳಿದ್ದಾರೆ.

‘ನನ್ನ ದೇಶದ ವಿರುದ್ಧ ಪಾಕಿಸ್ತಾನ ಪ್ರತಿನಿಧಿ ಮಾಡಿರುವ ಕ್ಷುಲ್ಲಕ ಟೀಕೆಗಳಿಗೆ ಪ್ರತಿಕ್ರಿಯಿಸದೇ ಇರಲು ಸಾಧ್ಯವಿಲ್ಲ ಮತ್ತು ಪದೇ ಪದೇ ಸುಳ್ಳು ಹೇಳುವ ಅವರ ಮನಸ್ಥಿತಿಗೆ ಸಹಾನುಭೂತಿ ಇದೆ’ ಎಂದಿದ್ದಾರೆ.

‘ಕೇಂದ್ರಾಡಳಿತ ಪ್ರದೇಶಗಳಾಗಿರುವ ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಕ್ ಭಾರತದ ಅವಿಭಾಜ್ಯ ಮತ್ತು ಬೇರ್ಪಡಿಸಲಾಗದ ಅಂಗವಾಗಿದೆ’ ಎಂದಿದ್ದಾರೆ.

ಮುಷರಫ್ ಅಂತ್ಯಕ್ರಿಯೆ

ಕರಾಚಿ (ಪಿಟಿಐ): ಭಾನುವಾರ ನಿಧನರಾದ ಪಾಕಿಸ್ತಾನದ ಮಾಜಿ ಮಿಲಿಟರಿ ಆಡಳಿತಾಧಿಕಾರಿ ಹಾಗೂ ಮಾಜಿ ಅಧ್ಯಕ್ಷ ಜನರಲ್ ಪರ್ವೇಜ್ ಮುಷರಫ್ ಅವರ ಅಂತ್ಯಕ್ರಿಯೆಯು ಸೇನೆಗೆ ಸೇರಿದ ಸ್ಮಶಾನದಲ್ಲಿ ಸಕಲ ಗೌರವದೊಂದಿಗೆ ನೆರವೇರಿತು. ಕುಟುಂಬಸ್ಥರು ಹಾಗೂ ಮಾಜಿ, ಹಾಲಿ ಅಧಿಕಾರಿಗಳು ಪಾಲ್ಗೊಂಡಿದ್ದರು.

ಇದಕ್ಕೂ ಮುನ್ನ ಕರಾಚಿಯ ಗುಲ್ ಮೊಹರ್ ಪೋಲೊ ಮೈದಾನದಲ್ಲಿ ನಡೆದ ನಮಾಜ್–ಎ–ಜನಜಾದಲ್ಲಿ (ಅಂತ್ಯಕ್ರಿಯೆಯ ಪ್ರಾರ್ಥನೆ) ಅಧ್ಯಕ್ಷ ಆರಿಫ್ ಅಲ್ವಿ ಅಥವಾ ಪ್ರಧಾನಿ ಶೆಹಬಾಜ್ ಷರೀಫ್ ಭಾಗವಹಿಸಿರಲಿಲ್ಲ. ಐಎಸ್‌ಐ ಮಾಜಿ ಮುಖ್ಯಸ್ಥರು ಹಾಗೂ ಇತರ ನಿವೃತ್ತ ಸೇನಾ ಅಧಿಕಾರಿಗಳು, ಕೆಲ ರಾಜಕಾರಣಿಗಳು ಪ್ರಾರ್ಥನೆಯಲ್ಲಿ ಹಾಜರಿದ್ದರು.

ಪರೋಕ್ಷ ಯುದ್ಧ ನಡೆಸುತ್ತಿರುವ ಪಾಕ್: ಲೆಫ್ಟಿನೆಂಟ್ ಜನರಲ್ ಉಪೇಂದ್ರ ದ್ವಿವೇದಿ

'ಅಸ್ತ್ರವಾಗಿ ಪಾಕ್‌ನಿಂದ ಮಾದಕವಸ್ತು ಬಳಕೆ'

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿ ಪರೋಕ್ಷ ಯುದ್ಧ ನಡೆಸುತ್ತಿರುವ ಪಾಕಿಸ್ತಾನ ಈಗ ಮಾದಕವಸ್ತುಗಳನ್ನು ತನ್ನ ಭಯೋತ್ಪಾದನಾ ಅಸ್ತ್ರವಾಗಿ ಬಳಸುತ್ತಿದೆ ಎಂದು ಸೇನೆಯ ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸೇನೆಯ ಉತ್ತರ ವಲಯದ ಕಮಾಂಡ್‌ನ ಮುಖ್ಯಸ್ಥ, ಲೆಫ್ಟಿನೆಂಟ್ ಜನರಲ್ ಉಪೇಂದ್ರ ದ್ವಿವೇದಿ ಅವರು, 'ಜಮ್ಮು ಮತ್ತು ಕಾಶ್ಮೀರದಲ್ಲಿನ ಸಾಮಾಜಿಕ ಪರಿಸರವನ್ನು ನಾಶಪಡಿಸುವ ಉದ್ದೇಶದಿಂದ ಪಾಕಿಸ್ತಾನವು ಡ್ರೋನ್ ಮೂಲಕ ಮಾದಕ ವಸ್ತು ಹಾಗೂ ಶಸ್ತ್ರಾಸ್ತ್ರಗಳನ್ನು ರವಾನಿಸುತ್ತಿದೆ' ಎಂದರು.

ದೇಶದ ಭದ್ರತೆ ಕುರಿತಂತೆ ಆಂತರಿಕ ಮತ್ತು ಬಾಹ್ಯ ಸ್ವರೂಪದಲ್ಲಿ ಎದುರಾಗುವ ಭಿನ್ನ ಸವಾಲುಗಳನ್ನು ಎದುರಿಸಲು ಸಜ್ಜಾಗಿರಬೇಕು ಎಂದು ಅವರು ಸೇನೆಯ ವಿವಿಧ ಹಂತದ ತುಕಡಿಗಳಿಗೆ ಕರೆ ನೀಡಿದರು.

ಕಾಶ್ಮೀರದಲ್ಲಿ 'ಮಾದಕವಸ್ತು ಭಯೋತ್ಪಾದನೆ' ದಿನೇ ದಿನೇ ಹೆಚ್ಚುತ್ತಿದೆ. ನೆರೆಯ ಪಾಕಿಸ್ತಾನವು ಪರೋಕ್ಷ ಯುದ್ಧ ನಡೆಸಲು ಇದನ್ನೇ ಅಸ್ತ್ರವಾಗಿ ಬಳಸುತ್ತಿದೆ. ಸ್ಥಳೀಯವಾಗಿ ಸಾಮಾಜಿಕ ಪರಿಸರಕ್ಕೆ ಧಕ್ಕೆ ತರುವುದೇ ಇದರ ಉದ್ದೇಶ ಎಂದು ಹೇಳಿದರು.

ಈ ಬೆಳವಣಿಗೆಗಳ ಬಗ್ಗೆ ಭದ್ರತಾ ಪಡೆಗಳಿಗೆ ಅರಿವಿದೆ. ಇದನ್ನು ತಡೆಯಲು ಈಗಾಗಲೇ ಕ್ರಮವಹಿಸಿದೆ. ಗಡಿರೇಖೆಯುದ್ದಕ್ಕೂ ಪರಿಸ್ಥಿತಿ ನಿಯಂತ್ರಣದಲ್ಲಿದ್ದು, ಪಾಕಿಸ್ತಾನದ ಜೊತೆಗಿನ ಕದನವಿರಾಮ ಒಡಂಬಡಿಕೆ ಮುಂದುವರಿದಿದೆ ಎಂದು ಹೇಳಿದರು.

ಕಟ್ಟೆಚ್ಚರ ವಹಿಸಿದ್ದು, ತಂತ್ರಜ್ಞಾನ ಬೆಂಬಲದಲ್ಲಿ ಬಹುಹಂತದ ತಪಾಸಣೆ ಮುಂದುವರಿದಿದೆ. ಯಾವುದೇ ರೀತಿಯಲ್ಲಿ ಒಳನುಸುಳುವಿಕೆ ತಡೆಗೆ ಕ್ರಮವಹಿಸಲಾಗಿದೆ. ಕದನವಿರಾಮ ಉಲ್ಲಂಘನೆ, ಒಳನುಸುಳುವಿಕೆ ಯತ್ನ ಸೇರಿದಂತೆ ಯಾವುದೇ ದುಸ್ಸಾಹಸಕ್ಕೆ ಸೇನೆಯು ತಕ್ಕ ಉತ್ತರ ನೀಡಲು ಸಜ್ಜಾಗಿದೆ ಎಂದು ಹೇಳಿದರು.

'ಶಾಂತಿ ಸ್ಥಾಪನೆ ಹಾಗೂ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳುವ ಸಲುವಾಗಿ ಎಲ್ಲಾ ಪಾಲುದಾರರು ಹಾಗೂ ಅಂಗಸಂಸ್ಥೆಗಳ ಸಹಭಾಗಿತ್ವದಲ್ಲಿ ಗುಪ್ತಚರ ವ್ಯವಸ್ಥೆ ಬಲಪಡಿಸುವುದರತ್ತ ಗಮನ ಕೇಂದ್ರೀಕರಿಸಲಾಗುತ್ತಿದೆ. ಶಾಂತಿ ಮತ್ತು ಸ್ಥಿರತೆಯ ಪ್ರಯೋಜನ ದೂರದ ಪ್ರದೇಶದ ಜನರಿಗೂ ಲಭಿಸುತ್ತಿದೆ. ಶಾಂತಿ ಕಾಪಾಡುವ ಪ್ರಕ್ರಿಯೆಯಲ್ಲಿ ಅವರೂ ಪಾಲ್ಗೊಳ್ಳುತ್ತಿದ್ದಾರೆ' ಎಂದು ಅವರು ಮಾಹಿತಿ ನೀಡಿದರು.

'ಅಗ್ನಿಪಥ ಯೋಜನೆಯ ಅನುಷ್ಠಾನ ಹಾಗೂ ಈ ಯೋಜನೆ ಅಡಿ ನೇಮಕವಾಗುವ ಸೈನಿಕರಿಗೆ (ಅಗ್ನಿವೀರರು) ಅಗತ್ಯ ಮಾರ್ಗದರ್ಶನ ನೀಡುವ ವಿಚಾರದಲ್ಲಿ ಎಲ್ಲಾ ಪಾಲುದಾರರೂ ಅಗತ್ಯ ಸಹಕಾರ ಒದಗಿಸಬೇಕು' ಎಂದು ಮನವಿ ಮಾಡಿದರು.

'ಆಕ್ರಮಣಕ್ಕೆ ತಕ್ಕ ಪ್ರತ್ಯುತ್ತರ ನೀಡಲು ಸಿದ್ಧ'

ಶ್ರೀನಗರ: 'ಭೌತಿಕ ಗಸ್ತು ಮತ್ತು ತಾಂತ್ರಿಕ ವಿಧಾನಗಳ ಮೂಲಕ ದೇಶದ ಸಮಗ್ರತೆಯನ್ನು ಖಾತ್ರಿಪಡಿಸಿಕೊಳ್ಳಲಾಗುತ್ತಿದ್ದು, ಲಡಾಖ್ ಭಾಗದಲ್ಲಿ ಚೀನಾದ ಯಾವುದೇ ಆಕ್ರಮಣಕ್ಕೂ ತಕ್ಕ ಪ್ರತ್ಯುತ್ತರ ನೀಡಲು ಸಿದ್ಧ' ಎಂದು ಭಾರತೀಯ ಸೇನೆಯು ಮಂಗಳವಾರ ಹೇಳಿದೆ.

ಉತ್ತರ ಕಮಾಂಡರ್ ಪದವಿ ಪ್ರದಾನ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಜನರಲ್ ಆಫೀಸರ್ ಕಮಾಂಡಿಂಗ್ ಇನ್ ಚೀಫ್ ಲೆಫ್ಟಿನೆಂಟ್ ಜನರಲ್ ಉಪೇಂದ್ರ ದ್ವಿವೇದಿ, 'ಪ್ರಸ್ತುತ ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧವು ಉದ್ಯೋಗಕ್ಕೆ ಕುತ್ತು ತರುವಂಥ ಹಾಗೂ ತಂತ್ರಜ್ಞಾನದ ಸದ್ಬಳಕೆ ಮತ್ತು ದುರ್ಬಳಕೆಯಂಥ ಅನೇಕ ಪಾಠಗಳನ್ನು ನಮ್ಮ ಮುಂದಿಟ್ಟಿದೆ' ಎಂದರು.

'ವಾಸ್ತವ ನಿಯಂತ್ರಣ ರೇಖೆಯಲ್ಲಿ (ಎಲ್‌ಎಸಿ) ಯಥಾಸ್ಥಿತಿಯನ್ನು ಏಕಪಕ್ಷೀಯವಾಗಿ ಬದಲಾಯಿಸುವ ಚೀನಾದ ಪ್ರಯತ್ನಗಳನ್ನು ಭಾರತವು ತನ್ನ ಸಶಸ್ತ್ರ ಪಡೆಗಳಿಂದ ತ್ವರಿತ, ನಿರ್ಭೀತ ಮತ್ತು ಸಂಯೋಜಿತ ಕ್ರಮದಿಂದ ಎದುರಿಸಲಿದೆ. ಯಾವುದೇ ಪ್ರತಿಕೂಲ ಹಾಗೂ ಆಕ್ರಮಣಕಾರಿ ಪ್ರಯತ್ನಗಳನ್ನು ಸೇನಾಪಡೆಗಳು ದೃಢವಾಗಿ ಹಿಮ್ಮೆಟ್ಟಿಸಲಿವೆ' ಎಂದೂ ಅವರು ಹೇಳಿದರು.

'ಇದರ ಜತೆಗೇ, ವಾಸ್ತವ ನಿಯಂತ್ರಣ ರೇಖೆಯ ಪರಿಸ್ಥಿತಿಯನ್ನು ಪರಿಹರಿಸಲು ರಾಜತಾಂತ್ರಿಕ ಹಾಗೂ ಕಾರ್ಯಾಚರಣೆ ಹಂತಗಳಲ್ಲೂ ಪ್ರಯತ್ನಗಳು ನಡೆಯುತ್ತಿವೆ. ಪೂರ್ವ ಲಡಾಖ್‌ನಲ್ಲಿನ ಎಲ್‌ಐಸಿಯಲ್ಲಿ ಭೌತಿಕ ಗಸ್ತು ಮತ್ತು ತಾಂತ್ರಿಕ ವಿಧಾನಗಳ ಮೂಲಕ ನಾವು ಪ್ರಾಬಲ್ಯ ಸಾಧಿಸಿದ್ದು, ಈ ಮೂಲಕ ನಮ್ಮ ಪ್ರಾದೇಶಿಕ ಸಮಗ್ರತೆಯನ್ನು ಖಾತ್ರಿಪಡಿಸಲಾಗುತ್ತಿದೆ ಎಂದು ನಾನು ನಿಮಗೆ ಭರವಸೆ ನೀಡುತ್ತೇನೆ' ಎಂದು ವಿವರಿಸಿದರು.

'ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್‌ನಲ್ಲಿನ ಭದ್ರತೆಯು ಅನೇಕ ರೀತಿಯ ಸವಾಲುಗಳನ್ನು ಒಡ್ಡುತ್ತದೆ. ವಿಶೇಷವಾಗಿ ಉತ್ತರ ಮತ್ತು ಪಶ್ಚಿಮ ಗಡಿಭಾಗಗಳಲ್ಲಿನ ವಿರೋಧಿಗಳಿಂದ ಸವಾಲುಗಳನ್ನು ಎದುರಿಸಲಾಗುತ್ತಿದೆ. ಆದಾಗ್ಯೂ ನಮ್ಮ ಸೇನಾ ಪಡೆಗಳು ದೇಶದ ಸಾರ್ವಭೌಮತೆ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ರಕ್ಷಿಸಲು ಕಂಕಣಬದ್ಧವಾಗಿದೆ. ಗಡಿಯಲ್ಲಿ ಭಾರತೀಯ ಸೇನಾಪಡೆಯು ನಿರಂತರವಾಗಿ ಎಲ್ಲಾ ಬೆಳವಣಿಗೆಗಳನ್ನು ಮೇಲ್ವಿಚಾರಣೆ ನಡೆಸುತ್ತಿದೆ. ರಾಷ್ಟ್ರೀಯ ಹಿತಾಸಕ್ತಿಯ ರಕ್ಷಣೆಗೆ ಬೇಕಾದ ಎಲ್ಲ ಕ್ರಮಗಳನ್ನೂ ತೆಗೆದುಕೊಳ್ಳಲಾಗುತ್ತಿದೆ' ಎಂದು ಹೇಳಿದರು.

ಉತ್ತರ ಪ್ರದೇಶ: ಹಾನಿ ತಡೆಯಲು ಮುಂದಾದ ಬಿಜೆಪಿ

ಭಾಗವತ್ ಹೇಳಿಕೆಗೆ ಬ್ರಾಹ್ಮಣರ ಖಂಡನೆ

ಪ್ರಜಾವಾಣಿ ವಾರ್ತೆ

ಲಖನೌ: ಜಾತಿ ಪದ್ಧತಿ ಕುರಿತು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ ಹೇಳಿಕೆಯನ್ನು ಉತ್ತರ ಪ್ರದೇಶದಲ್ಲಿರುವ ಬ್ರಾಹ್ಮಣ ಸಂಘಟನೆಗಳು ಖಂಡಿಸಿದ್ದು, ಭಾಗವತ್ ಅವರು ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿವೆ.

ಇನ್ನೊಂದೆಡೆ, ಭಾಗವತ್ ಹೇಳಿಕೆಯಿಂದ ಪಕ್ಷಕ್ಕೆ ಆಗಬಹುದಾದ ಹಾನಿಯನ್ನು ತಡೆಯಲು ಆಡಳಿತಾರೂಢ ಬಿಜೆಪಿ ಮುಂದಾಗಿದೆ. 'ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಸಲುವಾಗಿ ವಿರೋಧ ಪಕ್ಷಗಳು ಭಾಗವತ್ ಅವರ ಹೇಳಿಕೆಯನ್ನು ತಿರುಚಿವೆ' ಎಂದು ಬಿಜೆಪಿ ಹೇಳಿದೆ.

ಮುಂಬೈನಲ್ಲಿ ಸೋಮವಾರ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ಭಾಗವತ್, 'ದೇವರ ಮುಂದೆ ಎಲ್ಲರೂ ಸಮಾನರು. ಜಾತಿ, ವರ್ಗಗಳು ಇರಲಿಲ್ಲ. ಇವುಗಳನ್ನು ಪಂಡಿತರು ಸೃಷ್ಟಿಸಿದರು' ಎಂದು ಹೇಳಿದ್ದರು. ಇದು ಈಗ ಉತ್ತರ ಪ್ರದೇಶದಲ್ಲಿ ವಿವಾದಕ್ಕೆ ಕಾರಣವಾಗಿದೆ.

ಉತ್ತರ ಪ್ರದೇಶದ ಒಟ್ಟು ಮತದಾರರಲ್ಲಿ ಬ್ರಾಹ್ಮಣರ ಪ್ರಮಾಣ ಶೇ 12ರಷ್ಟಿದೆ. ಇಲ್ಲಿ ಅವರು ಬಿಜೆಪಿಯನ್ನು ಬೆಂಬಲಿಸುತ್ತಿದ್ದಾರೆ. ಆದರೆ, ಈಗ ಭಾಗವತ್ ಅವರ ಹೇಳಿಕೆ ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಮುಂಬರುವ ಚುನಾವಣೆ ಮೇಲೆ ಆಗಬಹುದಾದ ಪರಿಣಾಮವನ್ನು ತಡೆಯಲು ಪಕ್ಷದ ಮುಖಂಡರು ಯತ್ನಿಸುತ್ತಿದ್ದಾರೆ.

'ಭಾಗವತ್ ಅವರು ತಮ್ಮ ಭಾಷಣದಲ್ಲಿ ಪಂಡಿತ್ ಎಂಬ ಪದ ಬಳಸಿದ್ದಾರೆ. ಅವರು ಎಲ್ಲಿಯೂ ಬ್ರಾಹ್ಮಣರ ಬಗ್ಗೆ ಪ್ರಸ್ತಾಪಿಸಿಲ್ಲ. ಪಂಡಿತ ಎಂಬ ಪದ ಜ್ಞಾನಯುಕ್ತ ವ್ಯಕ್ತಿ ಎಂದಾಗುತ್ತದೆ ಹೊರತು ಅದು ಬ್ರಾಹ್ಮಣ ಸಮುದಾಯವನ್ನು ಸೂಚಿಸುವುದಿಲ್ಲ' ಎಂದು ಬಿಜೆಪಿಯ ಉತ್ತರ ಪ್ರದೇಶ ಘಟಕದ ಪ್ರಧಾನ ಕಾರ್ಯದರ್ಶಿ ಹಾಗೂ ಸಂಸದ ಸುಬ್ರತ ಪಾಠಕ್ ಹೇಳಿದ್ದಾರೆ.

'ವಿರೋಧ ಪಕ್ಷಗಳು ಉದ್ದೇಶಪೂರ್ವಕವಾಗಿಯೇ ಈ ವಿಷಯವನ್ನು ತಿರುಚುತ್ತಿವೆ. ವಿರೋಧ ಪಕ್ಷಗಳ ಈ ಕುತಂತ್ರಕ್ಕೆ ಬ್ರಾಹ್ಮಣ ಸಮುದಾಯ ಬಲಿಯಾಗುವುದಿಲ್ಲ' ಎಂದಿದ್ದಾರೆ.

ವಿರೋಧ ಪಕ್ಷಗಳಲ್ಲಿರುವ ಬ್ರಾಹ್ಮಣ ಮುಖಂಡರು ಕೂಡ ಭಾಗವತ್ ಅವರ ಹೇಳಿಕೆಯನ್ನು ಖಂಡಿಸಿದ್ದಾರೆ. 'ಭಾಗವತ್ ಅವರ ಹೇಳಿಕೆಯು ಬಿಜೆಪಿಯ ಜಾತಿವಾದಿ ಮನಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ' ಎಂದು ಸಮಾಜವಾದಿ ಪಕ್ಷದ ಬ್ರಾಹ್ಮಣ ಮುಖಂಡರೊಬ್ಬರು ಹೇಳಿದ್ದಾರೆ.

'ರಾಮಚರಿತ ಮಾನಸ' ಕೃತಿಯು ದಲಿತ ವಿರೋಧಿ ಎಂದು ಹೇಳುವ ಮೂಲಕ ವಿವಾದದ ಕಿಡಿ ಹೊತ್ತಿಸಿರುವ ಎಸ್‌ಪಿ ಮುಖಂಡ ಸ್ವಾಮಿ ಪ್ರಸಾದ್ ಮೌರ್ಯ ಅವರಿಗೆ ಜಾತಿ ಪದ್ಧತಿ ಕುರಿತ ಭಾಗವತ್ ಅವರ ಈ ಹೇಳಿಕೆ ಹೊಸ ಅಸ್ತ್ರ ಸಿಕ್ಕಂತಾಗಿದೆ.

'ಭಾಗವತ್ ಹೇಳಿಕೆಯು ಆ ಕೃತಿಯ (ರಾಮಚರಿತ ಮಾನಸ) ಬಗ್ಗೆ ನನ್ನ ಮಾತು ನಿಜ ಎಂದು ಹೇಳಿದಂತಿದೆ. ನನ್ನ ವಿರುದ್ಧ ಪ್ರತಿಭಟಿಸಿದವರು ಈಗ ಭಾಗವತ್ ವಿರುದ್ಧವೂ ಪ್ರತಿಭಟಿಸಬೇಕು' ಎಂದು ಮೌರ್ಯ ಹೇಳಿದ್ದಾರೆ.



ಟಿಎಂಸಿ ರ್‍ಯಾಲಿ

ತ್ರಿಪುರ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷದ ವತಿಯಿಂದ ಮಂಗಳವಾರ ಅಗರ್ತಲಾದಲ್ಲಿ ಹಮ್ಮಿಕೊಳ್ಳಲಾಗಿದ್ದ ರ್‍ಯಾಲಿಯಲ್ಲಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಾಗೂ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಪಾಲ್ಗೊಂಡಿದ್ದರು–ಪಿಟಿಐ ಚಿತ್ರ

'ಆರ್‌ಎಸ್‌ಎಸ್, ಬಿಜೆಪಿ ಜೊತೆ ನಂಟು ಗುಟ್ಟಲ್ಲ'

ಪ್ರಜಾವಾಣಿ ವಾರ್ತೆ

ಚೆನ್ನೈ: ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಹಾಗೂ ಬಿಜೆಪಿಯೊಂದಿಗೆ ತಮಗಿದ್ದ ಸಂಬಂಧವನ್ನು ಹೇಳಿಕೊಳ್ಳಲು ಲಕ್ಷ್ಮಣ ಚಂದ್ರ ವಿಕ್ಟೋರಿಯಾ ಗೌರಿ ಎಂದೂ ಹಿಂಜರಿದವರಲ್ಲ ಎಂದು ಗೌರಿ ಅವರನ್ನು ಹತ್ತಿರದಿಂದ ಬಲ್ಲ ವಕೀಲರೊಬ್ಬರು ಹೇಳಿದ್ದಾರೆ.

ಧಾರ್ಮಿಕ ಮತಾಂತರದ ಕುರಿತು ಆರ್‌ಎಸ್‌ಎಸ್‌ನ ಮುಖವಾಣಿ 'ಆರ್ಗನೈಸರ್' ಸೇರಿದಂತೆ ಬಲಪಂಥೀಯ ಚಿಂತನೆಯುಳ್ಳ ಪತ್ರಿಕೆಗಳಿಗೆ ಹಲವು ಲೇಖನಗಳನ್ನು ಬರೆದಿದ್ದಾರೆ. ಜೊತೆಗೆ ಗೌರಿ ಅವರು ಮಾಡಿರುವ ಹಲವು ದ್ವೇಷ ಭಾಷಣಗಳೂ ಯೂಟ್ಯೂಬ್ ತೆರೆದುಕೊಂಡಿವೆ.

ಮದ್ರಾಸ್ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿ ಹುದ್ದೆಗೆ ಗೌರಿ ಅವರ ಹೆಸರನ್ನು ಕೊಲಿಜಿಯಂ ಶಿಫಾರಸು ಮಾಡುವವರೆಗೂ, ಗೌರಿ ಅವರ ಕುರಿತು ಹೆಚ್ಚಿನವರಿಗೆ ಗೊತ್ತಿರಲಿಲ್ಲ. ಗೌರಿ ಅವರು ಈಗ ಮದ್ರಾಸ್ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

ಗೌರಿ ಅವರು, ತಮಿಳುನಾಡಿನ ಕನ್ಯಾಕುಮಾರಿ ಜಿಲ್ಲೆಯ ತಕ್ಕಲೈ ಗ್ರಾಮದವರು. ಮಧ್ಯಮ ವರ್ಗದ ಕುಟುಂಬದಲ್ಲಿ 1973ರ ಮೇ 21ರಂದು ಜನಿಸಿದ ಅವರು, ತಮ್ಮ ಕುಟುಂಬದಲ್ಲಿ ಕಾನೂನು ಪದವಿ ಪಡೆದ ಮೊದಲಿಗರು. ಮಧುರೈ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪಡೆದುಕೊಂಡರು. ಇಲ್ಲಿಂದಲೇ ಆರ್‌ಎಸ್‌ಎಸ್‌ನೊಂದಿಗೆ ಅವರ ನಂಟು ಪ್ರಾರಂಭವಾಯಿತು.

ಮೋದಿ ಅವರು ಬಿಜೆಪಿ ಕಾರ್ಯಕರ್ತರಿಗೆ ತಮ್ಮ ಟ್ವಿಟರ್ ಖಾತೆಯ ಹೆಸರಿನ ಜೊತೆಗೆ 'ಚೌಕೀದಾರ್' ಎಂದು ಬರೆದುಕೊಳ್ಳುವಂತೆ 2019ರಲ್ಲಿ ಕರೆ ನೀಡಿದ್ದರು. ಗೌರಿ ಅವರು ಕೂಡ ತಮ್ಮ ಟ್ವಿಟರ್ ಖಾತೆಯ ಹೆಸರಿನ ಜೊತೆಗೆ 'ಚೌಕೀದಾರ್' ಎಂದು ಬರೆದುಕೊಂಡಿದ್ದರು. ಬಿಜೆಪಿ ಮಹಿಳಾ ಮೋರ್ಚದ ಪ್ರಧಾನ ಕಾರ್ಯದರ್ಶಿಯಾಗಿಯೂ ಗೌರಿ ಕೆಲಸ ಮಾಡಿದ್ದಾರೆ. 2020ರ ಜೂನ್‌ನಲ್ಲಿ ಮಧುರೈ ಪೀಠದಲ್ಲಿ ಹೆಚ್ಚುವರಿ ಸಾಲಿಸಿಟರಲ್ ಜನರಲ್ ಆಗಿ ನೇಮಕಗೊಂಡ ಬಳಿಕ ಗೌರಿ ತಮ್ಮ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

'ಇಸ್ಲಾಂನ ಹಸಿರು ಭಯೋತ್ಪಾದನೆ'

'ರಾಷ್ಟ್ರೀಯ ಭದ್ರತೆ ಹಾಗೂ ಶಾಂತಿಗೆ ಯಾವುದು ಹೆಚ್ಚು ಬೆದರಿಕೆ ಒಡ್ಡಿದೆ? ಜಿಹಾದ್ ಅಥವಾ ಕ್ರೈಸ್ತ ಮಿಷನರಿ?' ಎಂಬ ಶೀರ್ಷಿಕೆಯ ಸಂದರ್ಶನವೊಂದರಲ್ಲಿ ಗೌರಿ ಅವರು, 'ಇಸ್ಲಾಂ ಹಸಿರು ಭಯೋತ್ಪಾದನೆ ಮಾಡಿದರೆ, ಕ್ರೈಸ್ತರು ಶ್ವೇತ ಭಯೋತ್ಪಾದನೆ ಮಾಡುತ್ತಾರೆ' ಎಂದು ಉತ್ತರಿಸಿದ್ದರು. ಕೆಲವು ವಕೀಲರು ಕೊಲಿಜಿಯಂಗೆ ಬರೆದ ಪತ್ರದಲ್ಲಿ ಇದನ್ನು ಉಲ್ಲೇಖಿಸಿದ್ದಾರೆ.

'ಕ್ರೈಸ್ತ ಮಿಷನರಿಗಳಿಂದ ಭಾರತದಲ್ಲಿ ಆಗುತ್ತಿರುವ ಸಾಂಸ್ಕೃತಿಕ ನರಮೇಧ' ಎನ್ನುವ ಶೀರ್ಷಿಕೆಯ ಸಂದರ್ಶನದಲ್ಲಿ, 'ಕ್ರೈಸ್ತ ಹಾಡುಗಳಿಗೆ ಭರತನಾಟ್ಯ ಮಾಡಬಾರದು' ಎಂದು ಅಭಿಪ್ರಾಯಪಟ್ಟಿದ್ದರು ಎಂದೂ ವಕೀಲರು ಹೇಳಿದ್ದಾರೆ.

'ಗೌರಿ ಅವರ ಪ್ರತಿಗಾಮಿ ಚಿಂತನೆಗಳು ಮೂಲಭೂತ ಸಾಂವಿಧಾನಿಕ ಮೌಲ್ಯಗಳಿಗೆ ಮಾರಕವಾಗಿವೆ. ಗೌರಿ ಅವರಲ್ಲಿ ಆಳವಾಗಿ ಬೇರೂರಿರುವ ಮತಾಂಧತೆಯಿಂದಾಗಿ ಅವರಿಗೆ ಹೆಚ್ಚುವರಿ ನ್ಯಾಯಮೂರ್ತಿ ಹುದ್ದೆಗೆ ಏರುವ ಅರ್ಹತೆ ಇಲ್ಲ' ಎಂದೂ ವಕೀಲರು ಅಭಿಪ್ರಾಯಪಟ್ಟಿದ್ದರು.

ಜೆಇಇ ಮೇನ್ಸ್: ಇಪ್ಪತ್ತು ವಿದ್ಯಾರ್ಥಿಗಳಿಂದ 'ಶತಕ' ಸಾಧನೆ

ನವದೆಹಲಿ (ಪಿಟಿಐ): ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆಸಲಾಗುವ ಜೆಇಇ–ಮೇನ್ಸ್ ಮೊದಲ ಅವಧಿಯ ಪರೀಕ್ಷೆಯ ಫಲಿತಾಂಶವು ಮಂಗಳವಾರ ಪ್ರಕಟವಾಗಿದ್ದು, 20 ಅಭ್ಯರ್ಥಿಗಳು 100 ಅಂಕ ಗಳಿಸಿದ್ದಾರೆ. 'ಶತಕ'ದ ಸಾಧನೆ ಮಾಡಿರುವವರೆಲ್ಲರೂ ಹುಡುಗರು.

100 ಅಂಕ ಗಳಿಸಿರುವವರ ಪೈಕಿ 14 ಮಂದಿ ಸಾಮಾನ್ಯ ವರ್ಗಕ್ಕೆ ಸೇರಿದವರು. 4 ಮಂದಿ ಒಬಿಸಿ ಹಾಗೂ ತಲಾ ಒಬ್ಬರು ಜನರಲ್–ಇಡಬ್ಲ್ಯುಎಸ್ ಮತ್ತು ಪರಿಶಿಷ್ಟ ಜಾತಿಯ ಕೋಟಾಗೆ ಸೇರಿದವರಾಗಿದ್ದಾರೆ. ಅಂಗವಿಕಲರ ಕೋಟಾದಲ್ಲಿ ಮೊಹಮ್ಮದ್ ಸಾಹೀಲ್ ಅಖ್ತರ್ ಅಗ್ರಸ್ಥಾನ ಗಳಿಸಿದ್ದಾರೆ. ಅವರು 99.98 ಸ್ಕೋರ್ ಪಡೆದಿದ್ದಾರೆ. ಪರಿಶಿಷ್ಟ ಜಾತಿ ವಿಭಾಗದಲ್ಲಿ ದೇಶಾಂಕ್ ಪ್ರತಾಪ್ ಸಿಂಗ್ (100) ಹಾಗೂ ಎಸ್‌ಟಿ ವಿಭಾಗದಲ್ಲಿ ಧೀರಾವತ್ ತನುಜ್ (99.99) ಅಗ್ರ ಸ್ಥಾನ ತಮ್ಮದಾಗಿಸಿಕೊಂಡಿದ್ದಾರೆ.

'50 ಅಭ್ಯರ್ಥಿಗಳ ಎನ್‌ಟಿಎ ಸ್ಕೋರ್ ತಡೆಹಿಡಿಯಲಾಗಿದೆ. ಇವರ ಪ್ರಕರಣವನ್ನು ಪ್ರತ್ಯೇಕ ಸಮಿತಿ ಎದುರು ಇಡಲಾಗುತ್ತಿದೆ. ಸಮಿತಿಯು ಅಂತಿಮ ವರದಿ ಸಲ್ಲಿಸಿದ ಬಳಿಕ ಇವರ ಅಂಕಗಳನ್ನು ಬಿಡುಗಡೆಗೊಳಿಸಲಾಗುತ್ತದೆ' ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) ಉನ್ನತ ಅಧಿಕಾರಿಯೊಬ್ಬರು ಹೇಳಿದ್ದಾರೆ.

'ನ್ಯಾಯಯುತ ಪರಿಶೀಲನಾ ಪ್ರಕ್ರಿಯೆ ಇದೆ'

ಪ್ರಜಾವಾಣಿ ವಾರ್ತೆ

> ಈ ರೀತಿಯ ಅರ್ಜಿಗಳಿಗೆ ಉತ್ತೇಜನ ನೀಡಿದರೆ, ನಾವು ಕೆಟ್ಟ ನಿದರ್ಶನವನ್ನು ನೀಡಿದಂತಾಗುತ್ತದೆ
> **ಸುಪ್ರೀಂ ಕೋರ್ಟ್**

ನವದೆಹಲಿ: 'ಎರಡು ವರ್ಷಗಳ ಅವಧಿಗೆ ಗೌರಿ ಅವರು ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕವಾಗಿದ್ದಾರೆ. ಈ ಹಂತದಲ್ಲಿ ನಾವು ಯಾವುದೇ ಆದೇಶವನ್ನು ನೀಡಲು ಸಾಧ್ಯವಿಲ್ಲ. ಜೊತೆಗೆ ನಮ್ಮಲ್ಲಿ ಅತ್ಯಂತ ಪ್ರಬಲವಾದ ಮತ್ತು ನ್ಯಾಯಯುತವಾದ ಪರಿಶೀಲನಾ ಪ್ರಕ್ರಿಯೆ ಇದೆ' ಎಂದು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಬಿ.ಆರ್. ಗವಾಯಿ ಅವರಿದ್ದ ಪೀಠ ಹೇಳಿತು.

ಗೌರಿ ಅವರು ಮದ್ರಾಸ್ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ಪ್ರಮಾಣ ವಚನ ಸ್ವೀಕರಿಸುವುದನ್ನು ತಡೆಯಬೇಕು ಎಂದು ಕೋರಿ ಕೆಲ ವಕೀಲರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಪೀಠ ಹೀಗೆ ಹೇಳಿತು. ನ್ಯಾಯಾಲಯವು ನಿತ್ಯ ಪ್ರಾರಂಭವಾಗುವುದಕ್ಕೆ ಐದು ನಿಮಿಷ ಮೊದಲೇ ಈ ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯ ಪ್ರಾರಂಭಿಸಿತು.

'ಕೊಲಿಜಿಯಂ ಒಂದು ನಿರ್ಧಾರ ತೆಗೆದುಕೊಂಡಿದೆ ಎಂದಾದರೆ, ಅದಕ್ಕಾಗಿ ಆಯಾ ಹೈಕೋರ್ಟ್‌ನ ನ್ಯಾಯಮೂರ್ತಿಗಳಿಂದಲೂ ಅಭಿಪ್ರಾಯವನ್ನು ತೆಗೆದುಕೊಂಡಿರುತ್ತದೆ. ಸಂಬಂಧಪಟ್ಟ ಹೈಕೋರ್ಟ್‌ನ ನ್ಯಾಯಮೂರ್ತಿಗಳಿಗೆ ಈ ಎಲ್ಲಾ ವಿಚಾರಗಳು ತಿಳಿದಿಲ್ಲ ಎಂದು ನೀವು ಹೇಗೆ ಭಾವಿಸುತ್ತೀರಿ' ಎಂದು ಪೀಠ ಪ್ರಶ್ನಿಸಿತು.

'ಪ್ರಮಾಣವಚನಕ್ಕೆ ಅನುಗುಣವಾಗಿ ನಡೆದುಕೊಳ್ಳದಿದ್ದರೆ, ಪ್ರಮಾಣವಚನಕ್ಕೆ ತಕ್ಕಂತೆ ಕರ್ತವ್ಯ ನಿರ್ವಹಿಸದಿದ್ದರೆ ಕೊಲಿಜಿಯಂ ಕ್ರಮ ಕೈಗೊಳ್ಳಲಿದೆ. ಈ ಹಿಂದೆಯೂ ಹೆಚ್ಚುವರಿ ನ್ಯಾಯಮೂರ್ತಿಗಳನ್ನು ಕಾಯಂ ಮಾಡದಿರುವ ನಿದರ್ಶನಗಳು ಇವೆ' ಎಂದಿತು. ಕೋರ್ಟ್

ವನ್ಯಜೀವಿ ಆವಾಸಸ್ಥಾನಗಳಲ್ಲಿ ಮೃಗಾಲಯ ಸ್ಥಾಪನೆಗೆ ಕಳವಳ

ಮಾರ್ಗಸೂಚಿ ಹಿಂಪಡೆಯಿರಿ: ಕೇಂದ್ರಕ್ಕೆ ಸೂಚನೆ



ನವದೆಹಲಿ (ಪಿಟಿಐ): 'ಹುಲಿ ಸಂರಕ್ಷಿತ ಪ್ರದೇಶ ಹಾಗೂ ವನ್ಯಜೀವಿ ಅಭಯಾರಣ್ಯಗಳಲ್ಲಿ ಸಫಾರಿ ಹಾಗೂ ಮೃಗಾಲಯ ಸ್ಥಾಪಿಸುವ ಕುರಿತಾದ ಮಾರ್ಗಸೂಚಿಗಳನ್ನು ಹಿಂಪಡೆಯಿರಿ. ಇಲ್ಲವೇ ಅದಕ್ಕೆ ತಿದ್ದುಪಡಿ ಮಾಡಿ' ಎಂದು ಸುಪ್ರೀಂ ಕೋರ್ಟ್‌ನಿಂದ ರಚನೆಯಾಗಿದ್ದ ಸೆಂಟ್ರಲ್ ಎಂಪವರ್ಡ್ ಕಮಿಟಿ (ಸಿಇಸಿ) ಕೇಂದ್ರ ಪರಿಸರ ಸಚಿವಾಲಯಕ್ಕೆ ಸೂಚಿಸಿದೆ.

ಕಳೆದ ತಿಂಗಳು ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸಿರುವ ಸಿಇಸಿ, 'ಹುಲಿ ಸಂರಕ್ಷಿತ ಹಾಗೂ ಮೀಸಲು ಅರಣ್ಯ ಪ್ರದೇಶಗಳಲ್ಲಿ ಮೃಗಾಲಯ ನಿರ್ಮಾಣ ಹಾಗೂ ಸಫಾರಿಗೆ ನೀಡಿರುವ ಅನುಮೋದನೆಯನ್ನು ತಕ್ಷಣವೇ ಹಿಂದಕ್ಕೆ ಪಡೆಯಬೇಕು' ಎಂದು ತಿಳಿಸಿದೆ.

ಆಯಾ ಭೂಪ್ರದೇಶದಲ್ಲಿನ ಗಾಯಗೊಂಡಿರುವ ಅಥವಾ ಅಶಕ್ತ ಪ್ರಾಣಿಗಳ ರಕ್ಷಣೆ ಮತ್ತು ಪುನರ್ವಸತಿಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಮಾತ್ರ ಅನುಮತಿ ನೀಡುವಂತೆ ಸಮಿತಿಯು ತನ್ನ ವರದಿಯಲ್ಲಿ ಸೂಚಿಸಿದೆ.

'ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರವು (ಎನ್‌ಟಿಸಿಎ) 2012ರ ಮಾರ್ಗಸೂಚಿಯಲ್ಲಿ ಹುಲಿ ಸಂರಕ್ಷಿತ ಪ್ರದೇಶದ ಬಫರ್ ವಲಯ ಅಥವಾ ಗಡಿ ಪ್ರದೇಶಗಳಲ್ಲಿ ಸಫಾರಿ ಆರಂಭಿಸುವುದಕ್ಕೆ ಅನುಮತಿ ನೀಡಿತ್ತು. 2016 ಮತ್ತು 2019ರಲ್ಲಿ ಪ್ರತ್ಯೇಕ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದ್ದ ಎನ್‌ಟಿಸಿಎ, ಹುಲಿ ಸಂರಕ್ಷಿತ ಪ್ರದೇಶದೊಳಗೇ ಹುಲಿ ಸಫಾರಿ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟಿತ್ತು. ಈ ಮಾರ್ಗಸೂಚಿಗಳನ್ನು ತಿದ್ದುಪಡಿ ಮಾಡಬೇಕು ಅಥವಾ ಹಿಂಪಡೆಯಬೇಕು' ಎಂದು ಸಿಇಸಿ ವರದಿಯಲ್ಲಿ ಹೇಳಲಾಗಿದೆ.

'ರಾಷ್ಟ್ರೀಯ ಉದ್ಯಾನಗಳು, ಹುಲಿ ಸಂರಕ್ಷಿತ ಪ್ರದೇಶ, ವನ್ಯಜೀವಿ ಧಾಮಗಳಲ್ಲಿ ಮೃಗಾಲಯ ಹಾಗೂ ಸಫಾರಿ ಸ್ಥಾಪನೆಗೆ ಕೇಂದ್ರ ಮೃಗಾಲಯ ಪ್ರಾಧಿಕಾರವು (ಸಿಜೆಡ್‌ಎ) ಅನುಮೋದನೆ ನೀಡಬಾರದು' ಎಂದು ಹೇಳಲಾಗಿದೆ.

'ಹುಲಿ ಸಂರಕ್ಷಿತ ಪ್ರದೇಶದ ದಟ್ಟ ಕಾನನದೊಳಗೆ ಹುಲಿ ಸಫಾರಿ ಸ್ಥಾಪಿಸುವುದರಿಂದ ಪ್ರವಾಸಿಗರು ಕಾಡಿನೊಳಗೆ ಸುದೀರ್ಘ ಕಾಲ ಪ್ರಯಾಣ ಮಾಡಬೇಕಾಗುತ್ತದೆ. ಪ್ರವಾಸಿಗರನ್ನು ಹೊತ್ತೊಯ್ಯುವ ವಾಹನಗಳಿಂದಾಗಿ ಅಭಯಾರಣ್ಯ ಹಾಗೂ ಆ ಪ್ರದೇಶದ ವ್ಯಾಪ್ತಿಯಲ್ಲಿ ನೆಲೆಸಿರುವ ಜೀವ ಸಂಕುಲಕ್ಕೆ ಸಾಕಷ್ಟು ಹಾನಿಯಾಗಲಿದೆ' ಎಂದು ತಿಳಿಸಿದೆ.

ಅಗಸ್ಟಾ ವೆಸ್ಟ್‌ಲ್ಯಾಂಡ್ ಪ್ರಕರಣ: ಆರೋಪಿ ಮಧ್ಯವರ್ತಿಗೆ ಜಾಮೀನು ನಿರಾಕರಣೆ

ನವದೆಹಲಿ (ಪಿಟಿಐ): ಅಗಸ್ಟಾ ವೆಸ್ಟ್‌ಲ್ಯಾಂಡ್ ಹೆಲಿಕಾಪ್ಟರ್ ಹಗರಣದ ಮಧ್ಯವರ್ತಿ ಎನ್ನಲಾದ ಕ್ರಿಸ್ಟಿಯಾನ್ ಮೈಕೇಲ್ ಜೇಮ್ಸ್ ಅವರಿಗೆ ಜಾಮೀನು ನೀಡಲು ಸುಪ್ರೀಂ ಕೋರ್ಟ್ ಮಂಗಳವಾರ ನಿರಾಕರಿಸಿದೆ. ಸಿಬಿಐ, ಇ.ಡಿ ಪ್ರಕರಣದ ತನಿಖೆ ನಡೆಸುತ್ತಿದೆ.

ಆದರೆ, ಜಾಮೀನು ಕೋರಿ ಜೇಮ್ಸ್ ವಿಚಾರಣಾ ಕೋರ್ಟ್‌ಗೆ ಅರ್ಜಿ ಸಲ್ಲಿಸಬಹುದು ಎಂದೂ ಹೇಳಿದೆ. ಅಗಸ್ಟಾ ವೆಸ್ಟ್‌ಲ್ಯಾಂಡ್‌ನಿಂದ ₹ 3,600 ಕೋಟಿ ಮೊತ್ತದಲ್ಲಿ 12 ವಿವಿಐಪಿ ಹೆಲಿಕಾಪ್ಟರ್ ಖರೀದಿಸುವುದಕ್ಕೆ ಸಂಬಂಧಿಸಿದ ಹಗರಣ ಇದಾಗಿದೆ.

'ಕನ್ಯತ್ವ ಪರೀಕ್ಷೆ ಘನತೆಯ ಹಕ್ಕಿಗೆ ವಿರುದ್ಧವಾದುದು'

ನವದೆಹಲಿ: ಬಂಧನದಲ್ಲಿರುವ ಮಹಿಳೆಯ ಕನ್ಯತ್ವ ಪರೀಕ್ಷೆ ನಡೆಸುವುದು ಸಂವಿಧಾನಬಾಹಿರ. ಇದು ಸಂವಿಧಾನದ 21ನೇ ವಿಧಿಯಡಿ ನೀಡಲಾಗಿರುವ ಘನತೆಯ ಹಕ್ಕಿನ ಉಲ್ಲಂಘನೆ ಎಂದು ದೆಹಲಿ ಹೈಕೋರ್ಟ್ ಮಂಗಳವಾರ ಮಹತ್ವದ ತೀರ್ಪು ನೀಡಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸ್ವರ್ಣಕಾಂತಾ ಶರ್ಮಾ ಅವರಿದ್ದ ಏಕ ಸದಸ್ಯ ನ್ಯಾಯಪೀಠವು, 'ಪೊಲೀಸ್ ಕಸ್ಟಡಿಯಲ್ಲಿದ್ದಾಗ ಮಾತ್ರವಲ್ಲ, ಮಹಿಳೆಯು ನ್ಯಾಯಾಂಗ ಬಂಧನದಲ್ಲಿದ್ದಾಗ ಕನ್ಯತ್ವ ಪರೀಕ್ಷೆ ನಡೆಸುವುದು ಕೂಡ ಅಸಾಂವಿಧಾನಿಕ ಎಂದು ಹೇಳಿದರು.

ಸಿಬಿಐ ತನಗೆ ಕನ್ಯತ್ವ ಪರೀಕ್ಷೆಗೆ ಒಳಪಡುವಂತೆ ಒತ್ತಡ ಹೇರಿತು. ಪರೀಕ್ಷೆಯ ವರದಿಯನ್ನು ವಿಚಾರಣಾ ಕೋರ್ಟ್‌ಗೆ ಸಲ್ಲಿಸುವ ಮೊದಲೇ ಅದನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಿತ್ತು ಎಂದು ದೂರಿ ಮಹಿಳೆಯೊಬ್ಬರು ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಟರ್ಕಿ: ಅವಶೇಷಗಳಡಿ ಸಂತ್ರಸ್ತರ ಚೀತ್ಕಾರ



ಟರ್ಕಿಯಲ್ಲಿ ಅವಶೇಷಗಳಡಿ ಸಿಲುಕಿದ ಸಂತ್ರಸ್ತೆಯನ್ನು ರಕ್ಷಿಸುತ್ತಿರುವ ಸಿಬ್ಬಂದಿ –ಎಎಫ್‌ಪಿ ಚಿತ್ರ

ದಿಯಾರ್‌ಬಕಿರ್ (ಟರ್ಕಿ) (ಎಪಿ): ಪ್ರಬಲ ಭೂಕಂಪಕ್ಕೆ ತುತ್ತಾಗಿ ಕುಸಿದುಬಿದ್ದ ಕಟ್ಟಡಗಳ ಅವಶೇಷಗಳಡಿ ಸಿಲುಕಿರುವವರ ರಕ್ಷಣೆಗೆ ರಕ್ಷಣಾ ಕಾರ್ಯಕರ್ತರು ಮತ್ತು ನಾಗರಿಕರು ನಿರಂತರ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಟರ್ಕಿಯ ಕೆಲವು ಪ್ರದೇಶಗಳಲ್ಲಿ ಧರೆಗುರುಳಿದ ಅವಶೇಷಗಳಡಿಯಿಂದೆಲ್ಲಾ ಸಂತ್ರಸ್ತರ ಚೀತ್ಕಾರಗಳು ಕೇಳಿಸುತ್ತಿವೆ. 10 ಪ್ರಾಂತ್ಯಗಳಲ್ಲಿ ಶೋಧ ಮತ್ತು ರಕ್ಷಣಾ ಸಿಬ್ಬಂದಿ, ಅಗ್ನಿ ಶಾಮಕ ಸಿಬ್ಬಂದಿ ಮತ್ತು ವೈದ್ಯಕೀಯ ಸಿಬ್ಬಂದಿ 3500 ಸೈನಿಕರ ಜೊತೆಗೂಡಿ ಹಗಲಿರುಳೆನ್ನದೆ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಭೂಕಂಪದ ಕೇಂದ್ರ ಕಹ್ರಾಮನ್‌ಮಾರಸ್‌ನಲ್ಲಿ 'ನಮ್ಮ ಧ್ವನಿ ಕೇಳಿಸುತ್ತಿದೆಯೇ' ಎಂದು ಕಿರುಚುತ್ತಾ, ಬದುಕುಳಿದವರನ್ನು ಪತ್ತೆ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ.

'ಕಟ್ಟಡದ ಅವಶೇಷಗಳಡಿ 70 ವರ್ಷದ ನನ್ನ ತಾಯಿಯ ಕೂಗು ಕೇಳಿಸುತ್ತಿದೆ. ಆದರೆ, ರಕ್ಷಣಾ ಸಿಬ್ಬಂದಿ ಮತ್ತು ಭಾರಿ ಸಲಕರಣೆಗಳು ಇಲ್ಲದೆ, ತಾಯಿ ಬಳಿ ಹೋಗಿ ರಕ್ಷಿಸುವ ಪ್ರಯತ್ನ ನಿರರ್ಥಕವಾಗಿದೆ. ಕಾಂಕ್ರೀಟ್ ಚಪ್ಪಡಿ ಮೇಲಕ್ಕೆತ್ತಿದರೆ ಮಾತ್ರ ಆಕೆಯ ರಕ್ಷಣೆ ಸಾಧ್ಯ. ವಯಸ್ಸಾಗಿರುವ ತಾಯಿಗೆ ಈ ಪರಿಸ್ಥಿತಿಯನ್ನು ದೀರ್ಘ ಸಮಯ ತಾಳಿಕೊಳ್ಳುವುದು ಕಷ್ಟ' ಎಂದು ಹತಾಯ್ ಪ್ರಾಂತ್ಯದ ರಾಜಧಾನಿ ಅಂತಾಕೀಯಾ ನಗರದ ನಿವಾಸಿ ನುರ್ಗುಲ್ ಅತಾಯ್ ಎಂಬುವವರು ತಿಳಿಸಿದರು.

ಡಾಕ್ಟರ್ಸ್ ವಿಥೌಟ್ ಬಾರ್ಡರ್ಸ್ ಮಿಷನ್ ಮುಖ್ಯಸ್ಥ ಸೆಬಾಸ್ಟಿಯನ್ ಗೇ ಅವರು, 'ಉತ್ತರ ಸಿರಿಯಾದಲ್ಲಿ ಭಾರಿ ಸಂಖ್ಯೆಯಲ್ಲಿರುವ ಗಾಯಾಳುಗಳ ಚಿಕಿತ್ಸೆಗೆ ಆರೋಗ್ಯ ಸೌಲಭ್ಯಗಳೊಂದಿಗೆ ವೈದ್ಯಕೀಯ ಸಿಬ್ಬಂದಿ ಬಿಡುವಿಲ್ಲದಂತೆ ಶ್ರಮಿಸುತ್ತಿದ್ದಾರೆ' ಎಂದು ಹೇಳಿದರು.

ಗಾಯಾಳುಗಳನ್ನು ಟರ್ಕಿ ಸೇನಾ ವಿಮಾನ ಆಂಬುಲೆನ್ಸ್ ಮೂಲಕ ಇಸ್ತಾಂಬುಲ್ ಮತ್ತು ಅಂಕಾರಾ ಆಸ್ಪತ್ರೆಗೆ ದಾಖಲಿಸಲಾಗುತ್ತಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

5 ಸಾವಿರ ದಾಟಿದ ಸಾವಿನ ಸಂಖ್ಯೆ

ಒಂದನೇ ಪುಟದಿಂದ

ಜನರು ನೆರವಿಗಾಗಿ ಚೀರಾಡುತ್ತಿರುವುದೂ ಕಂಡುಬಂದಿದೆ.

ಹತಾಯ್ ಪ್ರಾಂತ್ಯದಲ್ಲಿ ಹಲವು ಮಂದಿ ಅವಶೇಷಗಳಡಿ ಸಿಲುಕಿದ್ದಾರೆ. ಅವರ ರಕ್ಷಣೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಸಂತ್ರಸ್ತರ ಸಂಬಂಧಿಕರು ಹೇಳಿರುವುದು ವರದಿಯಾಗಿದೆ.

ಭೂಕಂಪ ಪೀಡಿತ ಎರಡೂ ದೇಶಗಳಲ್ಲಿ ರಕ್ಷಣಾ ಕಾರ್ಯಕ್ಕಾಗಿ ವಿಶೇಷ ತರಬೇತಿ ಪಡೆದ ಶ್ವಾನಗಳು, ವೈದ್ಯಕೀಯ ಸಿಬ್ಬಂದಿ ಸೇರಿ ಎರಡು ಶೋಧ ಮತ್ತು ರಕ್ಷಣಾ ತಂಡಗಳನ್ನು ಕಳುಹಿಸಿರುವುದಾಗಿ ಭಾರತ ಹೇಳಿದೆ.

ಕೊರೆವ ಚಳಿಯಲ್ಲಿ ರಾತ್ರಿ ಕಳೆದ ಸಂತ್ರಸ್ತರು

ಟರ್ಕಿಯ ಹತಾಯ್ ಪ್ರಾಂತ್ಯ ಮತ್ತು ಗಾಝಿಯಾನ್‌ಟೆಪ್ ನಗರದಲ್ಲಿ ಸಾವಿರಾರು ಸಂತ್ರಸ್ತರು ಕ್ರೀಡಾಂಗಣಗಳು, ಮಸೀದಿಗಳು, ಸಮುದಾಯ ಭವನಗಳು, ಶಾಪಿಂಗ್ ಮಾಲ್‌ಗಳು ಹಾಗೂ ಬಯಲು ಪ್ರದೇಶಗಳಲ್ಲಿ ಆಶ್ರಯ ಪಡೆದರು. ಕೊರೆಯುವ ಚಳಿಯಲ್ಲಿ ಕಂಬಳಿ ಹೊದ್ದು, ಬೆಂಕಿಯ ಸುತ್ತ ಕುಳಿತು ಜೀವಭಯದಲ್ಲೇ ರಾತ್ರಿ ಕಳೆದರು.

ಸಿರಿಯಾಕ್ಕೆ ಹೊಂದಿಕೊಂಡಿರುವ ತನ್ನ ಗಡಿಯಲ್ಲಿ ಟರ್ಕಿ ಭಾರಿ ಸಂಖ್ಯೆಯಲ್ಲಿ ಸೈನಿಕರನ್ನು ನಿಯೋಜಿಸಿದೆ. ಶೋಧ ಮತ್ತು ರಕ್ಷಣಾ ಕಾರ್ಯಕ್ಕೆ ಅಂಕಾರಾದ ಮಾನವೀಯ ನೆರವು ದಳ ಮತ್ತು ಸೇನೆಯ ಎಂಟು ತುಕಡಿಗಳನ್ನು ಸಹ ನಿಯೋಜಿಸಲಾಗಿದೆ.

ಕಂಟೇನರ್‌ಗಳಿಗೆ ಬೆಂಕಿ: ಬಂದರು ಸ್ಥಗಿತ

ಇಸ್ಕೆಂದೆರುನ್ (ಟರ್ಕಿ) (ರಾಯಿಟರ್ಸ್): ಟರ್ಕಿಯ ಇಸ್ಕೆಂದೆರುನ್ ವ್ಯಾಪ್ತಿಯ ಲಿಮಾಕ್ ಬಂದರಿನಲ್ಲಿ ನೂರಾರು ಹಡಗು ಕಂಟೇನರ್‌ಗಳಿಗೆ ಸೋಮವಾರ ಸಂಜೆ ಬೆಂಕಿ ಹೊತ್ತಿದ್ದು, ಬಂದರಿನ ಕಾರ್ಯಾಚರಣೆಯನ್ನು ಮಂಗಳವಾರ ಸ್ಥಗಿತಗೊಳಿಸಲಾಯಿತು. ಸರಕುಸಾಗಣೆ ಹಡಗುಗಳನ್ನು ಬೇರೆ ಬಂದರುಗಳಿಗೆ ಕಳುಹಿಸಲಾಯಿತು.

ಭೂಕಂಪದಿಂದ ದಕ್ಷಿಣ ಪ್ರಾಂತ್ಯದ ಹತಾಯ್‌ನ ಮೆಡಿಟರೇನಿಯನ್ ಕರಾವಳಿಯ ಲಿಮಾಕ್ ಬಂದರು ಕೂಡ ಹಾನಿಗೀಡಾಗಿದೆ ಎಂದು ಟರ್ಕಿ ಸಾಗರ ಪ್ರಾಧಿಕಾರ ತಿಳಿಸಿದೆ.

ಅದಾನಿಗೂ ಮೋದಿಗೂ ಏನು ಸಂಬಂಧ: ರಾಹುಲ್ ಪ್ರಶ್ನೆ

ಒಂದನೇ ಪುಟದಿಂದ

2014ರ ನಂತರ ಜಾದೂ: 'ಮೋದಿ ಮತ್ತು ಅದಾನಿ ಅವರ ಸಂಬಂಧ ಹೊಸದೇನೂ ಅಲ್ಲ. ಅವರು (ಮೋದಿ) ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ, ಇಡೀ ಭಾರತವೇ ಅವರ ವಿರುದ್ಧ ಇತ್ತು. ಆದರೆ, ಆಗ ಮೋದಿ ಅವರ ಹೆಗಲಿಗೆ ಹೆಗಲು ಕೊಟ್ಟು ನಿಂತಿದ್ದು ಅದಾನಿ. ಅದಾನಿ ನೇತೃತ್ವದಲ್ಲಿ ಹಲವರು ಗುಜರಾತ್‌ನಲ್ಲಿ ಉದ್ಯಮಗಳನ್ನು ಸ್ಥಾಪಿಸಿದರು. ಮೋದಿ ಅವರಿಗೆ ಅದಾನಿ ಸದಾ ನಿಷ್ಠರಾಗಿದ್ದರು.

ಇದರ ಫಲವಾಗಿ ಗುಜರಾತ್‌ನಲ್ಲಿ ಅದಾನಿ ಉದ್ಯಮವು ಬಹುದೊಡ್ಡದಾಗಿ ಬೆಳೆಯಿತು. ನಿಜವಾದ ಜಾದೂ ಆರಂಭವಾಗಿದ್ದು 2014ರಲ್ಲಿ ಮೋದಿ ಅವರು ಪ್ರಧಾನಿಯಾಗಿ ದೆಹಲಿಗೆ ಬಂದ ನಂತರ. 2014ರಲ್ಲಿ ಜಾಗತಿಕ ಶ್ರೀಮಂತರ ಪಟ್ಟಿಯಲ್ಲಿ 609ನೇ ಸ್ಥಾನದಲ್ಲಿದ್ದ ಅದಾನಿ, ಈಚೆಗೆ 2ನೇ ಸ್ಥಾನದವರೆಗೂ ಏರಿದ್ದರು. ಇದೇ ನಿಜವಾದ ಜಾದೂ' ಎಂದು ಟೀಕಿಸಿದರು.

'ಅದಾನಿ ಸಮೂಹಕ್ಕೆ ಅನುಭವವೇ ಇಲ್ಲದಿದ್ದರೂ, ನಿಯಮಗಳಿಗೆ ತಿದ್ದುಪಡಿ ತಂದು ಆರು ವಿಮಾನ ನಿಲ್ದಾಣಗಳನ್ನು ಅವರಿಗೆ ನೀಡಲಾಯಿತು. ದೇಶದ ಅತ್ಯಂತ ಹೆಚ್ಚು ವಹಿವಾಟಿನ ಮುಂಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಜಿವಿಕೆ ಕಂಪನಿಯಿಂದ ಕಸಿದುಕೊಳ್ಳಲಾಯಿತು. ಇದಕ್ಕೆ ಸಿಬಿಐ, ಜಾರಿ ನಿರ್ದೇಶನಾಲಯಗಳನ್ನು ಸರ್ಕಾರ ಬಳಸಿಕೊಂಡಿತು. ನಂತರ ಅದನ್ನು ಅದಾನಿ ಸಮೂಹಕ್ಕೆ ನೀಡಲಾಯಿತು' ಎಂದರು.

'ಮೋದಿ ಹೋದಲ್ಲೆಲ್ಲಾ ಅದಾನಿಗೆ ಗುತ್ತಿಗೆ'

'ಮೋದಿ ಅವರು ವಿದೇಶ ಪ್ರವಾಸ ಮಾಡಿದಾಗಲೆಲ್ಲಾ ಅದಾನಿ ಅವರಿಗೆ ಗುತ್ತಿಗೆ ದೊರೆತಿದೆ. ಮೋದಿ ಆಸ್ಟ್ರೇಲಿಯಾ ಪ್ರವಾಸದ ನಂತರ ಅದಾನಿ ಅವರಿಗೆ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) 100 ಕೋಟಿ ಡಾಲರ್ (ಮಂಗಳವಾರ ಡಾಲರ್ ಎದುರು ಇದ್ದ ರೂಪಾಯಿ ಮೌಲ್ಯದಲ್ಲಿ ಸುಮಾರು ₹8,280 ಕೋಟಿ) ಸಾಲ ನೀಡಿತು. ಮೋದಿ ಅವರು ಬಾಂಗ್ಲಾದೇಶ ಮತ್ತು ಶ್ರೀಲಂಕಾಕ್ಕೆ ಭೇಟಿ ನೀಡಿದ ನಂತರ ಅದಾನಿಗೆ ಅಲ್ಲಿ ಗುತ್ತಿಗೆ ದೊರೆಯಿತು' ಎಂದು ರಾಹುಲ್ ಆರೋಪಿಸಿದರು.

'ಶ್ರೀಲಂಕಾದಲ್ಲಿ ಪವನ ವಿದ್ಯುತ್ ಯೋಜನೆಯ ಗುತ್ತಿಗೆಯನ್ನು ಅದಾನಿ ಅವರಿಗೇ ನೀಡಬೇಕು ಎಂದು ಮೋದಿ ಅವರು ಒತ್ತಡ ಹೇರಿದ್ದರು ಎಂದು ಅಧ್ಯಕ್ಷ ರಾಜಪಕ್ಸ ಹೇಳಿದ್ದರು' ಎಂದು ಶ್ರೀಲಂಕಾದ ಸಂಸದೀಯ ಸಮಿತಿಯ ವಿಚಾರಣೆ ವೇಳೆ ಅಲ್ಲಿನ ವಿದ್ಯುತ್ ಮಂಡಳಿಯ ಅಧ್ಯಕ್ಷರು ಹೇಳಿದ್ದರು. ಇದು ಭಾರತದ ವಿದೇಶಾಂಗ ನೀತಿ ಅಲ್ಲ. ಬದಲಿಗೆ ಅದಾನಿ ಉದ್ದಿಮೆ ಬೆಳವಣಿಗೆ ನೀತಿ' ಎಂದು ರಾಹುಲ್ ಲೇವಡಿ ಮಾಡಿದರು.

'ಡ್ರೋನ್ ಮಾಡಿದ ಅನುಭವವೂ ಅದಾನಿ ಅವರ ಕಂಪನಿಗೆ ಇಲ್ಲ. ಆದರೆ, ಮೋದಿ ಅವರು ಇಸ್ರೇಲ್‌ಗೆ ಹೋಗಿ ಬಂದರು. ಆನಂತರ ಇಸ್ರೇಲ್ ಜತೆಗಿನ ರಕ್ಷಣಾ ಒಪ್ಪಂದ ಅದಾನಿಗೆ ದೊರೆಯುತ್ತದೆ. ಸಣ್ಣ ಶಸ್ತ್ರಾಸ್ತ್ರ, ಸ್ನೈಪರ್ ರೈಫಲ್ಸ್‌ಗಳು, ಡ್ರೋನ್, ವಿಮಾನಗಳ ನಿರ್ವಹಣೆ ಸೇರಿ ಇಸ್ರೇಲ್ ಜತೆಗಿನ ಎಲ್ಲಾ ರಕ್ಷಣಾ ಒಪ್ಪಂದಗಳೂ ಅದಾನಿಗೆ ದೊರೆತವು. ಇಸ್ರೇಲ್ ಜತೆಗಿನ ರಕ್ಷಣಾ ಒಪ್ಪಂದದ ಶೇ 90ರಷ್ಟು ಪಾಲು ಅದಾನಿಗೆ ದೊರೆತಿದೆ, ಅದಾನಿ ಸಮೂಹದಲ್ಲಿ ಈಗ ರಕ್ಷಣಾ ವಲಯದ ನಾಲ್ಕು ಕಂಪನಿಗಳಿವೆ' ಎಂದು ಅವರು ಆರೋಪಿಸಿದರು. 'ಉದ್ಯಮಿಗಳು ಮತ್ತು ರಾಜಕಾರಣದ ನಡುವಣ ಸಂಬಂಧದ ಮೇಲೆ ಹಾರ್ವರ್ಡ್‌ನಂತಹ ಶಿಕ್ಷಣ ಸಂಸ್ಥೆಗಳು ಅಧ್ಯಯನ ನಡೆಸಬೇಕು. ಇದರಲ್ಲಿ ಪ್ರಧಾನಿಗೆ ಚಿನ್ನದ ಪದಕ ದೊರೆಯಬೇಕು' ಎಂದು ರಾಹುಲ್ ಹೇಳಿದ್ದಾರೆ.

'ಸತಿ ಪದ್ಧತಿ ವೈಭವೀಕರಣ': ಆಕ್ರೋಶ

ನವದೆಹಲಿ (ಪಿಟಿಐ): ಬಿಜೆಪಿ ಸಂಸದ ಸಿ.ಪಿ. ಜೋಶಿ ಅವರು ತಮ್ಮ ಭಾಷಣದಲ್ಲಿ 'ಸತಿ ಪದ್ಧತಿ'ಯನ್ನು ವೈಭವೀಕರಿಸಿದ್ದಾರೆ ಎಂದು ಆರೋಪಿಸಿ ವಿರೋಧ ಪಕ್ಷಗಳು ಮಂಗಳವಾರ ಗದ್ದಲ ಎಬ್ಬಿಸಿದ್ದರಿಂದ ಲೋಕಸಭಾ ಕಲಾಪವನ್ನು ಸ್ವಲ್ಪ ಕಾಲ ಮುಂದೂಡಬೇಕಾಯಿತು. ನಿಷೇಧಿತ ಸತಿ ಪದ್ಧತಿಯನ್ನು ಬೆಂಬಲಿಸಿಲ್ಲ, ತಮ್ಮ ಮಾತು ಆತ್ಮಾಹುತಿ ಪದ್ಧತಿ ಕುರಿತು ಆಗಿತ್ತು ಎಂದು ಜೋಶಿ ಅವರು ಬಳಿಕ ಸಮರ್ಥನೆ ಮಾಡಿಕೊಂಡರು.

ಸತಿ ಎಂಬ ಪದವನ್ನು ಉಲ್ಲೇಖಿಸಿಲ್ಲ. ಹಿಂದಿಯಿಂದ ಅನುವಾದ ಮಾಡುವ ಸಂದರ್ಭದಲ್ಲಿ ಈ ತಪ್ಪು ಆಗಿರಬಹುದು. ತಾವು 'ಸತಿತ್ವ' ಎಂದು ಹೇಳಿದ್ದನ್ನು ಸತಿ ಎಂದು ಭಾವಿಸಿರಬೇಕು ಎಂದು ಜೋಶಿ ಹೇಳಿದರು.

ರಾಷ್ಟ್ರಪತಿಯವರು ಜಂಟಿ ಅಧಿವೇಶನ ಉದ್ದೇಶಿಸಿ ಮಾಡಿದ್ದ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆ ಆರಂಭಿಸಿ ಅವರು ಮಾತನಾಡಿದರು. ಚಿತ್ತೂರು ಕೋಟೆಗೆ ಅಲ್ಲಾವುದ್ದೀನ್ ಖಿಲ್ಜಿ ಮುತ್ತಿಗೆ ಹಾಕಿದಾಗ ಮೇವಾಡದ ರಾಣಿ ಪದ್ಮಾವತಿಯು ಆತ್ಮಾಹುತಿ ಮಾಡಿಕೊಂಡರು ಎಂದು ಹೇಳಿದರು.

ವಿರೋಧ ಪಕ್ಷಗಳ ಸದಸ್ಯರಾದ ಸುಪ್ರಿಯಾ ಸುಳೆ (ಎನ್‌ಸಿಪಿ), ಕನಿಮೊಳಿ, ದಯಾನಿಧಿ ಮಾರನ್, ಎ.ರಾಜಾ (ಡಿಎಂಕೆ), ಕೆ.ಮುರಳೀಧರನ್ (ಕಾಂಗ್ರೆಸ್) ಮತ್ತು ಇಮ್ತಿಯಾಜ್ ಜಲೀಲ್ (ಎಐಎಂಐಎಂ) ಅವರು ಜೋಶಿ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದರು. ಜೋಶಿ ಅವರು ಸತಿ ಪದ್ಧತಿಯನ್ನು ವೈಭವೀಕರಿಸಿದ್ದಾರೆ ಎಂದು ಆರೋಪಿಸಿದರು. ಸ್ಪೀಕರ್ ಪೀಠದ ಮುಂದೆ ಜಮಾಯಿಸಿದ ವಿರೋಧ ಪಕ್ಷಗಳ ಸದಸ್ಯರು ಘೋಷಣೆ ಕೂಗಿದರು. ಗದ್ದಲ ಮುಂದುವರಿದ ಕಾರಣ ಕಲಾಪವನ್ನು 20 ನಿಮಿಷ ಮುಂದೂಡಲಾಯಿತು. ಬಳಿಕ ಸದನವು ಸೇರಿದಾಗ, ಆಕ್ಷೇಪಾರ್ಹ ಉಲ್ಲೇಖಗಳಿದ್ದರೆ ಕಡತದಿಂದ ತೆಗೆಯುವುದಾಗಿ ಸ್ಪೀಕರ್ ಭರವಸೆ ಕೊಟ್ಟರು.

ಕಲಾಪದಲ್ಲಿ ಭಾಗವಹಿಸುವಿಕೆ: ಮೂಡದ ಒಮ್ಮತ

ನವದೆಹಲಿ: ಅದಾನಿ ಸಮೂಹದ ಪ್ರಕರಣದ ಬಗ್ಗೆ ಸಂಸತ್ತಿನಲ್ಲಿ ಚರ್ಚಿಸುವ ವಿಚಾರದಲ್ಲಿ ಬಿಜೆಪಿಯನ್ನು ವಿರೋಧಿಸುವ ಪಕ್ಷಗಳಲ್ಲಿ ಒಮ್ಮತ ಸಾಧ್ಯವಾಗಿಲ್ಲ. ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ತಮ್ಮ ಸಹಮತ ಇಲ್ಲ ಎಂದು ಎಎಪಿ, ಬಿಆರ್‌ಎಸ್ ಮತ್ತು ಶಿವಸೇನಾ ಹೇಳಿವೆ. ಆದರೆ, ಬಹುಸಂಖ್ಯೆಯ ಇತರ ಪಕ್ಷಗಳು ರಾಷ್ಟ್ರಪತಿಯವರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಚರ್ಚೆಯಲ್ಲಿ ಭಾಗಿಯಾಗಿವೆ. 'ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಲು' ಈ ಅವಕಾಶವನ್ನು ಬಳಸಿಕೊಳ್ಳಲು ಈ ಪಕ್ಷಗಳು ಮುಂದಾಗಿವೆ.

ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಅವರು ಚರ್ಚೆ ಆರಂಭಿಸುತ್ತಿದ್ದಂತೆಯೇ ಎಎಪಿ, ಬಿಆರ್‌ಎಸ್ ಮತ್ತು ಶಿವಸೇನಾ ಸಭಾತ್ಯಾಗ ಮಾಡಿದವು.

ಸಹಮತ ಇಲ್ಲ ಎಂಬುದು ವಿರೋಧ ಪಕ್ಷಗಳು ಮಂಗಳವಾರ ಬೆಳಿಗ್ಗೆ ನಡೆಸಿದ ಸಭೆಯಲ್ಲಿಯೇ ತಿಳಿದು ಬಂದಿತ್ತು. ಚರ್ಚೆಯಲ್ಲಿ ಭಾಗವಹಿಸುವ ನಿರ್ಧಾರಕ್ಕೆ ತಮ್ಮ ಒಪ್ಪಿಗೆ ಇಲ್ಲ ಎಂದು ಎಎಪಿ ನಾಯಕ ಸಂಜಯ್ ಸಿಂಗ್ ಸಭೆಯಲ್ಲಿ ಹೇಳಿದ್ದರು.

ಟಿಎಂಸಿ ಮುಖಂಡರು ಸಭೆಯಲ್ಲಿ ಭಾಗವಹಿಸಿಲ್ಲ. ಆದರೆ, ಸಂಸತ್ ಕಲಾಪದಲ್ಲಿ ಭಾಗಿಯಾಗುವ ನಿರ್ಧಾರವನ್ನು ಟಿಎಂಸಿ ಬೆಂಬಲಿಸಿದೆ.

ಅಪಘಾತ: ಮೃತದೇಹ 10 ಕಿ.ಮೀ ಎಳೆದೊಯ್ದ ಕಾರು

ಮಥುರಾ: ಅಪಘಾತವೊಂದರಲ್ಲಿ ಮೃತಪಟ್ಟ ವ್ಯಕ್ತಿಯ ಶವವನ್ನು 10 ಕಿ.ಮೀ.ನಷ್ಟು ಎಳೆದೊಯ್ದ ಘಟನೆ ಇಲ್ಲಿನ ಯಮುನಾ ಎಕ್ಸ್‌ಪ್ರೆಸ್‌ವೇ ನಲ್ಲಿ ಮಂಗಳವಾರ ನಡೆದಿದೆ.

'ಘಟನೆಗೆ ಸಂಬಂಧಿಸಿದಂತೆ, ಮಾರುತಿ ಸುಜುಕಿ ಸ್ವಿಫ್ಟ್ ಕಾರಿನ ಚಾಲಕ ವೀರೇಂದ್ರ ಸಿಂಗ್ ಎಂಬುವವರನ್ನು ವಶಕ್ಕೆ ಪಡೆದು, ಕಾರನ್ನು ಜಪ್ತಿ ಮಾಡಲಾಗಿದೆ' ಎಂದು ಮಥುರಾ ಗ್ರಾಮೀಣ ಎಸ್ಪಿ ತ್ರಿಗುಣ ಬಿಷನ್ ತಿಳಿಸಿದ್ದಾರೆ.

ಸಿ.ಸಿ ಟಿವಿ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ. ಮೃತ ವ್ಯಕ್ತಿಯ ವಯಸ್ಸು 35 ವರ್ಷ ಎಂದು ಅಂದಾಜಿಸಲಾಗಿದೆ. ಆತನ ಗುರುತು ಪತ್ತೆ ಹಚ್ಚುವ ಕಾರ್ಯ ನಡೆದಿದೆ ಎಂದಿದ್ದಾರೆ.

ಬಂಧಿತ ಚಾಲಕ ದೆಹಲಿಯ ಸಂಗಮ ವಿಹಾರ್ ನಿವಾಸಿ. ಅವರು ಕುಟುಂಬದ ನಾಲ್ವರು ಸದಸ್ಯರೊಂದಿಗೆ ಆಗ್ರಾದಲ್ಲಿ ನಡೆದ ಮದುವೆ ಸಮಾರಂಭದಲ್ಲಿ ಪಾಲ್ಗೊಂಡು, ದೆಹಲಿಗೆ ವಾಪಸಾಗುತ್ತಿದ್ದರು.

'ಎಕ್ಸ್‌ಪ್ರೆಸ್‌ವೇದಲ್ಲಿನ ಟೋಲ್‌ಪ್ಲಾಜಾದ ಉದ್ಯೋಗಿಯೊಬ್ಬರು ತಿಳಿಸಿದ ನಂತರವಷ್ಟೇ, ತನ್ನ ಕಾರಿನಡಿ ಮೃತದೇಹ ಇರುವ ಕುರಿತು ವೀರೇಂದ್ರ ಸಿಂಗ್‌ಗೆ ಗೊತ್ತಾಗಿದೆ. ನಂತರ ಆ ನೌಕರ ಪೊಲೀಸರಿಗೂ ಮಾಹಿತಿ ನೀಡಿದರು. ಘಟನೆ ಕುರಿತು ತನಿಖೆ ಆರಂಭಿಸಲಾಗಿದೆ' ಎಂದು ಎಸ್ಪಿ ಬಿಷನ್ ತಿಳಿಸಿದ್ದಾರೆ.

'ಎಕ್ಸ್‌ಪ್ರೆಸ್‌ವೇದಲ್ಲಿ 106 ಕಿ.ಮೀ. ಎಂಬ ಗುರುತು ಇರುವ ಸ್ಥಳದಲ್ಲಿ ರಕ್ತದ ಕಲೆಗಳು ಕಂಡುಬಂದಿವೆ. ಹೀಗಾಗಿ, ಆ ಸ್ಥಳದಲ್ಲಿಯೇ ಅಪಘಾತ ಸಂಭವಿಸಿರಬಹುದು. ನಂತರ, ವ್ಯಕ್ತಿಯ ಮೃತದೇಹವು ಕಾರಿನಡಿ ಸಿಲುಕಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ದಟ್ಟವಾದ ಮಂಜು ಕವಿದಿತ್ತು. ಹೀಗಾಗಿ, ಕಾರಿನಡಿ ಶವ ಸಿಲುಕಿದ್ದು ನನಗೆ ಕಾಣಿಸಲಿಲ್ಲ' ಎಂಬುದಾಗಿ ಚಾಲಕ ಪೊಲೀಸರಿಗೆ ತಿಳಿಸಿದ್ದಾನೆ.

ರಣಜಿ ಟ್ರೋಫಿ ಸೆಮಿಫೈನಲ್ ಇಂದಿನಿಂದ: ಕರ್ನಾಟಕ–ಸೌರಾಷ್ಟ್ರ ಮುಖಾಮುಖಿ

ಮಯಂಕ್ ಬಳಗಕ್ಕೆ ಬೌಲರ್‌ಗಳೇ ಶಕ್ತಿ

ಪ್ರಜಾವಾಣಿ ವಾರ್ತೆ



ಕರ್ನಾಟಕ ತಂಡದ ಆಟಗಾರರ ಅಭ್ಯಾಸ –ಪ್ರಜಾವಾಣಿ ಚಿತ್ರ/ ವಿ. ಪುಷ್ಕರ್

ಬೆಂಗಳೂರು: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ಈ ಬಾರಿಯ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಯುವ ಬೌಲಿಂಗ್ ಪಡೆ ಮತ್ತು ಅನುಭವಿ ಬ್ಯಾಟರ್‌ಗಳ ಬಲದಿಂದ ನಾಲ್ಕರಘಟ್ಟ ತಲುಪಿದೆ. ಇನ್ನೆರಡು ಹೆಜ್ಜೆ ಇಟ್ಟರೆ ರಣಜಿ ಕಿರೀಟ ಧರಿಸುವ ಅವಕಾಶವೂ ಈಗ ಇದೆ.

ಬುಧವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಸೆಮಿಫೈನಲ್‌ನಲ್ಲಿ ಕರ್ನಾಟಕವು ಸೌರಾಷ್ಟ್ರವನ್ನು ಎದುರಿಸಲಿದೆ. ಪ್ರಮುಖ ಆಟಗಾರರಾದ ಮಧ್ಯಮವೇಗಿ ಜೈದೇವ್ ಉನದ್ಕತ್, ಬ್ಯಾಟರ್ ಚೇತೇಶ್ವರ್ ಪೂಜಾರ ಹಾಗೂ ಆಲ್‌ರೌಂಡರ್ ರವೀಂದ್ರ ಜಡೇಜ ಅವರಿಲ್ಲದ ಸೌರಾಷ್ಟ್ರ ಬಂದಿಳಿದಿರುವುದು ಕರ್ನಾಟಕದ ಆತ್ಮವಿಶ್ವಾಸ ಹೆಚ್ಚಿಸಿದೆ.

ಏಕೆಂದರೆ, ಈ ಹಿಂದೆ ತಮಿಳುನಾಡು ಹಾಗೂ ಮುಂಬೈ ಬಿಟ್ಟರೆ ಕರ್ನಾಟಕಕ್ಕೆ ಸೌರಾಷ್ಟ್ರ ಯಾವಾಗಲೂ ಕಠಿಣ ಸ್ಪರ್ಧೆಯೊಡ್ಡಿದೆ. 11 ಬಾರಿ ಮುಖಾಮುಖಿಯಾಗಿವೆ. ಅದರಲ್ಲಿ ಐದು ಸಲ ಸೌರಾಷ್ಟ್ರ ಹಾಗೂ ಕರ್ನಾಟಕ ಎರಡು ಬಾರಿ ಗೆದ್ದಿದೆ. ನಾಲ್ಕು ಪಂದ್ಯಗಳು ಡ್ರಾ ಆಗಿವೆ. 2019ರಲ್ಲಿ ಪೂಜಾರ ಅವರಿದ್ದ ತಂಡವು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿಯೇ ಕರ್ನಾಟಕ ತಂಡಕ್ಕೆ ನಾಕೌಟ್ ಹಂತದಲ್ಲಿ ಸೋಲುಣಿಸಿತ್ತು. ವಿನಯಕುಮಾರ್ ಎಸೆತದಲ್ಲಿ ಪೂಜಾರ ಔಟಾಗಿದ್ದನ್ನು ಅಂಪೈರ್ ನಿರಾಕರಿಸಿದ್ದು ವಿವಾದವಾಗಿತ್ತು.

ಈ ಬಾರಿಯ ಟೂರ್ನಿಯಲ್ಲಿ ಆತಿಥೇಯರಿಗೆ ಅದೃಷ್ಟದ ಬಲವೂ ಇದೆ. ಏಕೆಂದರೆ, ಸಿ ಗುಂಪಿನಲ್ಲಿ ರಾಜಸ್ಥಾನ ಮತ್ತು ಕೇರಳ ಬಿಟ್ಟರೆ ಉಳಿದ ತಂಡಗಳು ಅನುಭವ ಮತ್ತು ಸಾಮರ್ಥ್ಯದಲ್ಲಿ ಕರ್ನಾಟಕಕ್ಕಿಂತ ದುರ್ಬಲವಾಗಿದ್ದವು. ಅದರಿಂದಾಗಿ ಗುಂಪು ಹಂತದಲ್ಲಿ ಒಂದೂ ಸೋಲು ಕಾಣದೇ ನಾಕೌಟ್ ಪ್ರವೇಶಿಸಿತು. ಕ್ವಾರ್ಟರ್‌ಫೈನಲ್‌ನಲ್ಲಿ ಉತ್ತರಾಖಂಡದ ವಿರುದ್ಧವೂ ಸುಲಭ ಜಯ ಸಾಧಿಸಿತ್ತು.

ಇದಕ್ಕೆ ಕಾರಣರಾಗಿದ್ದು ಪದಾರ್ಪಣೆ ಪಂದ್ಯ ಆಡಿದ ಮಧ್ಯಮವೇಗಿ ಎಂ. ವೆಂಕಟೇಶ್, ವೈಶಾಖ ವಿಜಯಕುಮಾರ್, ವಿದ್ವತ್ ಕಾವೇರಪ್ಪ ಮತ್ತು ಸ್ಪಿನ್ನರ್ ಗೌತಮ್ ಅವರ ಅಮೋಘ ಬೌಲಿಂಗ್. ಅಲ್ಲದೇ ಶ್ರೇಯಸ್ ಗೋಪಾಲ್ ಶತಕ ಮಯಂಕ್ ಅಗರವಾಲ್, ಸಮರ್ಥ್ ಹಾಗೂ ನಿಕಿನ್ ಜೋಸ್ ಅವರ ಅರ್ಧಶತಕಗಳ ಬಲದಿಂದ ಗೆಲುವು ಸಾಧ್ಯವಾಗಿತ್ತು.

ಆ ಪಂದ್ಯದಲ್ಲಿ ಅನಾರೋಗ್ಯದಿಂದ ಬಳಲಿದ್ದ ವಿಕೆಟ್‌ಕೀಪರ್ ಬಿ.ಆರ್. ಶರತ್ ಸೆಮಿಫೈನಲ್‌ನಲ್ಲಿ ಆಡುತ್ತಿಲ್ಲ. ಅದರಿಂದಾಗಿ ಶರತ್ ಶ್ರೀನಿವಾಸ್‌ಗೆ ಅವಕಾಶ ಸಿಗಬಹುದು. ಮಧ್ಯಮ ಕ್ರಮಾಂಕದಲ್ಲಿ ಮನೀಷ್ ಪಾಂಡೆ ಲಯ ಕಂಡುಕೊಂಡರೆ ಸೌರಾಷ್ಟ್ರದ ಬೌಲಿಂಗ್ ಪಡೆಗೆ ಕಠಿಣ ಸವಾಲು ಎದುರಾಗಬಹುದು.

ಧರ್ಮೇಂದ್ರಸಿಂಹ ಜಡೇಜ, ಚೇತನ್ ಸಕಾರಿಯಾ ಅವರು ಪ್ರವಾಸಿ ಬಳಗದ ಪ್ರಮುಖ ಬೌಲರ್‌ಗಳಾಗಿದ್ದಾರೆ. ಬ್ಯಾಟಿಂಗ್‌ನಲ್ಲಿ ಹರ್ವಿಕ್ ದೇಸಾಯಿ, ಅನುಭವಿ ಶೆಲ್ಡನ್ ಜಾಕ್ಸನ್ ಅವರು ರನ್‌ಗಳ ಹೊಳೆ ಹರಿಸುವ ಸಮರ್ಥರು.

ದಿನದಾಟ ಆರಂಭ: ಬೆಳಿಗ್ಗೆ 9.30
ನೇರ ಪ್ರಸಾರ: ಹಾಟ್‌ಸ್ಟಾರ್ ಆ್ಯಪ್
ಇನ್ನೊಂದು ಸೆಮಿ: ಮಧ್ಯಪ್ರದೇಶ–ಬಂಗಾಳ (ಇಂದೋರ್)

ಪ್ರಸಕ್ತ ರಣಜಿ ಋತುವಿನಲ್ಲಿ ಆಟಗಾರರ ಸಾಧನೆ

ಹೆಚ್ಚು ರನ್ ಗಳಿಸಿದ ಬ್ಯಾಟರ್‌ಗಳು (ಕರ್ನಾಟಕ)

ಬ್ಯಾಟರ್	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ
ಮಯಂಕ್ ಅಗರವಾಲ್	8	686	208	2	5
ಆರ್. ಸಮರ್ಥ್	8	659	140	3	2
ನಿಕಿನ್ ಜೋಸ್	8	420	67	-	4
ಶ್ರೇಯಸ್ ಗೋಪಾಲ್	7	341	161*	1	1

ಹೆಚ್ಚು ರನ್ ಗಳಿಸಿದ ಬ್ಯಾಟರ್‌ಗಳು (ಸೌರಾಷ್ಟ್ರ)

ಬ್ಯಾಟರ್	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ
ಹರ್ವಿಕ್ ದೇಸಾಯಿ	8	516	108	3	2
ಚಿರಾಗ್ ಜಾನಿ	8	436	77	0	3
ಶೆಲ್ಡನ್ ಜಾಕ್ಸನ್	8	362	81	0	3
ಜೆ. ಗೋಹಿಲ್	5	331	227	1	0

ಹೆಚ್ಚು ವಿಕೆಟ್ ಪಡೆದ ಬೌಲರ್‌ಗಳು (ಕರ್ನಾಟಕ)

ಬೌಲರ್	ಪಂದ್ಯ	ವಿಕೆಟ್	ಶ್ರೇಷ್ಠ
ವೈಶಾಖ ವಿಜಯಕುಮಾರ್	7	31	59ಕ್ಕೆ5
ಕೆ.ಗೌತಮ್	8	27	75ಕ್ಕೆ5
ವಿದ್ವತ್ ಕಾವೇರಪ್ಪ	7	25	67ಕ್ಕೆ5
ವಿ. ಕೌಶಿಕ್	4	20	54ಕ್ಕೆ6

ಹೆಚ್ಚು ವಿಕೆಟ್ ಪಡೆದ ಬೌಲರ್‌ಗಳು (ಸೌರಾಷ್ಟ್ರ)

ಬೌಲರ್	ಪಂದ್ಯ	ವಿಕೆಟ್	ಶ್ರೇಷ್ಠ
ಧರ್ಮೇಂದ್ರ ಜಡೇಜ	8	37	109ಕ್ಕೆ5
ವೈ. ದೂಡಿಯಾ	6	30	91ಕ್ಕೆ5
ಜೈದೇವ್ ಉನದ್ಕತ್	3	17	39ಕ್ಕೆ8
ಚೇತನ್ ಸಕಾರಿಯಾ	7	14	40ಕ್ಕೆ5

ಅಂಕಿ ಅಂಶ: ಚನ್ನಗಿರಿ ಕೇಶವಮೂರ್ತಿ

ಅಬುಧಾಬಿ ಟೆನಿಸ್: ಸಾನಿಯಾ– ಬೆಥನಿ ಜೋಡಿಗೆ ಸೋಲು

ಅಬುಧಾಬಿ (ಪಿಟಿಐ): ಭಾರತದ ಸಾನಿಯಾ ಮಿರ್ಜಾ ಮತ್ತು ಅಮೆರಿಕದ ಬೆಥನಿ ಮ್ಯಾಟೆಕ್ ಸ್ಯಾಂಡ್ಸ್ ಜೋಡಿ ಅಬುಧಾಬಿ ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಮೊದಲ ಸುತ್ತಿನಲ್ಲೇ ಎಡವಿತು.

ಸೋಮವಾರ ರಾತ್ರಿ ನಡೆದ ಪಂದ್ಯದಲ್ಲಿ ಭಾರತ- ಅಮೆರಿಕ ಜೋಡಿ 3–6, 4–6 ರಲ್ಲಿ ಬೆಲ್ಜಿಯಂನ ಕರ್ಸ್ಟನ್ ಫ್ಲಿಪ್ಕೆನ್ಸ್ ಮತ್ತು ಜರ್ಮನಿಯ ಲಾರಾ ಸಿಗ್ಮಂಡ್ ಎದುರು ಪರಾಭವಗೊಂಡಿತು. ಈ ಪಂದ್ಯ ಒಂದು ಗಂಟೆ 13 ನಿಮಿಷ ನಡೆಯಿತು. ಎರಡನೇ ಸೆಟ್‌ನಲ್ಲಿ ಸಾನಿಯಾ ಜೋಡಿ ಅಲ್ಪ ಪ್ರತಿರೋಧ ಒಡ್ಡಿತು.

ಆರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ವಿಜೇತೆ ಸಾನಿಯಾ, ಇದೇ 19 ರಂದು ದುಬೈನಲ್ಲಿ ಆರಂಭವಾಗಲಿರುವ ದುಬೈ ಟೆನಿಸ್ ಚಾಂಪಿಯನ್‌ಷಿಪ್ ಬಳಿಕ ನಿವೃತ್ತಿಯಾಗಲಿದ್ದಾರೆ.

ಕಳೆದ ತಿಂಗಳು ನಡೆದ ಆಸ್ಟ್ರೇಲಿಯಾ ಓಪನ್ ಟೂರ್ನಿಯ ಮಿಶ್ರ ಡಬಲ್ಸ್ ವಿಭಾಗದಲ್ಲಿ ಸಾನಿಯಾ ಮತ್ತು ರೋಹನ್ ಬೋಪಣ್ಣ ಜೋಡಿ ರನ್ನರ್ಸ್ ಅಪ್ ಆಗಿತ್ತು. ಫೈನಲ್‌ನಲ್ಲಿ ಬ್ರೆಜಿಲ್‌ನ ಲೂಯಿಸಾ ಸ್ಟೆಫಾನಿ ಮತ್ತು ರಫೆಲ್ ಮಟೊಸ್ ಎದುರು ಸೋತಿತ್ತು. ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಸಾನಿಯಾ ಅವರ ಕೊನೆಯ ಪಂದ್ಯ ಅದಾಗಿತ್ತು.




ನೀನಾ ವೆಂಕಟೇಶ್ ಮತ್ತು ಹರ್ಷಿಕಾ ರಾಮಚಂದ್ರ

ಈಜು: ಹರ್ಷಿಕಾ, ನೀನಾಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಹರ್ಷಿಕಾ ರಾಮಚಂದ್ರ ಮತ್ತು ನೀನಾ ವೆಂಕಟೇಶ್ ಅವರು ಮಧ್ಯಪ್ರದೇಶದಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ಯೂತ್ ಗೇಮ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದರು.

ಭೋಪಾಲ್‌ನ ಪ್ರಕಾಶ್ ತರನ್ ಪುಷ್ಕರ್ ಈಜುಕೊಳದಲ್ಲಿ ಮಂಗಳವಾರ ನಡೆದ ಮಹಿಳೆಯರ 200 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಹರ್ಷಿಕಾ 2 ನಿ. 10.20 ಸೆ.ಗಳಲ್ಲಿ ಗುರಿ ತಲುಪಿದರು. ಕರ್ನಾಟಕದವರೇ ಆದ ಧೀನಿಧಿ ದೇಸಿಂಗು (2 ನಿ. 10.51 ಸೆ.) ಈ ವಿಭಾಗದ ಬೆಳ್ಳಿ ಗೆದ್ದರು.

ನೀನಾ ಅವರು ಮಹಿಳೆಯರ 50 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ 28.58 ಸೆಕೆಂಡುಗಳೊಂದಿಗೆ ಅಗ್ರಸ್ಥಾನ ಪಡೆದರು. ಧೀನಿಧಿ (29.85 ಸೆ.) ನಾಲ್ಕನೇ ಸ್ಥಾನ ಪಡೆದು ಅಲ್ಪ ಅಂತರದಲ್ಲಿ ಪದಕದ ಅವಕಾಶ ಕಳೆದುಕೊಂಡರು.

ಮಹಿಳೆಯರ 800 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಕರ್ನಾಟಕದ ಶಿರಿನ್ (9 ನಿ. 39.15 ಸೆ.) ಮತ್ತು ಅಶ್ಮಿತಾ ಚಂದ್ರ (9 ನಿ. 40.75 ಸೆ.) ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಜಯಿಸಿದರು.

ಮಹಿಳೆಯರ 100 ಮೀ. ಬ್ರೆಸ್ಟ್ ಸ್ಟ್ರೋಕ್ ಸ್ಪರ್ಧೆಯಲ್ಲಿ ರಾಜ್ಯದ ಮಾನವಿ ವರ್ಮಾ (1 ನಿ. 15.71 ಸೆ.) ಹಾಗೂ ಎಸ್.ಲಕ್ಷ್ಯಾ (1 ನಿ. 15.96 ಸೆ.) ಅವರು ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಗಳಿಸಿದರು. ಮಹಾರಾಷ್ಟ್ರದ ಅಪೇಕ್ಷಾ ಫರ್ನಾಂಡಿಸ್ (1 ನಿ. 13.87 ಸೆ.) ಚಿನ್ನ ಗೆದ್ದುಕೊಂಡರು. ಕರ್ನಾಟಕದ ವಿಹಿತಾ 4ನೇ ಸ್ಥಾನ ಗಳಿಸಿದರು.

ಪುರುಷರ 200 ಮೀ. ಫ್ರೀಸ್ಟೈಲ್‌ನಲ್ಲಿ ವೇದಾಂತ್ ಮಾಧವನ್ ಅವರು ಚಿನ್ನ ಜಯಿಸಿದರು.

ಮಹಿಳಾ ಪ್ರೀಮಿಯರ್ ಲೀಗ್: ಬಿಡ್‌ನಲ್ಲಿ 409 ಆಟಗಾರ್ತಿಯರು

ಮುಂಬೈ (ಪಿಟಿಐ): ಮುಂದಿನ ತಿಂಗಳು ನಡೆಯಲಿರುವ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ತಂಡಗಳಿಗೆ ಆಯ್ಕೆಗಾಗಿ ನಡೆಯಲಿರುವ ಬಿಡ್‌ನಲ್ಲಿ 409 ಆಟಗಾರ್ತಿಯರ ಪಟ್ಟಿಯನ್ನು ಅಂತಿಮಗೊಳಿಸಲಾಗಿದೆ.

ಇದೇ 13ರಂದು ಹರಾಜು ಪ್ರಕ್ರಿಯೆ ನಡೆಯಲಿದೆ. ಇದರಲ್ಲಿ ಪ್ರಮುಖ ಆಟಗಾರ್ತಿಯರಾದ ಹರ್ಮನ್‌ಪ್ರೀತ್ ಕೌರ್, ಸ್ಮೃತಿ ಮಂದಾನ, ಅಲೈಸಾ ಹೀಲಿ ಹಾಗೂ ಸೋಫಿ ಎಕ್ಸೆಲ್‌ಸ್ಟೋನ್ ಸೇರಿದಂತೆ 24 ಆಟಗಾರ್ತಿಯರಿಗೆ ತಲಾ ₹ 50 ಲಕ್ಷ ಮೂಲಬೆಲೆ ನಿಗದಿ ಮಾಡಲಾಗಿದೆ. 30 ಆಟಗಾರ್ತಿಯರಿಗೆ ತಲಾ ₹ 40 ಲಕ್ಷ ಮೂಲಬೆಲೆ ಇದೆ.

ಒಟ್ಟು ಐದು ಫ್ರ್ಯಾಂಚೈಸಿಗಳು ಸೇರಿ ಗರಿಷ್ಠ 90 ಆಟಗಾರ್ತಿಯರನ್ನು ಖರೀದಿಸಲಿವೆ. ಇದರಲ್ಲಿ 30 ಸ್ಥಾನಗಳು ವಿದೇಶಿ ಆಟಗಾರ್ತಿಯರಿಗೆ ಮೀಸಲಿವೆ. 246 ಭಾರತೀಯ ಆಟಗಾರ್ತಿಯರು ಹಾಗೂ 163 ವಿದೇಶಿ ಆಟಗಾರ್ತಿಯರು ಕಣದಲ್ಲಿದ್ದಾರೆ. ಪ್ರತಿ ತಂಡವು ₹ 12 ಕೋಟಿ ಪರ್ಸ್ ಸಾಮರ್ಥ್ಯ ಹೊಂದಿವೆ. ಮಾರ್ಚ್ 4 ರಿಂದ 26ರವರೆಗೆ ಡಬ್ಲ್ಯುಪಿಎಲ್ ನಡೆಯಲಿದೆ.



ಪ್ರೈಮ್ ವಾಲಿಬಾಲ್ ಲೀಗ್ ಟೂರ್ನಿಯ ಪಂದ್ಯದಲ್ಲಿ ಕೊಚ್ಚಿ ಬ್ಲೂ ಸ್ಪೈಕರ್ಸ್ ತಂಡದ ಜೆಬಿನ್ ಅವರ ಸ್ಮ್ಯಾಷ್ ಅನ್ನು ಎದುರಾಳಿ ತಂಡದ ಸೀತಾರಾಮ ಮತ್ತು ಮೊಯೋ ತಡೆಯುವ ಪ್ರಯತ್ನ ಮಾಡಿದರು. ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ವಾಲಿಬಾಲ್: ಚೆನ್ನೈ ಬ್ಲಿಟ್ಜ್‌ಗೆ ಗೆಲುವು

ಬೆಂಗಳೂರು: ಸೊಗಸಾದ ಪ್ರದರ್ಶನ ನೀಡಿದ ಚೆನ್ನೈ ಬ್ಲಿಟ್ಜ್ ತಂಡದವರು ಪ್ರೈಮ್ ವಾಲಿಬಾಲ್ ಲೀಗ್ ಟೂರ್ನಿಯಲ್ಲಿ ಗೆಲುವು ಪಡೆದರು.

ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಚೆನ್ನೈ ತಂಡ 3–2 ರಲ್ಲಿ ಕೊಚ್ಚಿ ಬ್ಲೂ ಸ್ಪೈಕರ್ಸ್ ತಂಡವನ್ನು ಮಣಿಸಿತು.

ಮೊದಲ ಸೆಟ್‌ಅನ್ನು 15–9 ರಲ್ಲಿ ಗೆದ್ದ ಚೆನ್ನೈ ಉತ್ತಮ ಆರಂಭ ಪಡೆಯಿತು. ಎರಡನೇ ಸೆಟ್‌ಅನ್ನು ಕೊಚ್ಚಿ 15–11 ರಲ್ಲಿ ಜಯಿಸಿತು. ಮೂರನೇ ಸೆಟ್ ಚೆನ್ನೈ (15–10) ಗೆದ್ದರೆ, ನಾಲ್ಕನೇ ಸೆಟ್‌ನಲ್ಲಿ (8–15) ಸೋಲನುಭವಿಸಿತು. ಇದರಿಂದ ಪಂದ್ಯದಲ್ಲಿ 2–2 ಸಮಬಲ ಕಂಡುಬಂತು.

ನಿರ್ಣಾಯಕ ಸೆಟ್‌ನಲ್ಲಿ ಶಿಸ್ತಿನ ಆಟವಾಡಿದ ಚೆನ್ನೈ 15–8 ರಲ್ಲಿ ಗೆದ್ದು ಲೀಗ್‌ನಲ್ಲಿ ಶುಭಾರಂಭ ಮಾಡಿತು. ನವೀನ್ ರಾಜಾ ಜೇಕಬ್ ಅವರು ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಇಂದಿನ ಪಂದ್ಯ: ಕೋಲ್ಕತ್ತ ಥಂಡರ್‌ಬೋಲ್ಟ್ಸ್– ಹೈದರಾಬಾದ್ ಬ್ಲ್ಯಾಕ್‌ಹಾಕ್ಸ್ (ಆರಂಭ: ಸಂಜೆ 7)

ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ವಿರಮಿಸಿದ ಬ್ಯಾಟರ್

ಆ್ಯರನ್ ಫಿಂಚ್ ನಿವೃತ್ತಿ ನಿರ್ಧಾರ

ಮೆಲ್ಬರ್ನ್ (ಪಿಟಿಐ): ಚುಟುಕು ಕ್ರಿಕೆಟ್‌ನಲ್ಲಿ ಆಸ್ಟ್ರೇಲಿಯಾ ತಂಡದ ಅತ್ಯುತ್ತಮ ಬ್ಯಾಟರ್ ಮತ್ತು ನಾಯಕ ಎನಿಸಿರುವ ಆ್ಯರನ್ ಫಿಂಚ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಮಂಗಳವಾರ ನಿವೃತ್ತಿ ಪ್ರಕಟಿಸಿದ್ದಾರೆ.

ಆಸ್ಟ್ರೇಲಿಯಾದ ಬಿಗ್‌ಬ್ಯಾಷ್ ಲೀಗ್ ಮತ್ತು ಇತರ ದೇಶಗಳಲ್ಲಿ ನಡೆಯುವ ಟಿ20 ಲೀಗ್‌ಗಳಲ್ಲಿ ಇನ್ನಷ್ಟು ವರ್ಷ ಆಟ ಮುಂದುವರಿಸಲು ನಿರ್ಧರಿಸಿದ್ದಾರೆ.

‘ಟಿ20ಯಲ್ಲಿ ನಮಗೆ ವಿಶ್ವಕಪ್ ಗೆದ್ದುಕೊಟ್ಟ ಮತ್ತು ಸುದೀರ್ಘ ಅವಧಿಯವರೆಗೆ ತಂಡವನ್ನು ಮುನ್ನಡೆಸಿದ್ದ ನಾಯಕ ತಮ್ಮ ವೃತ್ತಿಪರ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಪ್ರಕಟಿಸಿದ್ದಾರೆ. ಆ್ಯರನ್ ಫಿಂಚ್ ಅವರಿಗೆ ಧನ್ಯವಾದಗಳು’ ಎಂದು ಕ್ರಿಕೆಟ್ ಆಸ್ಟ್ರೇಲಿಯಾ (ಸಿಎ) ತನ್ನ ಟ್ವಿಟರ್ ಖಾತೆಯಲ್ಲಿ ಪ್ರಕಟಿಸಿದೆ.

ಫಿಂಚ್ ಅವರ ನಿವೃತ್ತಿ ನಿರ್ಧಾರ ನಿರೀಕ್ಷಿತವೇ ಆಗಿತ್ತು. ಐದು ಟೆಸ್ಟ್‌ಗಳಲ್ಲಿ



ಆ್ಯರನ್ ಫಿಂಚ್

ಆಡಿದ್ದ ಅವರಿಗೆ 2018ರ ಬಳಿಕ ಟೆಸ್ಟ್ ತಂಡದಲ್ಲಿ ಸ್ಥಾನ ಲಭಿಸಿರಲಿಲ್ಲ. ಫಾರ್ಮ್ ಕಳೆದುಕೊಂಡ ಕಾರಣ ಕಳೆದ ವರ್ಷ ಏಕದಿನ ಕ್ರಿಕೆಟ್‌ನಿಂದ ನಿವೃತ್ತಿಯಾಗಿದ್ದರು.

ದುಬೈನಲ್ಲಿ 2021 ರಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅವರು ತಂಡವನ್ನು ಟ್ರೋಫಿಯತ್ತ ಮುನ್ನಡೆಸಿದ್ದರು. ಆಸ್ಟ್ರೇಲಿಯಾ ತಂಡ ಫೈನಲ್‌ನಲ್ಲಿ ನ್ಯೂಜಿಲೆಂಡ್ ಎದುರು ಗೆದ್ದಿತ್ತು.

ಆದರೆ ಕಳೆದ ವರ್ಷ ತವರು ನೆಲದಲ್ಲಿ ನಡೆದಿದ್ದ ಚುಟುಕು ಕ್ರಿಕೆಟ್ ವಿಶ್ವಕಪ್‌ನಲ್ಲಿ ಫಿಂಚ್ ನಾಯಕತ್ವದ ತಂಡ ಸೆಮಿಫೈನಲ್ ಪ್ರವೇಶಿಸಲು ವಿಫಲವಾಗಿತ್ತು. ವಿಶ್ವಕಪ್‌ನಲ್ಲಿ ಐರ್ಲೆಂಡ್ ವಿರುದ್ಧದ ಪಂದ್ಯವೇ ಅವರ ಕೊನೆಯ ಅಂತರರಾಷ್ಟ್ರೀಯ ಪಂದ್ಯ ಎನಿಸಿದೆ. ಆ ಪಂದ್ಯದಲ್ಲಿ 63 ರನ್ ಗಳಿಸಿದ್ದ ಅವರು ತಂಡಕ್ಕೆ 42 ರನ್‌ಗಳ ಗೆಲುವು ತಂದುಕೊಟ್ಟಿದ್ದರು.

‘2024ರಲ್ಲಿ ನಡೆಯುವ ಟಿ20 ವಿಶ್ವಕಪ್‌ವರೆಗೆ ನನಗೆ ಆಡಲು ಸಾಧ್ಯವಿಲ್ಲ ಎಂಬುದನ್ನು ಮನಗಂಡು ನಿವೃತ್ತಿ ನಿರ್ಧಾರ ತೆಗೆದುಕೊಂಡಿದ್ದೇನೆ’ ಎಂದು ಅವರು ಸುದ್ದಿಗಾರರಲ್ಲಿ ತಿಳಿಸಿದರು.

ಕ್ರಿಕೆಟ್‌ನ ಮೂರು ಮಾದರಿಗಳಲ್ಲಿ ಒಟ್ಟು 254 ಅಂತರರಾಷ್ಟ್ರೀಯ ಪಂದ್ಯಗಳನ್ನಾಡಿರುವ ಫಿಂಚ್, 8,804 ರನ್ ಪೇರಿಸಿದ್ದಾರೆ. ಏಕದಿನ ಕ್ರಿಕೆಟ್‌ನಲ್ಲಿ 17 ಮತ್ತು ಟಿ20ಯಲ್ಲಿ ಎರಡು ಶತಕಗಳನ್ನು ಗಳಿಸಿದ್ದಾರೆ. ಅವರು 76 ಟಿ20 ಮತ್ತು 55 ಏಕದಿನ ಪಂದ್ಯಗಳಲ್ಲಿ ತಂಡವನ್ನು ಮುನ್ನಡೆಸಿದ್ದಾರೆ.

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಸಾಧನೆ

ಮಾದರಿ	ಪಂದ್ಯ	ಇನಿಂಗ್ಸ್	ರನ್	ಗರಿಷ್ಠ	ಶತಕ
ಟೆಸ್ಟ್	5	10	278	62	0
ಏಕದಿನ	146	142	5,406	153	17
ಟಿ20	103	103	3,120	172	2

ಸಂಕ್ಷಿಪ್ತ ಸುದ್ದಿ

ಸ್ಯಾಫ್: ನೇಪಾಳಕ್ಕೆ ಮಣಿದ ಭಾರತ

ಢಾಕಾ (ಪಿಟಿಐ): ಭಾರತ ತಂಡದವರು ಸ್ಯಾಫ್ 20 ವರ್ಷದೊಳಗಿನ ಮಹಿಳೆಯರ ಫುಟ್‌ಬಾಲ್ ಟೂರ್ನಿಯಲ್ಲಿ ನೇಪಾಳ ಎದುರು ನಿರಾಸೆ ಅನುಭವಿಸಿದರು.

ಇಲ್ಲಿನ ಮುಸ್ತಫಾ ಕಮಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ 3–1 ರಲ್ಲಿ ಗೆದ್ದ ನೇಪಾಳ, ಫೈನಲ್ ಪ್ರವೇಶಿಸಿತು.

ಅಪೂರ್ಣ ನರ್ಜರಿ ಅವರು 21ನೇ ನಿಮಿಷದಲ್ಲಿ ಭಾರತ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಮರುಹೋರಾಟ ನಡೆಸಿದ ನೇಪಾಳ ತಂಡ ಅಂಜಲಿ ಚಾಂದ್ (48), ಪ್ರೀತಿ ರಾಯ್ (69) ಮತ್ತು ಅಮಿಷಾ ಕರ್ಕಿ (89) ಅವರ ಗೋಲುಗಳ ನೆರವಿನಿಂದ ಗೆಲುವು ಒಲಿಸಿಕೊಂಡಿತು.

ಮೂರು ಪಂದ್ಯಗಳಿಂದ ನಾಲ್ಕು ಪಾಯಿಂಟ್ಸ್ ಹೊಂದಿರುವ ಭಾರತ ತಂಡದ ಫೈನಲ್ ಪ್ರವೇಶದ ಸಾಧ್ಯತೆ ಕ್ಷೀಣಿಸಿದೆ.

ಹಾಕಿ: ರೇನ್‌ಬೋ ಗೆಲುವಿನ ಓಟ

ಬೆಂಗಳೂರು: ರೇನ್‌ಬೋ ಹಾಕಿ ಕ್ಲಬ್ ತಂಡದವರು ಕೆಎಸ್‌ಎಚ್‌ಎ ಸೂಪರ್ ಡಿವಿಷನ್ ಹಾಕಿ ಲೀಗ್‌ನಲ್ಲಿ ಗೆಲುವಿನ ಓಟ ಮುಂದುವರಿಸಿದ್ದಾರೆ.

ಮಂಗಳವಾರ ನಡೆದ ಪಂದ್ಯದಲ್ಲಿ ರೇನ್‌ಬೋ 4–2 ಗೋಲುಗಳಿಂದ ಎಎಫ್‌ಎಚ್‌ಎ ತಂಡವನ್ನು ಮಣಿಸಿತು. ತಂಡಕ್ಕೆ ದೊರೆತ ಸತತ ನಾಲ್ಕನೇ ಗೆಲುವು ಇದಾಗಿದೆ.

ಬಾಬು ಖನ್ನಾ (10ನೇ ನಿ.), ಎಂ.ಕರ್ಣ ಶಿವ (17), ಎಂ.ಕಾರ್ತಿಕ್ (33) ಮತ್ತು ಬಿ.ಮಾಗೇಶ್ (35) ಅವರು ವಿಜಯಿ ತಂಡದ ಪರ ಗೋಲು ಗಳಿಸಿದರು.

ಜೆಎಫ್‌ಎಚ್‌ಎ ತಂಡಕ್ಕೆ ದೀಪೇಂದರ್ (25) ಮತ್ತು ಅರವಿಂದ್ ರಾಜ್ (44) ಅವರು ಚೆಂಡನ್ನು ಗುರಿ ಸೇರಿಸಿದರು.

ಇನ್ನೊಂದು ಪಂದ್ಯದಲ್ಲಿ ಮೆಟ್ರೊ ಹಾಕಿ ಕ್ಲಬ್ 2–1 ಗೋಲುಗಳಿಂದ ಶ್ಲೋಕ್ ಹಾಕಿ ಕ್ಲಬ್ ತಂಡವನ್ನು ಪರಾಭವಗೊಳಿಸಿತು.

ಕೊಲೆ ಪ್ರಕರಣ: ಐವರು ರಗ್ಬಿ ಆಟಗಾರರಿಗೆ ಶಿಕ್ಷೆ

ಡೊಲೊರ್ಸ್, ಅರ್ಜೆಂಟೀನಾ (ಎಎಫ್‌ಪಿ): ಬಾಲಕನೊಬ್ಬನನ್ನು ಜನಾಂಗೀಯವಾಗಿ ನಿಂದಿಸಿ ನಂತರ ಥಳಿಸಿ ಕೊಲೆ ಮಾಡಿದ ಪ್ರಕರಣದಲ್ಲಿ ಐವರು ರಗ್ಬಿ ಆಟಗಾರರಿಗೆ ಅರ್ಜೆಂಟಿನಾದ ನ್ಯಾಯಾಲಯವು ಜೀವಾವಧಿ ಶಿಕ್ಷೆ ನೀಡಿದೆ.

ಪ್ರಕರಣಕ್ಕೆ ಸಂಬಂಧಿಸಿದ ಇನ್ನೂ ಮೂವರಿಗೆ 15 ವರ್ಷಗಳ ಜೈಲು ಶಿಕ್ಷೆ ನೀಡಲಾಗಿದೆ.

ಮೂರು ವರ್ಷಗಳ ಹಿಂದೆ ಪರುಗ್ವೆಯಿಂದ ವಲಸೆ ಬಂದಿದ್ದ ಕುಟುಂಬದ ಹುಡುಗ ಫರ್ನಾಂಡೊ ಬೇಜ್ ಸೊಸಾ ಎಂಬಾತನನ್ನು ಡಿಸ್ಕೋ ಸಮೀಪ ಥಳಿಸಿ ಕೊಲೆ ಮಾಡಲಾಗಿತ್ತು.

ಜನಾಂಗೀಯ ದ್ವೇಷದ ಹಿನ್ನೆಲೆಯಲ್ಲಿ ನಡೆದಿದ್ದ ಈ ಪ್ರಕರಣವು ಇಡೀ ದೇಶದ ಗಮನ ಸೆಳೆದಿತ್ತು. ನಾಲ್ಕು ವಾರಗಳಿಂದ ವಿಚಾರಣೆ ನಡೆಸಿದ್ದ ನ್ಯಾಯಾಲಯವು ತೀರ್ಪು ನೀಡಿದೆ. ಈ ಐವರೂ ಅಮೇಚೂರ್ ಆಟಗಾರರಾಗಿದ್ದಾರೆ.

ಕಮ್ರನ್ ನಿವೃತ್ತಿ

ಕರಾಚಿ (ಪಿಟಿಐ): ಪಾಕಿಸ್ತಾನ ಕ್ರಿಕೆಟ್ ತಂಡದ ವಿಕೆಟ್‌ಕೀಪರ್ ಬ್ಯಾಟರ್ ಕಮ್ರನ್ ಅಕ್ಮಲ್ ಅವರು ಕ್ರಿಕೆಟ್‌ನ ಎಲ್ಲ ಮಾದರಿಗಳಿಗೆ ಮಂಗಳವಾರ ನಿವೃತ್ತಿ ಪ್ರಕಟಿಸಿದರು.

ಅಕ್ಮಲ್ ಅವರನ್ನು ಪಿಸಿಬಿ ರಾಷ್ಟ್ರೀಯ ಆಯ್ಕೆ ಸಮಿತಿ ಸದಸ್ಯರಾಗಿ ನೇಮಕ ಮಾಡಲಾಗಿತ್ತು. ಅದರ ಬೆನ್ನಲ್ಲೇ ನಿವೃತ್ತಿ ಪ್ರಕಟಿಸಿದ್ದಾರೆ.

ಎರಡು ದೇಶಗಳ ಪರ ಶತಕ: ಗ್ಯಾರಿ ಬ್ಯಾಲನ್ಸ್ ಸಾಧನೆ

ಬುಲವಾಯೊ, ಜಿಂಬಾಬ್ವೆ (ಎಎಫ್‌ಪಿ): ಗ್ಯಾರಿ ಬ್ಯಾಲನ್ಸ್ ಅವರು ಅಂತರರಾಷ್ಟ್ರೀಯ ಟೆಸ್ಟ್ ಕ್ರಿಕೆಟ್‌ನಲ್ಲಿ ಎರಡು ದೇಶಗಳ ಪರ ಶತಕ ಗಳಿಸಿದ ವಿಶ್ವದ ಎರಡನೇ ಬ್ಯಾಟರ್ ಎಂಬ ಗೌರವ ಪಡೆದುಕೊಂಡರು.

ಜಿಂಬಾಬ್ವೆ ತಂಡದ ಬ್ಯಾಲನ್ಸ್ ಅವರು ವೆಸ್ಟ್ ಇಂಡೀಸ್ ವಿರುದ್ಧ ಇಲ್ಲಿ ನಡೆಯುತ್ತಿರುವ ಪಂದ್ಯದ ನಾಲ್ಕನೇ ದಿನವಾದ ಮಂಗಳವಾರ ಶತಕ (ಅಜೇಯ 137 ರನ್) ಪೂರೈಸಿದರು. ಹರಾರೆಯಲ್ಲಿ ಹುಟ್ಟಿದ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ಇಂಗ್ಲೆಂಡ್ ತಂಡದ ಪರ ನಾಲ್ಕು ಶತಕ ಗಳಿಸಿದ್ದರು. ಇಂಗ್ಲೆಂಡ್ ತಂಡ ತೊರೆದು, ಈ ಪಂದ್ಯದ ಮೂಲಕ ಜಿಂಬಾಬ್ವೆ ಪರ ಚೊಚ್ಚಲ ಟೆಸ್ಟ್ ಆಡಿದ್ದಾರೆ.

ಕೆಪ್ಲರ್ ವೆಸೆಲ್ಸ್ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ಎರಡು ದೇಶಗಳ ಪರ ಶತಕ ಗಳಿಸಿದ ಇನ್ನೊಬ್ಬ ಆಟಗಾರ. ದಕ್ಷಿಣ ಆಫ್ರಿಕಾದಲ್ಲಿ ಹುಟ್ಟಿದ್ದ ಅವರು ಆಸ್ಟ್ರೇಲಿಯಾ ಪರ ನಾಲ್ಕು ಶತಕ ಗಳಿಸಿದ್ದಾರೆ. ಆ ಬಳಿಕ ತವರು ದೇಶ ದಕ್ಷಿಣ ಆಫ್ರಿಕಾ ಪರ ಆಡಿ ಎರಡು ಶತಕ ಗಳಿಸಿದ್ದಾರೆ.

ಜಿಂಬಾಬ್ವೆ ತಂಡ 9 ವಿಕೆಟ್‌ಗಳಿಗೆ 379 ರನ್ ಗಳಿಸಿ ಮೊದಲ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು.

ಮಹಿಳಾ ಏಕದಿನ ಕ್ರಿಕೆಟ್: ರೈಲ್ವೇಸ್ ಚಾಂಪಿಯನ್

ಫೈನಲ್‌ನಲ್ಲಿ ಎಡವಿದ ಕರ್ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಟಿಂಗ್ ವೈಫಲ್ಯ ಅನುಭವಿಸಿದ ಕರ್ನಾಟಕ ತಂಡದವರು, ಬಿಸಿಸಿಐ ಮಹಿಳಾ ಏಕದಿನ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಎಡವಿದರು.

ರಾಂಚಿಯ ಜೆಎಸ್‌ಸಿಎ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಕರ್ನಾಟಕ ತಂಡವನ್ನು 4 ವಿಕೆಟ್‌ಗಳಿಂದ ಮಣಿಸಿದ ರೈಲ್ವೇಸ್ ತಂಡ ಕಿರೀಟ ಮುಡಿಗೇರಿಸಿಕೊಂಡಿತು.

ಮೊದಲು ಬ್ಯಾಟ್ ಮಾಡಿದ ಕರ್ನಾಟಕ 49.4 ಓವರ್‌ಗಳಲ್ಲಿ 163 ರನ್‌ಗಳಿಗೆ ಆಲೌಟಾಯಿತು. ಜಿ.ದಿವ್ಯಾ (69 ರನ್) ಅವರನ್ನು ಹೊರತುಪಡಿಸಿದರೆ, ಇತರ ಬ್ಯಾಟರ್‌ಗಳು ವಿಫಲರಾದರು. 116 ಎಸೆತಗಳನ್ನು ಎದುರಿಸಿದ ಅವರು 7 ಬೌಂಡರಿ ಹೊಡೆದರು. ಪ್ರತ್ಯೂಷಾ ಅವರು 21 ರನ್ ಕಲೆಹಾಕಿದರು.

ರೈಲ್ವೇಸ್ ತಂಡದ ತನುಜಾ ಪಿ.ಕನ್ವರ್ 26 ರನ್‌ಗಳಿಗೆ ಮೂರು ವಿಕೆಟ್ ಪಡೆದರು. ಇತರ ಬೌಲರ್‌ಗಳೂ ಅವರಿಗೆ ತಕ್ಕ ಸಾಥ್ ನೀಡಿದರು.

ಸಾಧಾರಣ ಗುರಿ ಬೆನ್ನಟ್ಟಿದ ರೈಲ್ವೇಸ್ ತಂಡ ಆರಂಭದಲ್ಲಿ ಒಂದೆರಡು ವಿಕೆಟ್‌ಗಳನ್ನು ಕಳೆದುಕೊಂಡರೂ ಗೆಲುವಿನತ್ತ ದಿಟ್ಟ ಹೆಜ್ಜೆಯಿಟ್ಟಿತು. ಡಿ.ಹೇಮಲತಾ ಅಜೇಯ 38 ರನ್ ಗಳಿಸಿದರೆ, ಬ್ಯಾಟಿಂಗ್‌ನಲ್ಲೂ ಮಿಂಚಿದ ತನುಜಾ 31 ರನ್ ಕಲೆಹಾಕಿದರು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 49.4 ಓವರ್‌ಗಳಲ್ಲಿ 163 (ಜಿ.ದಿವ್ಯಾ 69, ಸಿ.ಪ್ರತ್ಯೂಷಾ 21, ಪ್ರೀತಿ ಆರ್ ಬೋಸ್ 22ಕ್ಕೆ 2, ಸ್ವಾಗತಿಕಾ ರತ್ 38ಕ್ಕೆ 2, ತನುಜಾ ಪಿ ಕನ್ವರ್ 26ಕ್ಕೆ 3)

ರೈಲ್ವೇಸ್: 47.3 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 169 (ರೇಣುಕಾ ಚೌಧರಿ 20, ಮೋನಾ 29, ಟಿ.ಸರ್ಕಾರ್ 25, ಡಿ.ಹೇಮಲತಾ ಔಟಾಗದೆ 38, ತನುಜಾ ಕನ್ವರ್ 31, ಶ್ರೇಯಾಂಕಾ ಆರ್.ಪಾಟೀಲ್ 45ಕ್ಕೆ 3) ಫಲಿತಾಂಶ: ರೈಲ್ವೇಸ್ ತಂಡಕ್ಕೆ ನಾಲ್ಕು ವಿಕೆಟ್‌ಗಳ ಗೆಲುವು

ಭೂಕಂಪ: ಘಾನಾ ಫುಟ್‌ಬಾಲ್ ಆಟಗಾರನ ರಕ್ಷಣೆ

ಅಂಕಾರಾ, ಟರ್ಕಿ (ರಾಯಿಟರ್ಸ್): ಟರ್ಕಿಯಲ್ಲಿ ಸಂಭವಿಸಿದ ಭೂಕಂಪದಿಂದ ಕುಸಿದ ಕಟ್ಟಡದ ಅವಶೇಷಗಳಡಿ ಸಿಲುಕಿದ್ದ ಘಾನಾದ ಫುಟ್‌ಬಾಲ್ ಆಟಗಾರ ಕ್ರಿಸ್ಟಿಯನ್ ಅಟ್ಸು ಅವರನ್ನು ಮಂಗಳವಾರ ರಕ್ಷಿಸಲಾಗಿದೆ.

ಘಾನಾ ರಾಷ್ಟ್ರೀಯ ತಂಡಕ್ಕೆ ಆಡಿದ್ದ 31 ವರ್ಷದ ಅಟ್ಸು, ಟರ್ಕಿಯ ಹತಾಯ್‌ಸ್ಪರ್ ತಂಡವನ್ನು ಪ್ರತಿನಿಧಿಸುತ್ತಿದ್ದಾರೆ. ಹತಾಯ್ ಪ್ರಾಂತ್ಯದಲ್ಲಿದ್ದ ಅವರು ಸೋಮವಾರ ಸಂಭವಿಸಿದ್ದ ಭೂಕಂಪದ ಬಳಿಕ ನಾಪತ್ತೆಯಾಗಿದ್ದರು.



ಅಟ್ಸು

‘ಕಟ್ಟಡದ ಅವಶೇಷಗಳಡಿ ಸಿಲುಕಿದ್ದ ಅಟ್ಸು ಅವರನ್ನು ಗಾಯಗಳೊಂದಿಗೆ ರಕ್ಷಿಸಲಾಗಿದೆ. ಕ್ಲಬ್‌ನ ಸ್ಪೋರ್ಟಿಂಗ್ ಡೈರೆಕ್ಟರ್ ತನೆರ್ ಸವುತ್ ಅವರು ಇನ್ನೂ ಅವಶೇಷಗಳಡಿ ಸಿಲುಕಿದ್ದಾರೆ’ ಎಂದು ಕ್ಲಬ್‌ನ ಉಪಾಧ್ಯಕ್ಷ ಮುಸ್ತಫಾ ಒಜತ್ ಹೇಳಿದ್ದಾರೆ.

ಇಂಗ್ಲಿಷ್ ಪ್ರೀಮಿಯರ್ ಲೀಗ್‌ನಲ್ಲಿ ನ್ಯೂಕ್ಯಾಸಲ್ ಯುನೈಟೆಡ್ ಮತ್ತು ಎವರ್ಟನ್ ಪರ ಆಡಿದ್ದ ಅಟ್ಸು, ಕಳೆದ ಸೆಪ್ಟೆಂಬರ್‌ನಲ್ಲಿ ಟರ್ಕಿಯ ಕ್ಲಬ್ ಸೇರಿದ್ದರು. ಅವರು ಘಾನಾ ಪರ 2019 ರಲ್ಲಿ ಕೊನೆಯ ಅಂತರರಾಷ್ಟ್ರೀಯ ಪಂದ್ಯ ಆಡಿದ್ದರು.

ಟರ್ಕಿಯ ಸೆಕೆಂಡ್ ಡಿವಿಷನ್ ಕ್ಲಬ್ ಯೆನಿ ಮಲಾತ್ಯಸ್ಪರ್‌ನ ಗೋಲ್‌ಕೀಪರ್ ಅಹ್ಮೆತ್ ಎಯುಪ್ ಟರ್ಕಸ್ಲಾನ್ ಅವರು ಭೂಕಂಪದಲ್ಲಿ ಸಾವನ್ನಪ್ಪಿರುವುದಾಗಿ ಕ್ಲಬ್ ತನ್ನ ಟ್ವಿಟರ್ ಖಾತೆಯಲ್ಲಿ ಖಚಿತಪಡಿಸಿದೆ.

ಅಂಧರ ಕ್ರಿಕೆಟ್: ಪ್ರಕಾಶ್ ದ್ವಿಶತಕ

ಬೆಳಗಾವಿ: ಆರಂಭಿಕ ಬ್ಯಾಟರ್ ಪ್ರಕಾಶ್ ಜಯರಾಮಯ್ಯ ದ್ವಿಶತಕದ ನೆರವಿನಿಂದ ಕರ್ನಾಟಕ ಅಂಧರ ಕ್ರಿಕೆಟ್ ತಂಡವು ಇಲ್ಲಿನ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಮೈದಾನದಲ್ಲಿ ಮಂಗಳವಾರ ನಡೆದ ಪುರುಷರ ರಾಷ್ಟ್ರಮಟ್ಟದ ಅಂಧರ ಟಿ20 ಟೂರ್ನಿಯಲ್ಲಿ ಮಹಾರಾಷ್ಟ್ರ ತಂಡದ ವಿರುದ್ಧ 145 ರನ್‌ಗಳಿಂದ ಜಯಿಸಿತು.

ಟಾಸ್ ಗೆದ್ದ ಕರ್ನಾಟಕ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಪ್ರಕಾಶ್ (ಔಟಾಗದೆ 220 ರನ್, 84 ಎಸೆತ, 47 ಬೌಂಡರಿ) ಅಬ್ಬರದ ಬ್ಯಾಟಿಂಗ್‌ನಿಂದಾಗಿ 20 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 312 ರನ್ ಗಳಿಸಿತು. ಆರ್.ಸುನೀಲ್ (ಔಟಾಗದೆ 46 ರನ್, 16 ಎಸೆತ, 8 ಬೌಂಡರಿ) ಉತ್ತಮ ಆಟವಾಡಿದರು.

ಗುರಿ ಬೆನ್ನಟ್ಟಿದ ಮಹಾರಾಷ್ಟ್ರ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 167 ರನ್ ಕಲೆಹಾಕಿತು. ರೋಹಿತ್ ಭರ್ಗುನೆ(59 ರನ್, 49 ಎಸೆತ, 5 ಬೌಂಡರಿ) ಅರ್ಧಶತಕ ಬಾರಿಸಿದರು.

ಇನ್ನೊಂದ ಪಂದ್ಯದಲ್ಲಿ, ಪಶ್ಚಿಮ ಬಂಗಾಳ ತಂಡ ಉತ್ತರಪ್ರದೇಶ ವಿರುದ್ಧ 7 ವಿಕೆಟ್‌ಗಳ ಅಂತರದಿಂದ ಗೆದ್ದಿತು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 312 (ಪ್ರಕಾಶ್ ಜಯರಾಮಯ್ಯ 220, ಆರ್. ಸುನೀಲ್ 46, ಸ್ವಪ್ನಿಲ್ ವಾಘ್ 47ಕ್ಕೆ1)

ಮಹಾರಾಷ್ಟ್ರ: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 167(ಅಭಿಜಿತ್ ಧೋಬೆ 18, ವಿನೋದ ಮಹಾಲೆ 12, ರೋಹಿತ್ ಭರ್ಗುನೆ ಔಟಾಗದೆ 59, ಪಾಂಡುರಂಗ ಜಂಬೆ 34, ಆರ್. ಸುನೀಲ್ 8ಕ್ಕೆ1, ಎಸ್.ಕೃಷ್ಣಮೂರ್ತಿ 24ಕ್ಕೆ1, ಕೆ.ಎಸ್.ಪುನೀತ್ 9ಕ್ಕೆ1). ಫಲಿತಾಂಶ: ಕರ್ನಾಟಕ ತಂಡಕ್ಕೆ 145 ರನ್‌ಗಳಿಂದ ಜಯ.